ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ



ಸಾಲುಮರದ ತಿಮ್ಮಕ್ಕ ಸಾಲಿನಲ್ಲಿ ನಿಂತರೂ ಬರಿಗೈ

ಸಂಪುಟ 10 | ಸಂಚಿಕೆ 50 ಪುಟ 16 | ಡಿಸೆಂಬರ್ 11, 2016 | ರೂ. 10/-

web: www.janashakthi.co.in | e-mail : js_weekly@yahoo.com



ಸವಾಲುಗಳನ್ನೆದುರಿಸಿ ದಿಕ್ಪಥಗಳನ್ನೇ ಬದಲಿಸಲು ಸಮರಧೀರ ಸಂಘಟನೆ

ಸಿಐಟಿಯು ಸಮ್ಮೇಳನದ ಕರೆ



ಕಣ್ಮರೆಯಾದ ಕ್ರಾಂತಿಕಾರಿ

ಒಂದು ಯುಗ ಅಂತ್ಯಗೊಂಡಿದೆ



ದೇಶದಾದ್ಯಂತ 'ಆಕ್ರೋಶ ದಿನ'

'ಕ್ಯಾಷ್ ಲೆಸ್' ವ್ಯವಸ್ಥೆ: ಒಂದು ಹುಚ್ಚು ಕಲ್ಪನೆ

ಮಹದಾಯಿ: ನೈಜ ಕಾಳಜಿಯ ಬರ

ದಕ್ಷಿಣಾಯನ-ಅಭಿವ್ಯಕ್ತಿ: ಹಗಲುಗಳು ಬಂದೇ ಬರುತ್ತವೆ

ಬೆಂಗಳೂರಿನಲ್ಲಿ ಬೃಹತ್ ಸ್ವಾಭಿಮಾನಿ ರ್‍ಯಾಲಿ



ಫಿಡೆಲ್ ಕಾಸ್ಟ್ರೊ ಇನ್ನಿಲ್ಲ: ಒಂದು ಯುಗ ಅಂತ್ಯಗೊಂಡಿದೆ

ಮಹಾದಂಡನಾಯಕ ಫಿಡೆಲ್ ರೂಝ್ ಕಾಸ್ಟ್ರೊ, ಕ್ಯೂಬಾ ಕ್ರಾಂತಿಯ ಮಹಾನ್ ನೇತಾರ, ಕಟ್ಟಾ ಅಂತರ್ರಾಷ್ಟ್ರೀಯವಾದಿ ಮತ್ತು ಸಮಾಜವಾದದ ಶಿಲ್ಪಿ ಇನ್ನಿಲ್ಲ.

20ನೇ ಶತಮಾನದ ಉತ್ತರಾರ್ಧದಲ್ಲಿ ಕ್ರಾಂತಿಕಾರಿ ಆಂದೋಲನಗಳನ್ನು ರೂಪಿಸಲು ಎಷ್ಟೊಂದು ಕೆಲಸ ಮಾಡಿದ ಅತ್ಯುನ್ನತ ಕ್ರಾಂತಿಕಾರಿ ವ್ಯಕ್ತಿತ್ವ ಅವರದ್ದು ಎಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಪೊಲಿಟ್‌ಬ್ಯುರೊ ತನ್ನ ಗೌರವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸಿದೆ.

ಫಿಡೆಲ್ ಕಾಸ್ಟ್ರೊ ಕ್ಯೂಬಾದ ಅಸಹ್ಯ ಬಾತಿಸ್ತಾ ಆಳ್ವಿಕೆಯ ವಿರುದ್ಧ ಕ್ರಾಂತಿಕಾರಿ ಬಂಡಾಯಕ್ಕೆ ಉಜ್ವಲ ನೇತೃತ್ವ ನೀಡಿದವರು. 1959ರಲ್ಲಿ ಯಶಸ್ವಿಯಾದ ಕೂಬಾ ಕ್ರಾಂತಿ ಪಶ್ಚಿಮ ಗೋಳಾರ್ಧದಲ್ಲಿನ ಮೊದಲ ಸಮಾಜವಾದಿ ಕ್ರಾಂತಿಯಾಗಿ ಪರಿಣಮಿಸಿತು. ಅವರ ಕ್ರಿಯಾಶೀಲ ನೇತೃತ್ವದಲ್ಲಿ ಕ್ಯೂಬ ಅರೆ-ವಸಾಹತುಶಾಹಿ ಮತ್ತು ಗುಲಾಮಿಕೆಯಿಂದ ಹೊರಬಂದು, ಸಾಮಾಜಿಕವಾಗಿ ನ್ಯಾಯಯುತವಾದ, ಸಾರ್ವತ್ರಿಕ ಶಿಕ್ಷಣ, ಆರೋಗ್ಯ, ಆಹಾರ ಪೂರೈಕೆ, ಮಹಿಳಾ ಹಕ್ಕುಗಳು ಮತ್ತು ಜನಾಂಗೀಯ ಸಮಾನತೆಯತ್ತ ದಾಪುಗಾಲುಗಳನ್ನಿಡುವ ಒಂದು ಸಮಾಜವನ್ನು ಕಟ್ಟಲು ಮುನ್ನಡೆಯಿತು.

ಕ್ಯೂಬಾದ ಪ್ರಭುತ್ವದ ಅಧ್ಯಕ್ಷರಾಗಿ, ಕ್ಯೂಬ ಕಮ್ಯುನಿಸ್ಟ್ ಪಕ್ಷದ ಪ್ರಥಮ ಕಾರ್ಯದರ್ಶಿಯಾಗಿ ಫಿಡೆಲ್ ಕಾಸ್ಟ್ರೊ ಈ ಕ್ರಾಂತಿಕಾರಿ ಪರಿವರ್ತನೆಗೆ ನೇತೃತ್ವ ನೀಡಿದರು.

ಕೆಚ್ಚೆದೆಯ ಕ್ರಾಂತಿಕಾರಿ ಫಿಡೆಲ್ ಕಾಸ್ಟ್ರೊ, ಕೇವಲ 90 ಮೈಲಿ ದೂರದಲ್ಲಿರುವ ಜಗತ್ತಿನ ಅತ್ಯಂತ ದೊಡ್ಡ ಸಾಮ್ರಾಜ್ಯಶಾಹಿ ಶಕ್ತಿಯಾದ, ಅಮೆರಿಕ ಸಂಯುಕ್ತ ಸಂಸ್ಥಾನಗಳ ಕ್ರೋಧಕ್ಕೆ ಗುರಿಯಾಗಿದ್ದರು. ಐದು ದಶಕಗಳ ಕಾಲ ಅವರು, ಸಮಾಜವಾದಿ ಕ್ಯೂಬವನ್ನು ನಾಶಗೊಳಿಸುವ, ಅವರನ್ನು ವೈಯಕ್ತಿಕವಾಗಿ ಮುಗಿಸಿಬಿಡುವ ಪ್ರಯತ್ನಗಳೂ ಸೇರಿದಂತೆ ಹಲವಾರು ಪಿತೂರಿಗಳ ವಿರುದ್ಧ ಹೋರಾಡುತ್ತಲೇ ಕ್ಯೂಬಕ್ಕೆ ನೇತೃತ್ವ ನೀಡಿದರು. ಕ್ಯೂಬ ಈಗಲೂ ಅಮೆರಿಕ ಸಂಯುಕ್ತ ಸಂಸ್ಥಾನ ಹೇರಿರುವ ಆರ್ಥಿಕ ನಿರ್ಬಂಧದ ವಿರುದ್ಧ ದಿಟ್ಟತನದಿಂದ ಹೋರಾಡುತ್ತಿದೆ.

ಕ್ಯೂಬಾದ ಕ್ರಾಂತಿ ಲ್ಯಾಟಿನ್ ಅಮೆರಿಕಾದ ಎಲ್ಲ ಕ್ರಾಂತಿಕಾರಿ ಮತ್ತು ಪ್ರಗತಿಶೀಲ ಆಂದೋಲನಗಳಿಗೆ ದಾರಿ ದೀಪವಾಯಿತು, ಅಲ್ಲಿನ ಎಡಶಕ್ತಿಗಳ ಮುನ್ನಡೆಗೆ ಸ್ಫೂರ್ತಿ ತುಂಬಿತು. ಫಿಡೆಲ್ ಕಾಸ್ಟ್ರೊ ಮೂರನೇ ಜಗತ್ತಿನ ದೇಶಗಳಿಗೆ ಒಂದು ಕ್ರಾಂತಿಕಾರಿ ಬಿಂಬವಾದರು, ಹಲವು ಯುವ ಪೀಳಿಗೆಗಳಿಗೆ ಸ್ಫೂರ್ತಿಯ ಚಿಲುಮೆಯಾದರು. ಅಲಿಪ್ತ ಆಂದೋಲನದಲ್ಲಿ ಅವರು ಒಂದು ನೇತೃತ್ವದ ಪಾತ್ರ ವಹಿಸಿದರು.

ಫಿಡೆಲ್ ನೇತೃತ್ವದಲ್ಲಿ ಕ್ಯೂಬಾ ಕ್ರಾಂತಿ ವಹಿಸಿರುವ ಅಂತರ್ರಾಷ್ಟ್ರೀಯವಾದಿ ಪಾತ್ರ ನಿಜಕ್ಕೂ ಅಸಾಧಾರಣವಾದದ್ದು. ಫಿಡೆಲ್ ಕ್ಯೂಬನ್ ಸಶಸ್ತ್ರ ಪಡೆಗಳನ್ನು ಅಂಗೋಲ, ಮೊಝಾಂಬಿಕ್ ಮತ್ತು ದಕ್ಷಿಣ ಆಫ್ರಿಕಾದಲ್ಲಿ ವಸಾಹತುಶಾಹಿ ಮತ್ತು ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟದಲ್ಲಿ ನೆರವಾಗಲು ಕಳಿಸಿದರು. ಅವರ ನೇತೃತ್ವದಲ್ಲಿ ಕ್ಯೂಬ ಡಾಕ್ಟರುಗಳನ್ನು, ಶಿಕ್ಷಕರನ್ನು ಮೂರನೇ ಜಗತ್ತಿನ ವಿವಿಧ ದೇಶಗಳಿಗೆ ಕಳಿಸಿ ಅಂತರ್ರಾಷ್ಟ್ರೀಯ ಸೇವೆ ಒದಗಿಸುವುದನ್ನು ಮುಂದುವರೆಸಿತು.



ದಿಲ್ಲಿಯಲ್ಲಿರುವ ಕ್ಯೂಬ ರಾಯಭಾರಿ ಕಚೇರಿಯಲ್ಲಿ ಶ್ರದ್ಧಾಂಜಲಿ ಪುಸ್ತಕದಲ್ಲಿ ಸಹಿ ಮಾಡುತ್ತಿರುವ ಪ್ರಕಾಶ್ ಕಾರಟ್

ಸಿಪಿಐ(ಎಂ) ಪೊಲಿಟ್‌ಬ್ಯುರೊ ಶ್ರದ್ಧಾಂಜಲಿ

ಫಿಡೆಲ್ ಕಾಸ್ಟ್ರೊ ತಾನೊಬ್ಬ ಮಾರ್ಕ್ಸ್‌ವಾದಿ ಸಿದ್ಧಾಂತ ಮತ್ತು ಆಚರಣೆಯ ಸೃಜನಶೀಲ ಕರ್ತೃ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. 20ನೇ ಶತಮಾನದ ಉತ್ತರಾರ್ಧದಲ್ಲಿ ಅವರು ಸಮಾಜವಾದದ ಅತ್ಯಂತ ಸ್ಫುಟವಾದ ಪ್ರತಿಪಾದಕರಾಗಿ ಮೂಡಿ ಬಂದರು.

ಅವರ ನಿಧನದೊಂದಿಗೆ ಒಂದು ಯುಗ ಅಂತ್ಯಗೊಂಡಿದೆ. ಆದರೆ ಅವರ ಕ್ರಾಂತಿಕಾರಿ ಪರಂಪರೆ ಗಟ್ಟಿಯಾಗಿ ಉಳಿಯುತ್ತದೆ. ಅವರ ಬದುಕು ಮತ್ತು ಮಾದರಿ ಜಗತ್ತಿನಾದ್ಯಂತ ಮುಂಬರುವ ಕಾಲಗಳಲ್ಲಿ ಎಲ್ಲ ಕ್ರಾಂತಿಕಾರಿಗಳು ಮತ್ತು ಪ್ರಗತಿಶೀಲರಿಗೆ ಮುಂದೆಯೂ ಸ್ಫೂರ್ತಿದಾಯಕವಾಗಿರುತ್ತದೆ ಎಂದಿರುವ ಪೊಲಿಟ್‌ಬ್ಯುರೊ ಸಿಪಿಐ(ಎಂ) ತನ್ನ ಕೆಂಬಾವುಟವನ್ನು ಬಾಗಿಸಿ ಶ್ರದ್ಧಾಂಜಲಿ ಅರ್ಪಿಸುತ್ತದೆ ಎಂದು ಹೇಳಿದೆ.

ಹಣಕಾಸು ಮಂತ್ರಿಗಳ ಬಜೆಟ್-ಪೂರ್ವ ಸಮಾಲೋಚನೆ : ನಿರ್ಲಕ್ಷ್ಯ ಸಲ್ಲದು ಎಂದು ಕಾರ್ಮಿಕ ಸಂಘಟನೆಗಳ ಆಗ್ರಹ

ಸಂಪ್ರದಾಯದಂತೆ ಹಣಕಾಸು ಮಂತ್ರಿಗಳು ಕೇಂದ್ರ ಕಾರ್ಮಿಕ ಸಂಘಟನೆಗಳನ್ನು ಬಜೆಟ್-ಪೂರ್ವ ಸಮಾಲೋಚನೆಗೆಂದು ನವಂಬರ್ 19ರಂದು ಕರೆದಿದ್ದರು. ಕಳೆದ ವರ್ಷದ ಇಂತಹ ಸಮಾಲೋಚನೆಗಳಲ್ಲಿ ಕಾರ್ಮಿಕ ಸಂಘಟನೆಗಳು ಒಕ್ಕೊರಲಿನಿಂದ ಮುಂದಿಟ್ಟಿದ್ದ ಯಾವ ಸಲಹೆಗಳನ್ನೂ ಗಮನಕ್ಕೆ ತಗೊಂಡಿರಲಿಲ್ಲ, ಮಾತ್ರವಲ್ಲ, 4.4ಲಕ್ಷ ಕೋಟಿ ರೂ.ಗಳಷ್ಟು ಸಾಮಾಜಿಕ ವಲಯಕ್ಕೆ ಕೊಡಬೇಕಾದ ಹಣದಲ್ಲಿ ಕಡಿತ ಮಾಡಲಾಯಿತು. ಆದ್ದರಿಂದ ಹೊಸ ಪ್ರಶ್ನೆಗಳತ್ತ ಹೋಗದೆ, ಕಾರ್ಮಿಕ ಸಂಘಟನೆಗಳು ಜಂಟಿಯಾಗಿ ಮುಂದಿಟ್ಟಿರುವ 18,000 ರೂ. ಕನಿಷ್ಟ ಕೂಲಿ ಮುಂತಾದ 12 ಅಂಶಗಳ ಬೇಡಿಕೆಗಳನ್ನು ಪುನರುಚ್ಚರಿಸುವ ಒಂದು ಪತ್ರವನ್ನು ಕಾರ್ಮಿಕ ಸಂಘಟನೆಗಳು ಹಣಕಾಸು ಮಂತ್ರಿಗಳಿಗೆ ಸಲ್ಲಿಸಿದವು. ಸ್ವತಃ ಹಣಕಾಸು ಮಂತ್ರಿಗಳ ನೇತೃತ್ವದಲ್ಲಿ ಈ ಬೇಡಿಕೆಗಳ ಬಗ್ಗೆ ಚರ್ಚಿಸಲು ಮಂತ್ರಿಗಳ ಗುಂಪನ್ನು ನೇಮಿಸಿದರೂ ಏನೂ ಮಾಡದ್ದರಿಂದ ಕಾರ್ಮಿಕರು ಅನಿವಾರ್ಯವಾಗಿ ಈ ವರ್ಷವೂ ಸಪ್ಟಂಬರ್ 2ರಂದು ಸಾರ್ವತ್ರಿಕ ಮುಷ್ಕರವನ್ನು ನಡೆಸ ಬೇಕಾಯಿತು. ಅದರ ಯಶಸ್ಸಿನ ನಂತರವೂ ಈ ಮಂತ್ರಿಗಳ ಗುಂಪು ಇದುವರೆಗೂ ಯಾವುದೇ ಮಾತುಕತೆಯನ್ನು ಆರಂಭಿಸಿಲ್ಲ ಎಂಬುದನ್ನು ಹಣಕಾಸು ಮಂತ್ರಿಗಳ ಗಮನಕ್ಕೆ ತರಲಾಯಿತು.

500 ಮತ್ತು 1000 ರೂಪಾಯಿ ನೋಟುಗಳನ್ನು ಹಿಂತೆಗೆದುಕೊಂಡ ಕ್ರಮದಿಂದಾಗಿ ಜನಸಾಮಾನ್ಯರಿಗಾಗಿರುವ ತೊಂದರೆಗಳ ಬಗ್ಗೆ ಆಳವಾದ ಆತಂಕಗಳನ್ನು ವ್ಯಕ್ತಪಡಿಸಿದ ಕಾರ್ಮಿಕ ಪ್ರತಿನಿಧಿಗಳು ಅವನ್ನು ನಿವಾರಿಸಲು ತುರ್ತು ಕ್ರಮಗಳನ್ನು ಕೈಗೊಳ್ಳಬೇಕೆಂದು ಆಗ್ರಹಿಸಿದವು.

ವಿದೇಶಿ ಹೂಡಿಕೆಗಳ ಮೇಲೆಯೇ ವಿಪರೀತ ಅವಲಂಬಿಸದೆ ತೆರಿಗೆ ತೆರುವ ಸಾಮರ್ಥ್ಯವಿರುವ ಶ್ರೀಮಂತ ವಿಭಾಗಗಳಿಂದ ಆಂತರಿಕ ಸಂಪನ್ಮೂಲಗಳನ್ನು ಎತ್ತುವುದರ ಮೇಲೆ ಗಮನ ಕೇಂದ್ರೀಕರಿಸಬೇಕು, ದೊಡ್ಡ ಬಂಡವಾಳಗಾರರು ಮತ್ತು ಕಾರ್ಪೊರೇಟ್‌ಗಳು ಉದ್ದೇಶಪೂರ್ವಕವಾಗಿ ತೆರದೇ ಇರುವ ತೆರಿಗೆಗಳ ವಸೂಲಿಗೆ ದೃಢ ಕ್ರಮಗಳನ್ನು ಕೈಗೊಳ್ಳಬೇಕು ಎಂದೂ, ಸಾಮಾಜಿಕ ವಲಯ, ಶಿಕ್ಷಣ, ಆರೋಗ್ಯವಲಯಗಳಿಗೆ ಮಾಡಿರುವ ಕಡಿತಗಳನ್ನು ಭರ್ತಿಮಾಡಿ, ಅವನ್ನು ಹೆಚ್ಚಿಸಬೇಕು ಎಂದೂ ಕಾರ್ಮಿಕ ಸಂಘಟನೆಗಳು ಆಗ್ರಹಿಸಿದವು.

ಈ ಬಾರಿ ಪ್ರತ್ಯೇಕ ರೈಲು ಬಜೆಟ್ ಇರುವುದಿಲ್ಲವಾದ್ದರಿಂದ, ಈ ನಿರ್ಣಾಯಕವಾದ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಹೆಚ್ಚು ಪರಿಣಾಮಕಾರಿ, ಜನಸಾಮಾನ್ಯರಿಗೆ ಲಭ್ಯವಾಗುವಂತೆ, ಕೈಗೆಟಕುವಂತೆ ಮಾಡಲು ಹೆಚ್ಚಿನ ಹಣವನ್ನು ಒದಗಿಸಬೇಕು ಎಂದು ಆಗ್ರಹಿಸಲಾಯಿತು.

ಸಂಬಳದಾರರು ಮತ್ತು ಪೆನ್ಶನ್‌ದಾರರಿಗೆ ಆದಾಯ ತೆರಿಗೆ ಮಿತಿಯನ್ನು 5 ಲಕ್ಷ ರೂ.ಗೆ ಏರಿಸಬೇಕು ಮತ್ತು ಭವಿಷ್ಯನಿಧಿ ಕಾಯ್ದೆಯ ಅಡಿಯಲ್ಲಿ ಗರಿಷ್ಟ ಭವಿಷ್ಯನಿಧಿ ಮೊತ್ತವನ್ನು ಕೇಂದ್ರ ಸರಕಾರೀ ನೌಕರರಿಗೆ ಮಾಡಿರುವಂತೆ 20 ಲಕ್ಷ ರೂ.ಗಳಿಗೆ ಏರಿಸಬೇಕು ಎಂದು ಕಾರ್ಮಿಕ ಸಂಘಟನೆಗಳು ಒತ್ತಾಯಿಸಿವೆ.



ನವಂಬರ್ 28: ದೇಶಾದ್ಯಂತ ಜನಾಕ್ರೋಶ ದಿನ


ಎಳು ಎಡಪಕ್ಷಗಳ ಕರೆಯ ಮೇರೆಗೆ ನವಂಬರ್ 28ರಂದು ದೇಶದ ರಾಜಧಾನಿಯಲ್ಲಿ ಹಲವಾರು ಕಾರ್ಮಿಕರು, ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಸಂಸತ್ತಿನತ್ತ ಮೆರವಣಿಗೆ ನಡೆಸಿದರು. ಹೊಸ ಕರೆನ್ಸಿಗಳ ಪರ್ಯಾಯ ವ್ಯವಸ್ಥೆ ಆಗುವ ವರೆಗೆ ಅಥವ ಕೇಂದ್ರ ಸರಕಾರ ವಿಧಿಸಿರುವ ಡಿಸೆಂಬರ್ 30ರ ವರೆಗೆ ಹಳೆಯ 500 ಮತ್ತು 1000ರೂ.ಗಳ ನೋಟುಗಳನ್ನು ಎಲ್ಲ ವ್ಯವಹಾರಗಳು, ಪಾವತಿಗಳು ಮತ್ತು ಇತ್ಯರ್ಥಗಳಲ್ಲಿ ಬಳಸಲು ಅವಕಾಶ ನೀಡಬೇಕು ಎಂಬುದು ಈ ಪ್ರತಿಭಟನೆಯ ಪ್ರಮುಖ ಬೇಡಿಕೆ.

ರ್‍ಯಾಲಿಯನ್ನು ಉದ್ದೇಶಿಸಿ ಮಾತನಾಡುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿಯವರು ನವಂಬರ್8ರಂದು ಇದ್ದಕ್ಕಿದ್ದಂತೆ ನೋಟುಗಳನ್ನು ಹಿಂತೆಗೆದುಕೊಳ್ಳುವ ಪ್ರಕಟಣೆ ಮಾಡುವಾಗ ಇದು ಭ್ರಷ್ಟಾಚಾರಗಳಿಗೆ, ಕಪ್ಪುಹಣಕ್ಕೆ ಅಂತ್ಯ ಹಾಡುತ್ತದೆ ಎಂದಿದ್ದರು ಎಂದು ನೆನಪಿಸಿದರು. ಆದರೆ ನಕಲಿ ನೋಟುಗಳು ಚಲಾವಣೆಯಲ್ಲಿವೆ ಎಂದು ಹೈದರಾಬಾದ್ ಮತ್ತು ಬೆಂಗಳೂರಿನಿಂದ ವರದಿಯಾಗಿದೆ. 1000ರೂ. ಬದಲು 2000ರೂ. ನೋಟುಗಳನ್ನು ತಂದಿರುವುದರಿಂದ ಈ ನಕಲಿ ನೋಟಿನ ಜಾಲದವರಿಗೆ ಲಾಭ ದುಪ್ಪಟ್ಟಾಗುತ್ತದೆ ಎಂದು ಅವರು ಹೇಳಿದರು. ಈ ಅನಾಣ್ಯೀಕರಣ ಭಯೋತ್ಪಾದನೆಯನ್ನೂ ಕೊನೆಗೊಳಿಸುತ್ತದೆ ಎಂದು ಪ್ರಧಾನಿಗಳು ಹೇಳಿದರು. ಆದರೆ ಭಯೋತ್ಪಾದಕರು ನಗದು ವ್ಯವಹಾರ ನಡೆಸುವ ದಿನಗಳು ಎಂದೋ ಕಳೆದು ಹೋಗಿವೆ, ಅವರು ಇಲೆಕ್ಟ್ರಾನಿಕ್ ವರ್ಗಾವಣೆಯನ್ನು ಬಳಸುತ್ತಿದ್ದಾರೆ. ಅತ್ತ ಬಿಹಾರದಲ್ಲಿ ಮತ್ತು ಇತರ ಹಲವು ಸ್ಥಳಗಳಲ್ಲಿ ಬಿಜೆಪಿ ಮಂದಿ ಈ ಪ್ರಕಟಣೆ ಮಾಡುವ ಸ್ವಲ್ಪವೇ ಮೊದಲು ಭೂಮಿ ಖರೀದಿ ವ್ಯವಹಾರಗಳನ್ನು ನಡೆಸಿದ್ದಾರೆ, ಬ್ಯಾಂಕುಗಳಲ್ಲಿ ಭಾರೀ ಮೊತ್ತಗಳ ಠೇವಣಿ ಇಟ್ಟಿದ್ದಾರೆ. ಇದು ಸರಕಾರದ ಸುಳ್ಳುಗಳನ್ನು ಬಯಲಿಗೆಳೆಯುತ್ತದೆ, ಪ್ರಧಾನಿಗಳ ನಿಕಟವರ್ತಿಗಳಿಗೆ ಇವೆಲ್ಲ ಗೊತ್ತಿತ್ತು ಎಂಬುದನ್ನು ತೋರಿಸುತ್ತದೆ ಎಂದ ಪುಟ 7 ನೋಡಿ

ಮಾತೆಂದರೆ ಇದು

ಅವರು ಸಮಾಜವಾದದ ವೈಫಲ್ಯದ ಬಗ್ಗೆ ಮಾತಾಡುತ್ತಾರೆ. ನಾನು ಅವರನ್ನು ಕೇಳುತ್ತೇನೆ. ಬಂಡವಾಳಶಾಹಿ – ಆಫ್ರಿಕಾದಲ್ಲಿ, ಏಶ್ಯಾದಲ್ಲಿ ಮತ್ತು ಲ್ಯಾಟಿನ್ ಅಮೆರಿಕಾದಲ್ಲಿ – ಎಲ್ಲಿ ಸಫಲವಾಗಿದೆ?

–ಫಿಡೆಲ್ ಕ್ಯಾಸ್ಟ್ರೊ



ಪ್ರಧಾನ ಮಂತ್ರಿಗಳು ವಿಶ್ವಾಸದ್ರೋಹ ಮಾಡಿದ್ದಾರೆ–ಸಿಪಿಐ(ಎಂ)

ಪ್ರಧಾನ ಮಂತ್ರಿಗಳು ನವಂಬರ್ 8ರಂದು ಜನರಿಗೆ ಡಿಸೆಂಬರ್30 ರ ವರೆಗೆ 500 ರೂ. ಮತ್ತು 1000ರೂ. ನೋಟುಗಳನ್ನು ವಿನಿಮಯ ಮಾಡಲು ಬಿಡಲಾಗುವುದು ಎಂದು ಮಾತು ಕೊಟ್ಟಿದ್ದರು. ಆದರೆ ಈಗ ಮೋದಿ ಸರಕಾರ ವಿಶ್ವಾಸದ್ರೋಹ ಮಾಡಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಟೀಕಿಸಿದೆ.

ಪ್ರಧಾನ ಮಂತ್ರಿಗಳು ರಾಷ್ಟ್ರವನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ ಈ ಪ್ರಕಟಣೆ ಮಾಡಿದ್ದರು. ಅಷ್ಟೇ ಅಲ್ಲ, ಹಳೆಯ ನೋಟುಗಳ ವಿನಿಮಯದ ಮಿತಿಗಳನ್ನು 25 ನವಂಬರ್‌ನಿಂದ 30 ಡಿಸೆಂಬರ್ ವರೆಗೆ ಏರಿಸಲಾಗುವುದು ಎಂದೂ ಹೇಳಿದ್ದರು. ರಿಝರ್ವ್ ಬ್ಯಾಂಕ್ ಕೂಡ ನವಂಬರ್11ರ ತನ್ನ ಪತ್ರಿಕಾ ಹೇಳಿಕೆಯಲ್ಲಿ ಹಳೆಯ ನೋಟುಗಳ ವಿನಿಮಯ ಸುಮಾರು 50 ದಿನಗಳ ವರೆಗೆ ಅಂದರೆ ಡಿಸೆಂಬರ್ 30ರ ವರೆಗೆ ಅವಕಾಶ ಲಭ್ಯವಿರುತ್ತದೆ ಎಂದಿತ್ತು.

ಆದರೆ ಈಗ ಸರಕಾರ ತಕ್ಷಣದಿಂದಲೇ ನೋಟುಗಳ ವಿನಿಮಯವನ್ನು ಕೊನೆಗೊಳಿಸುವ ಏಕಪಕ್ಷೀಯ ಪ್ರಕಟಣೆ ಮಾಡಿದೆ. ಇದು ಜನಸಾಮಾನ್ಯರನ್ನು ಇನ್ನಷ್ಟು ತೊಂದರೆಗಳಿಗೆ ಈಡು ಮಾಡುತ್ತದೆ ಮತ್ತು ಬಡ ವಿಭಾಗಗಳ ಸಂಕಟಗಳನ್ನು ಹೆಚ್ಚಿಸುತ್ತದೆ, ಏಕೆಂದರೆ ಅವರಲ್ಲಿ ಬಹಳಷ್ಟು ಮಂದಿಯ ಬಳಿ ಬ್ಯಾಂಕ್ ಖಾತೆಗಳಿಲ್ಲ. ಅವರು ಈಗ ಪಾನ್ ಕಾರ್ಡ್‌ಗಳಿಲ್ಲದೆ ಖಾತೆಗಳನ್ನು ತೆರೆಯುವುದನ್ನು ಕೂಡ ಸರಕಾರ ಅಸಾಧ್ಯಗೊಳಿಸಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ತಮ್ಮದೇ ಹಣದ ಮೇಲೆ ಜನತೆಯ ಹಕ್ಕು ಮತ್ತು ಅದನ್ನು ತಮಗೆ ಸರಿ ಕಂಡಂತೆ ಖರ್ಚು ಮಾಡುವ ಹಕ್ಕಿನ ಮೇಲೆ ಇದೀಗ ಹೊಚ್ಚ ಹೊಸ ಪ್ರಹಾರ ಎಂದು ಬಲವಾಗಿ ಖಂಡಿಸಿದೆ. ಹೊಸ ನೋಟುಗಳ ಪರ್ಯಾಯ ವ್ಯವಸ್ಥೆ ಆಗುವ ವರೆಗೆ ಹಳೆಯ ನೋಟುಗಳಲ್ಲಿ ಎಲ್ಲ ವ್ಯವಹಾರಗಳನ್ನು ನಡೆಸಲು ಅವಕಾಶ ಕೊಡಬೇಕು ಎಂಬ ಬೇಡಿಕೆಯನ್ನು ಅದು ಪುನರುಚ್ಚರಿಸಿದೆ.

ಮಹದಾಯಿ ವಿಶೇಷ ಚರ್ಚೆಯಲ್ಲಿ ನೈಜ ಕಾಳಜಿಯ ಬರ

ಸಂಪಾದಕೀಯ

ಮಹದಾಯಿ ವಿವಾದ ಮತ್ತು ಇದಕ್ಕೆ ಪರಿಹಾರ ಕಂಡುಕೊಳ್ಳುವತ್ತ ಬೆಳಗಾವಿಯಲ್ಲಿ ನಡೆಯುವ ಚಳಿಗಾಲದ ಅಧಿವೇಶನದಲ್ಲಿ ವಿಶೇಷ ಚರ್ಚೆ ಹಮ್ಮಿಕೊಳ್ಳಲಾಗಿತ್ತು. ಮಹದಾಯಿ ವಿವಾದ ಬಗೆಹರಿದು ಕಳಸಾ–ಬಂಡೂರಿ ಕಾಮಗಾರಿಯಾದರೆ ಬೆಳಗಾವಿ, ಧಾರವಾಡ, ಗದಗ ಹಾಗೂ ಬಾಗಲಕೋಟ ಜಿಲ್ಲೆಯ 13 ತಾಲೂಕಿನ ಜನರಿಗೆ ಕುಡಿಯುವ ನೀರು ದೊರಕುತ್ತದೆ. ಆದರೆ ಈ ಚರ್ಚೆಯನ್ನು ಅರ್ಥಪೂರ್ಣಗೊಳಿಸುವ ಹಾಗೂ ತಾರ್ಕಿಕ ಅಂತ್ಯ–ಕ್ಕೆ ಕೊಂಡೊಯ್ಯುವ ನೈಜ ಕಾಳಜಿ ಸದನದಲ್ಲಿ ಇದ್ದಂತೆ ಕಾಣಲಿಲ್ಲ. ಮಹದಾಯಿ ಕುರಿತು ಸಿಎಂ ಸಿದ್ದರಾಮಯ್ಯ ಲಿಖಿತ ಹೇಳಿಕೆ ನೀಡುವಾಗ ಬೆರಳೆಣಿಕೆಯ ಶಾಸಕರಷ್ಟೇ ಇದ್ದರು. ಮಧ್ಯೆ ಶಾಸಕರ ಸಂಖ್ಯೆ (ಸಚಿವರನ್ನೂ ಸೇರಿಸಿ) 44ಕ್ಕೆ ಏರಿತ್ತು. ಆದರೆ ದಿನದ ಕಲಾಪ ಅಂತ್ಯಗೊಳ್ಳುವಾಗ ಬಹುತೇಕ ಆಸನಗಳು ಖಾಲಿಯಾಗಿದ್ದವು. ಉತ್ತರ ಕರ್ನಾಟಕದವರೇ ಹೆಚ್ಚಿನ ಸಂಖ್ಯೆಯಲ್ಲಿ ಗೈರು ಹಾಜರಾಗಿದ್ದರು ಎಂದು ವರದಿಯಾಗಿದೆ. ಇದು ಗಂಭೀರ ವಿಚಾರ.

ಹೆಚ್ಚಿನ ಪ್ರಮುಖರೇ ಗೈರು ಹಾಜರಾಗಿದ್ದರು. ಪ್ರಧಾನ ಪ್ರತಿಪಕ್ಷ ಬಿಜೆಪಿ ಕಡೆ ಮಾಜಿ ಜಲಸಂಪನ್ಮೂಲ ಸಚಿವರೇ ಇರಲಿಲ್ಲ. ಹಾಲಿ ಜಲಸಂಪನ್ಮೂಲ ಸಚಿವ ಎಂ.ಬಿ. ಪಾಟೀಲರು ಕೆಲಹೊತ್ತು ಸದನದಲ್ಲಿದ್ದು ತೆರಳಿದರೆ, ಪ್ರತಿಪಕ್ಷದ ನಾಯಕ ಜಗದೀಶ ಶೆಟ್ಟರ್ ಮಾತನಾಡುವಾಗ ಮುಖ್ಯಮಂತ್ರಿಯವರೂ ಉಪಸ್ಥಿತರಿರಲಿಲ್ಲ. ಎಚ್.ಡಿ.ಕುಮಾರಸ್ವಾಮಿ ಅವರೂ ಇತ್ತ ಸುಳಿಯಲಿಲ್ಲ. ಸಚಿವರಲ್ಲಿ ಹಿರಿಯರಾದ ಎಚ್.ಕೆ. ಪಾಟೀಲ್, ಕಾಗೋಡು ತಿಮ್ಮಪ್ಪ ಮಾತ್ರ ಕೊನೆಯವರೆಗೂ ಸದನದಲ್ಲಿದ್ದರು ಎಂದೂ ವರದಿಯಾಗಿದೆ.

ಕಳಸಾ–ಬಂಡೂರಿ ಹೋರಾಟದ ಬಗ್ಗೆ ಸಾಕಷ್ಟು ಒಳನೋಟಗಳನ್ನು ಶೆಟ್ಟರ್ ಕಟ್ಟಿಕೊಟ್ಟರು. ಇದಕ್ಕೆ ಸಂವೇದಿಯಾಗಿ ಆಡಳಿತಾರೂಢ ಕಾಂಗ್ರೆಸ್ನ ಬಿ.ಆರ್.ಯಾವಗಲ್, ಕೇಂದ್ರ ಜಲ ಆಯೋಗ (ಸಿಡಬ್ಲ್ಯುಸಿ), ರಾಷ್ಟ್ರೀಯ ಪರಿಸರ ತಂತ್ರಜ್ಞಾನ ಸಂಶೋಧನಾ ಸಂಸ್ಥೆಯ (ನೀರಿ) ಅಧ್ಯಯನದ ಬಗ್ಗೆ ಸದನದಲ್ಲಿ ಬೆಳಕು ಚೆಲ್ಲಿದರು. ಆದರೆ ಪರಿಹಾರದ ಬಗ್ಗೆ ಬಂದಾಗ ಮಾಮೂಲಿ ಪಕ್ಷ ರಾಜಕಾರಣದ ಕೆಸರಾಟ ಆರಂಭವಾಯಿತು. ರಾಜ್ಯ ಕಾಂಗ್ರೆಸ್ ನಾಯಕರು ರಾಜ್ಯ ಬಿಜೆಪಿ ನಾಯಕರು ಗೋವಾದ ಬಿಜೆಪಿಯ ಮುಖ್ಯಮಂತ್ರಿ ಮತ್ತು ಸರಕಾರದ ಜತೆ ಸಂಧಾನ ಮಾಡಬೇಕೆಂದೂ, ರಾಜ್ಯ ಬಿಜೆಪಿ ನಾಯಕರು ರಾಜ್ಯ ಕಾಂಗ್ರೆಸ್ ನಾಯಕರು ಗೋವಾದ ವಿರೋಧ ಪಕ್ಷವಾಗಿರುವ ಕಾಂಗ್ರೆಸಿಗರನ್ನು ಒಲಿಸಬೇಕೆಂದು ಪರಸ್ಪರ ಉಚಿತ ಸಲಹೆಗಳನ್ನು ನೀಡಿದರಷ್ಟೇ. ಸಚಿವ ಎಚ್.ಕೆ. ಪಾಟೀಲ್, ಪ್ರಧಾನಿ ಕಡೆಯಿಂದಲೂ ಸಂಧಾನ ಮಾಡಿಸಲು ಶೆಟ್ಟರ್ ಪ್ರಯತ್ನಿಸಬೇಕೆಂದು ಅಪೇಕ್ಷಿಸಿದರು. ಇಷ್ಟಕ್ಕೇ ಕೆರಳಿದ ಮಾಜಿ ಸಚಿವ ವಿಶ್ವೇಶ್ವರ ಹೆಗಡೆ ಕಾಗೇರಿ, ಪ್ರಧಾನಿ ಹೆಸರು ಪ್ರಸ್ತಾಪವಾದದ್ದಕ್ಕೆ ಆಕ್ಷೇಪಿಸಿದರು. ಇದ–ಕ್ಕೆ ಆಡಳಿತ ಪಕ್ಷದವರು ತಕರಾರು ತೆಗೆಯುವುದರೊಂದಿಗೆ ಬಿಜೆಪಿ–ಕಾಂಗ್ರೆಸ್ ನಡುವೆ ಆರೋಪ, ಪ್ರತ್ಯಾರೋಪದ ಸುರಿಮಳೆಯಾಯಿತು ಎಂದೂ ವರದಿಯಾಗಿದೆ.

ಮಹದಾಯಿ ಜಲವಿವಾದ ನ್ಯಾಯಾಧಿಕರಣ (ಟ್ರಿಬ್ಯುನಲ್?) ಇದೇ ಜುಲೈ 27ರಂದು ತೀರ್ಪು ನೀಡಿತ್ತು. ಉತ್ತರ ಕರ್ನಾಟಕದ 4 ಜಿಲ್ಲೆಗಳಲ್ಲಿ ಕುಡಿಯುವ ನೀರಿನ ತೀವ್ರ ಅಭಾವ ನೀಗಿಸಲು 7.5 ಟಿ.ಎಂ.ಸಿ. ನೀರನ್ನು ಕಳಸಾ–ಬಂಡೂರಿ ನಾಲಾಗೆ ಹರಿಸುವ ಈ ಯೋಜನೆಗೆ ಕೊಡಬೇಕೆಂದು ಕರ್ನಾಟಕ ಸರಕಾರದ ಸಲ್ಲಿಸಿದ್ದ ಮಧ್ಯಂತರ ಅರ್ಜಿಯನ್ನು ನ್ಯಾಯಾಧಿಕರಣ ವಜಾ ಮಾಡಿತ್ತು. ರಾಜ್ಯ ಮತ್ತು ಇಡೀ ದೇಶದಲ್ಲೇ ಕುಡಿಯುವ ನೀರಿನ ತೀವ್ರ ಅಭಾವದ ಹಿನ್ನೆಲೆಯಲ್ಲಿ ಕಳಸಾ–ಬಂಡೂರಿ ಯೋಜನೆಗೆ ಅನುಕೂಲಕರ ತೀರ್ಪು ನಿರೀಕ್ಷಿಸಲಾಗಿತ್ತು. ಆದ್ದರಿಂದ ಈ ತೀರ್ಪಿನ ವಿರುದ್ಧ ಉತ್ತರ ಕರ್ನಾಟಕದ 4 ಜಿಲ್ಲೆಗಳಲ್ಲಿ ಮಾತ್ರವಲ್ಲ, ಇದು ರಾಜ್ಯಕ್ಕೆ ಬಗೆದ ಅನ್ಯಾಯ ಎಂದು ಇಡೀ ರಾಜ್ಯದ ತುಂಬಾ ತೀವ್ರ ಆಕ್ರೋಶ ವ್ಯಕ್ತವಾಗಿತ್ತು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು.

ಈ ತೀರ್ಪಿನ ವಿರುದ್ಧ ಉತ್ತರ ಕರ್ನಾಟಕದ 4 ಜಿಲ್ಲೆಗಳಲ್ಲಿ ಮಾತ್ರವಲ್ಲ, ಇದು ರಾಜ್ಯಕ್ಕೆ ಬಗೆದ ಅನ್ಯಾಯ ಎಂದು ಇಡೀ ರಾಜ್ಯದ ತುಂಬಾ ತೀವ್ರ ಆಕ್ರೋಶ ವ್ಯಕ್ತವಾಗಿತ್ತು. ರಾಜಕೀಯ ಪಕ್ಷಗಳು, ರೈತಸಂಘಗಳು, ಕನ್ನಡ–ಪರ ಸಂಘಟನೆಗಳು ತೀವ್ರ ಪ್ರತಿಭಟನೆ ಸಲ್ಲಿಸಿದ್ದು ಬಂದ್ ಮತ್ತು ಚಳುವಳಿಗೆ ಕರೆ ಕೊಟ್ಟಿದ್ದವು. ಈ ಆಕ್ರೋಶಭರಿತ ಚಳುವಳಿಯನ್ನು ಕಾಂಗ್ರೆಸ್ ಸರಕಾರ ನಿಭಾಯಿಸಿದ ರೀತಿಯಂತೂ ಈ ಸರಕಾರದ ಹಿಂದಿನ ಎಲ್ಲಾ ದರ್ಪ–ದಬ್ಬಾಳಿಕೆ, ದೌರ್ಜನ್ಯ ಹಾಗೂ ಉಡಾಫೆತನಗಳ ರೆಕಾರ್ಡನ್ನು ಮುರಿದಿತ್ತು. ಈ ಚಳುವಳಿಯಲ್ಲಿ ಹಿಂಸಾಚಾರದಲ್ಲಿ ತೊಡಗದ ಹಲವು ಅಮಾಯಕರನ್ನು ಬಂಧಿಸಲಾಗಿತ್ತು. ಅವರಲ್ಲಿ ಹಲವರು ಈಗಲೂ ಜೈಲಿನಲ್ಲಿ ಕೊಳೆಯುತ್ತಿದ್ದಾರೆ. ಈ ಬಗ್ಗೆಯೂ ಸರಕಾರ ಯಾವುದೇ ಮುತುವರ್ಜಿ ವಹಿಸಿಲ್ಲ.

ಈ ತೀರ್ಪಿಗೆ ತಕ್ಷಣದ ಪ್ರತಿಕ್ರಿಯೆಯಾಗಿ ರಾಜ್ಯ ಸರಕಾರ ಸುಪ್ರೀಂ ಕೋರ್ಟಿಗೆ ಮೇಲ್ಮನವಿ ಸಲ್ಲಿಸಬೇಕೆಂದು ಸಾರ್ವತ್ರಿಕವಾಗಿ ಅಭಿಪ್ರಾಯ ವ್ಯಕ್ತವಾಗಿತ್ತು. ಆದರೆ ಇದು ನಿಜವಾದ ಪರಿಹಾರವಲ್ಲ. ಮಾತುಕತೆಗಳ ಮೂಲಕವೇ ಅಂತಿಮವಾಗಿ ಈ ಸಮಸ್ಯೆಯನ್ನು ಬಗೆಹರಿಸಬೇಕು ಎಂಬುದರ ಬಗ್ಗೆ ಸಹ ಸಾಕಷ್ಟು ಸಹಮತ ಇತ್ತು. "ಪ್ರಧಾನಿ ಮೋದಿ ಅವರು ಕೂಡಲೇ ಮಧ್ಯಪ್ರವೇಶ ಮಾಡಿ ಸಂಬಂಧಪಟ್ಟ ಗೋವಾ, ಮಹಾರಾಷ್ಟ್ರ ಮತ್ತು ಕರ್ನಾಟಕದ ಮುಖ್ಯಮಂತ್ರಿಗಳ ಸಭೆ ಕರೆದು ನ್ಯಾಯಾಧಿಕರಣದ ಹೊರಗಡೆಯೇ ಪರಿಹಾರ ಕಂಡುಕೊಳ್ಳಬೇಕೆಂದು" ಎಂಬ ಆಗ್ರಹ ರಾಜ್ಯಾದ್ಯಂತ ಕೇಳಿಬಂದಿತ್ತು. ಆದರೆ ಈವರೆಗೂ ಏನೂ ಪ್ರಗತಿ ಆಗಿಲ್ಲ. ಮಧ್ಯೆ ಒಂದು ಬಾರಿ ಮೂರು ಮುಖ್ಯಮಂತ್ರಿಗಳ ಸಭೆಗೆ ದಿನಾಂಕ ನಿಗದಿಯಾಗಿ ಆ ಮೇಲೆ ಮುಂದಕ್ಕೆ ಹೋಗಿದೆ. ಪ್ರಧಾನಿಯವರಂತೂ ವಾರಕ್ಕೊಂದು 'ಸರ್ಜಿಕಲ್ ಸ್ಟ್ರೈಕ್'ನಲ್ಲಿ ಬಿಜಿಯಾಗಿದ್ದು ಇಂತಹ ವಿಷಯಗಳಿಗೆ ಅವರಿಗೆ ಪುರಸೊತ್ತೇ ಇಲ್ಲ. ಕರ್ನಾಟಕದ ಕಾಂಗ್ರೆಸ್–ಬಿಜೆಪಿ ಶಾಸಕರಾಗಲಿ ಸಂಸದರಾಗಲಿ ಪಕ್ಷ ರಾಜಕಾರಣ ಮೀರಿ ಈ ವಿವಾದವನ್ನು ಬಗೆಹರಿಸಲು ಕಿಂಚಿತ್ತೂ ರಾಜಕೀಯ ಇಚ್ಛೆ ತೋರಿಲ್ಲ.

ಇದು ಏಕೆ ಹೀಗೆ? ಆದರೂ ರಾಜ್ಯದ ಪ್ರಮುಖ ಎರಡು ರಾಷ್ಟ್ರೀಯ ಪಕ್ಷಗಳೂ ಮತ್ತು ಪ್ರಾದೇಶಿಕ ಪಕ್ಷ ವಿವಿಧ ಅವಧಿಯಲ್ಲಿ ಕೇಂದ್ರ ಮತ್ತು ಸಂಬಂಧಿತ ರಾಜ್ಯ ಸರಕಾರಗಳಲ್ಲಿ ಅಧಿಕಾರದಲ್ಲಿದ್ದರೂ 15 ವರ್ಷಗಳಿಂದ ವಿವಾದವನ್ನು ಪರಿಹರಿಸಲು ಗಂಭೀರ ಪ್ರಯತ್ನ ಮಾಡಿಲ್ಲ. ಇದಕ್ಕೆ ಕಾರಣವನ್ನು ಇದೇ ಜುಲೈನ ಕರ್ನಾಟಕ ಪ್ರಾಂತ ರೈತ ಸಂಘದ ಹೇಳಿಕೆ ಸರಿಯಾಗಿಯೇ ಗುರುತಿಸಿತ್ತು – "ಕೇಂದ್ರ ಹಾಗೂ ರಾಜ್ಯ ಸರಕಾರಗಳು ಮತ್ತು ಮುಖ್ಯವಾಗಿ, ಕಾಂಗ್ರೆಸ್ ಮತ್ತು ಬಿಜೆಪಿ ರಾಜಕೀಯ ಪಕ್ಷಗಳು ಬಹುರಾಷ್ಟ್ರೀಯ ಸಂಸ್ಥೆಗಳ ಪರವಾದ ಜಾಗತೀಕರಣದ ನೀತಿಗಳನ್ನು ಅನುಸರಿಸುತ್ತಿವೆ. ಹೀಗಾಗಿ ಪ್ರಾಕೃತಿಕ ಸಂಪನ್ಮೂಲಗಳನ್ನು ಬಹುರಾಷ್ಟ್ರೀಯ ಸಂಸ್ಥೆಗಳ ಲೂಟಿಗೆ ಒಳಪಡಿಸುತ್ತಿರುವುದು ಈಗಾಗಲೇ ನಮಗೆಲ್ಲಾ ತಿಳಿದ ವಿಷಯವಾಗಿದೆ. ಪರಿಣಾಮವಾಗಿ, ಹಲವು ರಾಜ್ಯಗಳಲ್ಲಿ ನದಿಗಳನ್ನೇ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ವಹಿಸಿಕೊಡಲಾಗಿದೆ. ಈಗಲೂ ಕುಡಿಯುವ ನೀರಿನ ಮೂಲಗಳು ಮತ್ತು ಕುಡಿಯುವ ನೀರು ಸರಬರಾಜನ್ನು ಬಹುರಾಷ್ಟ್ರೀಯ ಸಂಸ್ಥೆಗಳಿಗೆ ವಹಿಸಿಕೊಡಲು ಕ್ರಮವಹಿಸಲಾಗುತ್ತಿದೆ. ಇಂತಹ ಬಹುರಾಷ್ಟ್ರೀಯ ಸಂಸ್ಥೆಗಳ ಲಾಬಿಗೆ ಮಣಿದ ಈ ಸರಕಾರಗಳು ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲ. ಮೇಲಾಗಿ ಎರಡೂ ಸರಕಾರಗಳಿಗೆ ವ್ಯವಸಾಯವೂ, ರೈತರು ಮತ್ತು ಕೂಲಿಕಾರರು ಹಾಗೂ ಕಸುಬುದಾರರ ಕೈಯಲ್ಲಿ ಉಳಿಯುವುದು ಬೇಕಾಗಿಲ್ಲ. ಈಗಾಗಲೇ ಅವುಗಳು, ವ್ಯವಸಾಯವನ್ನು ಬಹುರಾಷ್ಟ್ರೀಯ ಸಂಸ್ಥೆಗಳಿಗೆ ವಹಿಸಿಕೊಡುವ ಕಂಪೆನಿ ಕೃಷಿಗೆ ಬೇಕಾದ ಕ್ರಮಗಳನ್ನು ಅನುಸರಿಸುತ್ತಿವೆ. ಈ ಕಾರಣಗಳಿಂದಾಗಿಯೇ, ಕೇಂದ್ರದಲ್ಲಿ ಇದುವರೆಗೆ ಯಾವುದೇ ಸರಕಾರ ಅಧಿಕಾರಕ್ಕೆ ಬಂದರೂ ಇದನ್ನು ಮಾತುಕತೆಯ ಮೂಲಕ ಇತ್ಯರ್ಥ ಪಡಿಸಲು ಪ್ರಯತ್ನಿಸುತ್ತಿಲ್ಲ."

ಇದು ನೂರಕ್ಕೆ ನೂರು ನಿಜ ಎಂದು ಈ ಅಧಿವೇಶನದಲ್ಲಿ ನಡೆದ ಚರ್ಚೆಯ ವೈಖರಿಯೇ ರುಜುವಾತು ಮಾಡುತ್ತಿದೆ.

ಕೇಳಿಸಿದ್ದು

"ಈ ಆದೇಶವು ನೋಟುಗಳನ್ನು, ಬ್ಯಾಂಕ್ ಖಾತೆಗಳನ್ನು ಹಾಗೂ ನಂಬಿಕೆಯ ನೆಲೆಯಲ್ಲಿ ನಿಂತಿರುವ ಅರ್ಥವ್ಯವಸ್ಥೆಯನ್ನು ದುರ್ಬಲಗೊಳಿಸುತ್ತದೆ.. .. ವಿಶ್ವಾಸ ಆಧರಿಸಿ ಬೆಳೆದಿರುವ ಅರ್ಥ ವ್ಯವಸ್ಥೆಯ ಪಾಲಿಗೆ ಈ ತೀರ್ಮಾನ ಅನರ್ಥ ತರಲಿದೆ. ಕಳೆದ 20 ವರ್ಷಗಳಿಂದ ಅರ್ಥ ವ್ಯವಸ್ಥೆ ವೇಗವಾಗಿ ಬೆಳೆಯುತ್ತಿತ್ತು. ಇದು ಒಬ್ಬರು ಇನ್ನೊಬ್ಬರ ಮಾತನ್ನು ಒಪ್ಪಿಕೊಳ್ಳುವ ಮೂಲಕ ನಡೆದಿತ್ತು. ನಾವೊಂದು ಭರವಸೆ ನೀಡಿದ್ದೆವು, ಆದರೆ ಆ ಭರವಸೆಯಂತೆ ನಡೆದುಕೊಳ್ಳುವುದಿಲ್ಲ ಎನ್ನುವ ಮೂಲಕ ವ್ಯವಸ್ಥೆಯ ಬುಡಕ್ಕೇ ಏಟು ನೀಡಲಾಗಿದೆ. .. .. ನಾನು ಬಂಡವಾಳಶಾಹಿ ವ್ಯವಸ್ಥೆಯನ್ನು ಅಷ್ಟೇನೂ ಮೆಚ್ಚುವ ವ್ಯಕ್ತಿ ಅಲ್ಲ. ಈ ವ್ಯವಸ್ಥೆ ಹಲವು ಯಶಸ್ಸುಗಳನ್ನು ಕಂಡಿದೆ ಎಂಬುದು ನಿಜ. ಆದರೆ, ನೋಟಿಗೆ ಇಂತಿಷ್ಟು ಬೆಲೆ ಇದೆ ಎಂಬ ಭರವಸೆ ನೀಡಿ, ನಂತರ ಭರವಸೆ ಹಿಂಪಡೆಯುವುದು ನಿರಂಕುಶ ತೀರ್ಮಾನ?

– ಅಮಾರ್ತ್ಯ ಸೆನ್
(ನೊಬೆಲ್ ಪ್ರಶಸ್ತಿ ವಿಜೇತ ಅರ್ಥಶಾಸ್ತ್ರಜ್ಞ)

ನಾಳಿನ ಕಾರ್ಯಕ್ರಮಗಳು :

ಡಿಸೆಂಬರ್ 4 : ಕಮ್ಯೂನಿಸ್ಟರ ಮೇಲಿನ ಕೋಮುವಾದಿಗಳ ಧಾಳಿ ಖಂಡಿಸಿ ಸಿಪಿಐ(ಎಂ) ವತಿಯಿಂದ ಛಾಯಾಚಿತ್ರ ಪ್ರದರ್ಶನ, ನರಕದ ಗರ್ಭ ಗುಡಿಯೊಳಗೆ ಪುಸ್ತಕ ಬಿಡುಗಡೆ, ಎನ್.ಜಿ.ಓ ಸಭಾಂಗಣ, ಬೆಂಗಳೂರು.

ಡಿಸೆಂಬರ್ 7 : ಮನೆ ಕೆಲಸಗಾರರಿಗೆ ಭವಿಷ್ಯನಿಧಿ ಸೇರಿದಂತೆ ವಿವಿಧ ಬೇಡಿಕೆಗಳ ಬಗ್ಗೆ ಪ್ರತಿಭಟನಾ ಪ್ರದರ್ಶನ,
ಕಂದಾಯ ಭವನ, ಬೆಂಗಳೂರು.

ಡಿಸೆಂಬರ್19–21: ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘಟನೆ (ಎಐಎಡಬ್ಲ್ಯೂಯು),
6ನೇ ಕರ್ನಾಟಕ ರಾಜ್ಯ ಸಮ್ಮೇಳನ,
ಕುಂದಾಪುರ, ಉಡುಪಿ.

ಡಿಸೆಂಬರ್ 24–25 :
'ಜನನುಡಿ' – ನುಡಿಯು ಸಿರಿಯಲ್ಲ ಬದುಕು,
ಸ್ಥಳ: ಶಾಂತಿಕಿರಣ, ಮಂಗಳೂರು.

ಈ ವಾರ ಚರಿತ್ರೆಯಲ್ಲಿ

29 ನವೆಂಬರ್ 1982

ಪ್ರಮೋದ ದಾಸ್‌ಗುಪ್ತ

ಪಶ್ಚಿಮ ಬಂಗಾಳದಲ್ಲಿ ಬಲಿಷ್ಟ ಕಮ್ಯುನಿಸ್ಟ್ ಚಳುವಳಿಯನ್ನು ಕಟ್ಟಿದ ಅಗ್ರಗಣ್ಯ ನಾಯಕ ನಿಧನರಾದ ದಿನ. ಸಿಪಿಐ(ಎಂ) ಸ್ಥಾಪಿಸಿದ ಮೊದಲ ಪೊಲಿಟ್ ಬ್ಯುರೊದ 'ನವರತ್ನ'ಗಳಲ್ಲಿ ಒಬ್ಬರು. ಈಗಿನ ಬಾಂಗ್ಲಾದೇಶದಲ್ಲಿ ಜುಲೈ 7, 1910ರಲ್ಲಿ ಹುಟ್ಟಿ, ಅನುಶೀಲನ ಸಮಿತಿ ಎಂಬ ಕ್ರಾಂತಿಕಾರಿ ಸಂಘಟನೆಯ ಸದಸ್ಯರಾಗಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದರು. ಇತರ ಬಂಗಾಳಿ ಕ್ರಾಂತಿಕಾರಿಗಳಂತೆ 1938ರಲ್ಲಿ ಕಮ್ಯುನಿಸ್ಟ್ ಪಕ್ಷ ಸೇರಿದ ಅವರು ಸ್ವಾತಂತ್ರ್ಯದ ಮೊದಲೂ ನಂತರವೂ ದೀರ್ಘಕಾಲ ಸೆರೆಮನೆ ವಾಸ ಅನುಭವಿಸಿದವರು, ಭೂಗತರಾಗಿದ್ದವರು. 1961ರಲ್ಲಿ ಪಶ್ಚಿಮ ಬಂಗಾಳದ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿಯಾದ ಅವರು, ನಿಧನದ ವರೆಗೂ ಆ ಜವಾಬ್ದಾರಿಯನ್ನು ಅದ್ಭುತವಾಗಿ ನಿರ್ವಹಿಸಿದವರು. ಪರಿಷ್ಕರಣವಾದದ ವಿರುದ್ಧ ಹೋರಾಟ, ಪಕ್ಷದ ವಿಭಜನೆ, ಪಕ್ಷದ ಮೇಲೆ ಅರೆ ಫ್ಯಾಸಿಸ್ಟ್ ದಾಳಿಯ ಸನಿವೇಶವನ್ನು ದೃಢವಾಗಿ ಎದುರಿಸಿಯೂ ಬೆಳೆದು ಎಡರಂಗ ಸರಕಾರದ ಸ್ಥಾಪನೆ ಸಾಧನೆಗಳನ್ನು ಮಾಡಿದ್ದರ ಹಿಂದೆ ಅವರ ಸಂಘಟನಾ ಸಾಮರ್ಥ್ಯ ಬದ್ಧತೆಯ ಪಾತ್ರ ದೊಡ್ಡದು. 1940ರ ದಶಕದ 'ಜನ ಯುದ್ಧ', 'ಸ್ವಾಧೀನತಾ'ದಿಂದ ಹಿಡಿದು 'ಗಣಶಕ್ತಿ' ಪತ್ರಿಕೆಗಳ ಸ್ಥಾಪನೆ ನಿರ್ವಹಣೆಯಲ್ಲೂ ಅವರು ಪ್ರಮುಖ ಪಾತ್ರ ವಹಿಸಿದ್ದರು.

ಎಸ್. ವೈ. ಗುರುಶಾಂತ್

ಗೋವಾ: ಅಭಿವ್ಯಕ್ತಿ – ಅಭಿಯಾನ

ಒಂದು ಪ್ರಗತಿಪರ ಭಾರತಕ್ಕಾಗಿ ಕೋಮುವಾದದ ವಿರುದ್ಧ ದೃಡ ಹೋರಾಟ ಅತ್ಯಗತ್ಯ, ಅನಿವಾರ್ಯ ಎಂಬ ನಿರ್ಣಯಕ್ಕೆ 'ಅಭಿವ್ಯಕ್ತಿ–ದಕ್ಷಿಣಾಯನ' ಸಮ್ಮೇಳನವು ಬಂದಿತು. ಅತ್ಯಂತ ಆಳವಾದ, ಸ್ಪಷ್ಟತೆಗಳುಳ್ಳ ಮೂರು ದಿನಗಳ ಚಿಂತನ – ಮಂಥನಗಳ ಅಂತಿಮ ಸಮಾರೋಪದ ಅಧಿವೇಶನ ಕೋಮುವಾದವನ್ನು ರಾಜಕೀಯ, ಸಾಂಸ್ಕೃತಿಕ, ಸಾಮಾಜಿಕ, ನ್ಯಾಯಾಂಗ ಮತ್ತು ಸಂವಿಧಾನಾತ್ಮಕ ಪ್ರತಿಕ್ರಿಯೆಗಳ ಮೂಲಕ ಎದುರಿಸಿ, ಎಲ್ಲಾ ಹಂತಗಳಲ್ಲಿಯೂ ಹಿಮ್ಮೆಟ್ಟಿಸಿ, ಸೋಲಿಸಬೇಕು, ಅದಕ್ಕಾಗಿ ಜನಸಮೂಹ ಎಚ್ಚರಗೊಂಡು ಮುನ್ನೆಲೆಗೆ ಬರಬೇಕು ಎಂದು ವಿನಂತಿಸಿತು.

ಇದೇ 2016 ನವೆಂಬರ್ 18 ರಿಂದ 20 ರವರೆಗೆ ಗೋವಾ ರಾಜ್ಯದ ಮಡ್ಗಾಂವ್ ನ ರವೀಂದ್ರ ಭವನ'ನಲ್ಲಿ ನಡೆದ ದಕ್ಷಿಣಾಯನ 'ಅಭಿವ್ಯಕ್ತಿ' ಸಮ್ಮೇಳನವು ಹೊರಡಿಸಿದ್ದು ದೇಶದ ಸಾಹಿತಿ, ಕಲಾವಿದರು, ಪ್ರಗತಿಪರ ಚಿಂತಕರು, ವಿಚಾರವಾದಿಗಳು, ಸಾಮಾಜಿಕ ಕ್ರಿಯಾಶೀಲ ಕಾರ್ಯಕರ್ತರು ಹೀಗೆ ವಿಶಾಲ ವಿಭಾಗಗಳ ಪ್ರತಿನಿಧಿಗಳು, ದೃಡ ಸಂಕಲ್ಪದ ಗಟ್ಟಿ ಧ್ವನಿ. ಇದನ್ನು ಸಂಘಟಿಸಿದ್ದು 'ದಕ್ಷಿಣಾಯನ' ರಾಷ್ಟ್ರೀಯ ಪರಿಷತ್. ಖ್ಯಾತ ವಿಚಾರವಾದಿ ಡಾ॥ ನರೇಂದ್ರ ದಾಬೋಲ್ಕರ್, ಹೋರಾಟಗಾರ ಕಾಂ. ಗೋವಿಂದ ಪನ್ಸಾರೆ, ಖ್ಯಾತ ಸಂಶೋದಕ ಡಾ॥ ಎಂ.ಎಂ. ಕಲಬುರರ್ಗಿಯವರ ಹತ್ಯೆಗಳಿಗೆ ಪ್ರತಿರೋಧ ವ್ಯಕ್ತಪಡಿಸಿ ದೇಶದಾದ್ಯಂತ ನಡೆದ ಪ್ರತಿಭಟನೆಗಳಲ್ಲಿ ಪ್ರಧಾನ ನೆಲೆಯಲ್ಲಿ ನಿಂತು ಹೋರಾಡುತ್ತಿರುವ ಸಂಘಟನೆ ದಕ್ಷಿಣಾಯನ. ಈಗಾಗಲೇ ಕಳೆದ ವರುಷದಲ್ಲಿ ಪುಣೆಯಲ್ಲಿಂದ ಆರಂಭಗೊಂಡು, ನಂತರ ಗುಜರಾತ್ ಉಪ್ಪಿನ ಸತ್ಯಾಗ್ರಹದ ಖ್ಯಾತಿ 'ದಂಡಿ'ಯಲ್ಲಿ ಪಾದಯಾತ್ರೆ' ಮೂಲಕ, ಈ ವರುಷ ಡಾ॥ ಕಲಬುರ್ಗಿಯವರ ಹತ್ಯೆಯ ಒಂದು ವರ್ಷದ ದುಃಖದಲ್ಲಿ ಧಾರವಾಡದಲ್ಲಿ ಬೃಹತ್ ಸಮಾವೇಶ ಸೇರಿ ದೇಶದ ಎಲ್ಲಾ ಸಮಾನ ಮನಸ್ಕ ಚಿಂತಕರನ್ನು ಒಟ್ಟುಗೂಡಿಸುತ್ತಾ ನಡೆದಿದೆ ಈ ಅಭಿಯಾನ. ಈಗ ಕೋಮುವಾದಿ ಕ್ರಿಮಿನಲ್‌ಗಳ ನೆಲೆಯಾಗುತ್ತಿರುವ ಗೋವಾದಲ್ಲಿ ಸೌಹಾರ್ಧತೆ, ಶಾಂತಿಯ ಆಶಯಗಳನ್ನು ಎತ್ತಿಹಿಡಿದು, ವಿಶಾಲ ಜಾಗೃತಿ ಬೆಳೆಸಲು ಸನ್ನದ್ದಗೊಳ್ಳವೆಂದು ನಡೆಯಿತು.

ಈ ದಕ್ಷಿಣಾಯನ – ಅಭಿಯಾನ ಇದನ್ನು ಅವಲೋಕಿಸಿಯೇ ಸಂಘಟಕರಲ್ಲೊಬ್ಬ ಪ್ರಮುಖರಾದ ಪದ್ಮಶ್ರೀ ಡಾ॥ ಗಣೇಶ್ ಎನ್. ದೇವಿಯವರು ಹೇಳಿದ್ದು "ನಾನು ನೋಡಿದ ಸಮ್ಮೇಳನಗಳಲ್ಲೇ ಇದು ಅತ್ಯುತ್ತಮ. ಪ್ರತಿಯೊಬ್ಬರೂ ನೈಜ ಸ್ಫೂರ್ತಿ ಮತ್ತು ಹೃದಯದಿಂದ ಶ್ರಮಿಸಿದ್ದಾರೆ. ಹೌದು! ಈ ಸಮ್ಮೇಳನದ ಸಿದ್ಧತೆಯಲ್ಲಿ ತೊಡಗಿದವರು ವಿಶಾಲವಾದ ಸಮೂಹ, ಪ್ರಗತಿಪರ ಭಾರತಕ್ಕಾಗಿ, ಸೌಹಾರ್ದತೆ, ಉತ್ತಮ, ಉನ್ನತ ಬದುಕಿಗಾಗಿ, ಕೋಮುವಾದ – ಮೂಲಭೂತವಾದಗಳ ಎದುರು ಹೋರಾಡುವ ಸಂಕಲ್ಪವಿರುವ ಎಲ್ಲಾ ಜೀವಪರ ಜೀವಗಳು.

ಈ ಮೂರು ದಿನದ ಸಮ್ಮೇಳನ ಆರಂಭಗೊಂಡದ್ದು ಬೃಹತ್ 'ಸಂಕಲ್ಪಯಾತ್ರೆ'ಯ ಮೂಲಕ. ಸಮ್ಮೇಳನದ ಸ್ಥಳವಾದ ರವೀಂದ್ರ ಭವನ್ ನಿಂದ ಹೊರಟ ಪಾದಯಾತ್ರೆ, ಲೋಹಿಯಾ ಮೈದಾನ್‌ನಲ್ಲಿ ಬಹಿರಂಗ ಸಭೆಯಾಗಿ ಮಾರ್ಪಟ್ಟಿತು. ಅಲ್ಲಿ ವಿಶ್ವಪ್ರಸಿದ್ಧ ನಾಟಕಕಾರ ಆತ್ಮಜೀತ್ ಸಿಂಗ್, ಡಾ॥ ಗಣೇಶ್‌ದೇವಿ, ಚಿಂತಕ ರಾವ್‌ಸಾಹೇಬ್ ಕಸಬೆ, ಹಮೀದ್ ದಾಬೋಲ್ಕರ್, ಮೋಘ ಪನ್ಸಾರೆ, ಪ್ರಶಾಂತ್ ನಾಯಕ್, ಕೆ. ನೀಲಾ, ಉತ್ತಮ ಪಾರ್ಮಾರ್ ಮುಂತಾದವರು ದೇಶದಲ್ಲಿ ಮತ್ತು ವಿಶೇಷವಾಗಿ ಗೋವಾ, ಮಹಾರಾಷ್ಟ್ರಗಳಲ್ಲಿ ಹಿಂದುತ್ವದ ಹೆಸರಿನಲ್ಲಿ ಕೋಮುವಾದಿ ಫ್ಯಾಶಿಸ್ಟ್ ಶಕ್ತಿಗಳ ಕೃತ್ಯಗಳನ್ನು ಎಳೆಎಳೆಯಾಗಿ ಬಿಡಿಸಿಟ್ಟರು. ಎಲ್ಲರ ಮಾತುಗಳಲ್ಲಿಯೂ ಹೊಮ್ಮಿದ್ದು ಈ ನಕಾರಾತ್ಮಕ ಶಕ್ತಿಗಳ ವಿರುದ್ಧದ ದೃಢ ಹೋರಾಟದ ಶಕ್ತಿಯುತವಾದ ದನಿ.

ಸಮ್ಮೇಳನದ ಅಧಿವೇಶನ ಕಲಾಪಗಳು ನಾಲ್ಕು ವೇದಿಕೆಗಳಲ್ಲಿ ನಡೆದವು. ಭಾರತದ ಉಜ್ವಲ ಭವಿತವ್ಯಕ್ಕೆ ದುಡಿದ ಆಚಾರ್ಯ ದರ್ಮಾನಂದ ಕೋಸಂಬಿ, ಫ್ರ್ಯಾನ್ಸಿಸ್ ಲೂಹಿಸ್ ಗೋಮಸ್, ನಾನು ತರ್‌ಕಾರ್ ಪೆಡ್ನೇಕರ್, ಪಿ.ಪಿ. ಶಿರೋಡ್ಕರ್ ರವರ ಹೆಸರನ್ನು ಇಡಲಾಗಿತ್ತು. ನವೆಂಬರ್ 19 ರಂದು ಔಪಚಾರಿಕ ಉದ್ಘಾಟನೆ ಪುಸ್ತಕಗಳ ಬಿಡುಗಡೆ ಬಳಿಕ ವಿವಿಧ ಗೋಷ್ಠಿಗಳು ಆರಂಭಗೊಂಡವು.

'ಭಾರತೀಯ ಬುದ್ದಿ ಜೀವಿಗಳು ದೇಶದಲ್ಲಿ ವಿಫಲರಾದರೇ?' ಅಭಿವೃದ್ಧಿ ಮತ್ತು ಪರಿಸರದ ನಡುವಿನ ಸಂಬಂಧಗಳು', ದೇಶಪ್ರೇಮ, ರಾಷ್ಟ್ರೀಯತೆ ಮತ್ತು ಮಾನವೀಯತೆ', ಕೋಮುವಾದದ ವಿರುದ್ಧದ ಹೋರಾಟ, ಬಿಕ್ಕಟ್ಟಿನಲ್ಲಿ ಸಂಸ್ಕೃತಿ, ಸೆನ್ಸಾನ್ ಶಿಫ್, ಗುಂಡುಗಳಾಚೆ ಕಾಶ್ಮೀರ, ಭಾರತ – ಕವಲುದಾರಿಯಲ್ಲಿ, 'ಮಾಧ್ಯಮ, ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವ, ಅತಿ ಮಾನುಷ ಶಕ್ತಿ ಮತ್ತು ವಿಚಾರವಾದ, 'ಸಾಮಾಜಿಕ ಮಾಧ್ಯಮ – ದೃಷ್ಟಿಯೋ ಅಥವಾ ವಿಭಜಕವೋ' ಕೊನೆಯಲ್ಲಿ ಎಲ್ಲರೂ ಒಳಗೊಂಡ ಸಮಾರೋಪ ಸಮಾರಂಭ 20 ರಂದು – ಅಲ್ಲಿ ಚರ್ಚಿತವಾದದ್ದು 'ಕೋಮುವಾದವನ್ನು ಎದುರಿಸಲು ಕಾರ್ಯಯೋಜನೆ, ನಮ್ಮ ಮುಂದಿನ ಹಾದಿ, ಇಲ್ಲಿಯೇ ಅಂಗೀಕಾರಗೊಂಡದ್ದು 9 ಅಂಶಗಳ ನಿರ್ಣಯಗಳು. ಈ ಎಲ್ಲಾ ಕಾರ್ಯಕ್ರಮಗಳಲ್ಲಿಯೂ ಭಾಗಿಯಾದ ಪ್ರಮುಖರೆಂದರೆ (ಹೆಸರಿಸಲಾದವರು ಅಲ್ಲದೇ). ವಿಕ್ಟರ್ ಫೆರೇರೋ, ರಾಜದೀಪ್ ಸರ್‌ದೇಸಾಯಿ, ಅಮೋಲ್ ಪಾಲೇಕರ್, ಸಂಧ್ಯಾ ಪಾಲೇಕರ್, ಗೋಖಲೆ, ಯೋಗಿಂದ್ರ ಯಾದವ್, ಅಮೃತ್ ಕನ್ಯಾರ್, ಕೆ.ಕೆ. ಚಕ್ರವರ್ತಿ, ನಿಖಿಲ್‌ವಾಗ್ಲೆ, ಮನ್‌ಜಿತ್ ಇಂದಿರಾ, ಕೆ. ಸಚ್ಚಿದಾನಂದನ್ ಅಲ್ಲದೇ ಪ್ರೊ. ರಾಜೇಂದ್ರಚೆನ್ನಿ, ಡಾ॥ ರಹಮತ್ ತರಿಕೆರೆ, ಕೆ.ನೀಲಾ, ಮೀನಾಕ್ಷಿಬಾಳಿ, ಬಸವರಾಜ್ ಸೂಳಿಬಾವಿ, ಮಾಧವಿ ಭಂಡಾರಿ ಡಾ॥ ಅನುಪಮಾ ಹೆಚ್. ಎಸ್ ಮುಂತಾದವರು ಡಾ॥ ಸಂಜೀವ ಕುಲಕರ್ಣಿ, ದಿನೇಶ್ ಪಟವರ್ಧನ್ ವಿವಿಧ ಗೋಷ್ಠಿಗಳಲ್ಲಿ ಭಾಗವಹಿಸಿದ್ದರು. ಅಲ್ಲದೇ ಕವಿಗೋಷ್ಠಿ, ನಾಟಕಗಳು, ಡಾಕ್ಯುಮೆಂಟರಿ ಚಲನಚಿತ್ರ, ಪೋಸ್ಟರ್ ಪ್ರದರ್ಶನ, ಹಾಡುಗಳು, ನೃತ್ಯ ಹೀಗೆ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳೂ ನಡೆದವು. ಪಂಜಾಬ್ ನಾಟಕ ಕಲಾವಿದರು, ಕರ್ನಾಟಕದ (ಗದಗ) ದಲಿತ ಕಲಾ ಮಂಡಳಿ, ಗುಜರಾತ್‌ನ ವಿನಯ್–ಚಾರುಲ್ ತಂಡಗಳ ಕಾರ್ಯಕ್ರಮಗಳು ಎಲ್ಲರ ಗಮನ ಸೆಳೆದವು. ಲಾಲ್‌ಸಲಾಮ್–ಜೈಭೀಮ್ ಚಿತ್ರ ಪ್ರದರ್ಶನವೂ ಆಯಿತು. ಈ ಕಾರ್ಯಕ್ರಮದ ಕೋಮುವಾದದ ವಿರುದ್ಧ ಹೋರಾಟದ ಸಂಕಿರಣಕ್ಕೆ ಬರಲು ಹೊರಟು ನಿಂತಿದ್ದ ಜಿಗ್ನೇಶ್ ಮೇವಾನಿಯವರನ್ನು ಬಂಧಿಸಿದ್ದರಿಂದ ಪಾಲ್ಗೊಳ್ಳಲಾಗಲಿಲ್ಲ ಎಂಬ ವಿಷಯ ತಿಳಿದಾಗ ಎಲ್ಲರೂ ಒಕ್ಕೊರಲಿನಿಂದ ಖಂಡಿಸಿದರು.

ಪ್ರಮುಖ ನಿರ್ಣಯಗಳು:

ಗೋವಾದಲ್ಲಿ ನೆಲೆಯಾಗಿರುವ ಕೋಮುದ್ವೇಷ, ಹಿಂಸೆ ನಡೆಸುತ್ತಿರುವ, ದಾಬೋಲ್ಕರ್, ಪನ್ಸಾರೆ, ಕಲಬುರ್ಗಿ ಹತ್ಯೆಗಳಲ್ಲಿ ಕೈವಾಡವಿರುವ 'ಸನಾತನ ಸಂಸ್ಥೆ'ಯ ಕೃತ್ಯಗಳನ್ನು ಖಂಡಿಸಲಾಯಿತು. ಹತ್ಯಕಾರರನ್ನು ಬಂಧಿಸಿ ಕಠಿಣ ಕ್ರಮ ಜರುಗಿಸಲು ಒತ್ತಾಯಿಸಲಾಯಿತು. ಇದಕ್ಕಾಗಿ ವಿಶೇಷ ನ್ಯಾಯಾಲಯವನ್ನು ರಚಿಸಲು ಆಗ್ರಹಿಸಲಾಯಿತು. ಈ ಸಂಸ್ಥೆಯು ಯಾವುದೇ ನಿರ್ಬಂಧವಿಲ್ಲದೆ ಮುಕ್ತವಾಗಿರುವುದನ್ನು ಪ್ರಸ್ತಾಪಿಸಿದ ಅನೇಕರು ಅದರ ನಿಷೇಧಕ್ಕೆ ಆಗ್ರಹಿಸಿದರು.

ಕಲೆ, ಸಂಸ್ಕೃತಿ, ನಾಟಕ, ಸಿನಿಮಾ, ಮಾಧ್ಯಮಗಳ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ಆಳುವವರ– ಸಂವಿಧಾನಿಕ ಹಾಗೂ ಸಂವಿಧಾನೇತರ ಬಾಹ್ಯ ಶಕ್ತಿಗಳ ಆಕ್ರಮಣಗಳನ್ನು ಖಂಡಿಸಲಾಯಿತ್ತಲ್ಲದೇ ಅದರ ವಿರುದ್ಧ ಹೋರಾಡಲು ಪಣ ತೊಡಲಾಯಿತು. ಓಆಖಿಗಿ ಮೇಲಿನ ಸರ್ಕಾರದ ಧಾಳಿಯನ್ನು ಖಂಡಿಸಲಾಯಿತು.

ದೇಶದ ಜಾತ್ಯಾತೀತ, ಪ್ರಜಾಪ್ರಭುತ್ವೀಯ, ವೈವಿಧ್ಯತೆ, ಸಂಸ್ಕೃತಿ, ಸಾಮಾಜಿಕ ಗುಣದ ಮೇಲಿನ ಯಾವುದೇ ಧಾಳಿಗಳನ್ನು ಸಹಿಸುವುದಿಲ್ಲ. ಅವನ್ನು ರಕ್ಷಿಸುತ್ತೇವೆ ಎಂಬ ಪ್ರತಿಕಾಯ ಒಂದು ಪ್ರಮುಖವಾಗಿದೆ. ದಲಿತರು, ಆದಿವಾಸಿ ಮಹಿಳೆಯರ ಮೇಲಿನ ಧಾಳಿಗಳನ್ನು ಖಂಡಿಸಲಾಯಿತು. ಆ ಹೋರಾಟಗಳಿಗೆ ಸೌಹಾರ್ದ ಬೆಂಬಲ ಸಾರಲಾಯಿತು.

ಈ ಸಮ್ಮೇಳನಕ್ಕೆ 500 ಪ್ರತಿನಿಧಿಗಳು ಹಾಜರಾಗುವವರ ನಿರೀಕ್ಷೆ ಇರಿಸಿಕೊಳ್ಳಲಾಗಿತ್ತು. ಆದರೆ ಬಂದದ್ದು 750ಕ್ಕೂ ಅಧಿಕ. ಕರ್ನಾಟಕದಿಂದಲೇ 136 ಜನ. ಇಲ್ಲಿಗೆ ಬಂದ ಬಹುತೇಕರು ಅವರದ್ದೇ ಸ್ವಂತ ಖರ್ಚಿನಲ್ಲಿ ಬಂದವರೇ. ಅತಿಥಿಗಳಾಚೆ, ಉಪನ್ಯಾಸಕರಿಗೂ ಟಿ.ಎ.–ಡಿ.ಎ. ಇಲ್ಲ ಎಂದರು ಸಂಘಟಕರು. ಇಲ್ಲಿ ಬಂದ ಚರ್ಚೆ, ವಿಚಾರ ಮಂಡನೆಗಳು ಅತ್ಯಂತ ಸತ್ವಯುತವಾಗಿದ್ದವು. ಆಳವಾದ, ಹರವು ವಿಶ್ಲೇಷಣೆ, ಚರ್ಚೆಗಳು ಸಂಘಪರಿವಾರದ ಅಬ್ಬರ–ಸೈದ್ಧಾಂತಿಕ ಸೋಗಲಾಡಿತನಗಳನ್ನು ಬಟ್ಟಾ ಬಯಲುಗೊಳಿಸಿದವು. ವಿದ್ವತ್ತಿನ ವಿವರಣೆಗಳಲ್ಲೂ, ಜನತೆ ಮತ್ತು ದೇಶದ ಬಗೆಗಿನ ತುಡಿತ ನಿಖರವಾಗಿ, ನಿಚ್ಚಳವಾಗೇ ಇದ್ದವು. ಕರ್ನಾಟಕದಿಂದ ಭಾಗವಹಿಸಿದ್ದ ನಮಗೆಲ್ಲಾ ದೇಶದ, ಜಾಗತಿಕ ಮಟ್ಟದಲ್ಲಿ ಮತೀಯ ಮೂಲಭೂತವಾದ, ಕೋಮುವಾದದ ಕಾರ್ಯಾಚರಣೆಗಳ ಬಗ್ಗೆ ಮತ್ತಷ್ಟು ಸ್ಪಷ್ಟ ಚಿತ್ರಣ ದೊರಕಿ, ಸನ್ನಿವೇಶದ ಗಂಭೀರತೆಯನ್ನೂ ಮನ ಮುಟ್ಟಿಸಿತು. ಈ ಸಂಘರ್ಷದಲ್ಲಿ, ಸಾಮಾಜಿಕ ಪರಿವರ್ತನೆಗೆ ಸದಾ ತುಡಿಯುವ–ದುಡಿಯುವವರಲ್ಲಿ ಈ ಪ್ರವಾಹದ ಜೊತೆ ಬೆರೆತಾಗ ನಮ್ಮಂತೆ ಇರುವ ಬಳಗ ದೊಡ್ಡದು ಎಂಬುದು ಆತ್ಮವಿಶ್ವಾಸ ಹುಟ್ಟಿಸಿದ ಸಂದರ್ಭವಿದು. ಕರ್ನಾಟಕದ ವಿವಿಧ ಮೂಲೆಗಳಲ್ಲಿ ಹಲವಾರು ರೀತಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡ ಸಾಹಿತಿ, ಕಲಾವಿದರು, ಕ್ರಿಯಾಶೀಲರು ಇನ್ನಷ್ಟು ನಿಕಟಗೊಂಡು ವಿಶಾಲ ಆಂದೋಲನವನ್ನು ಮುನ್ನಡೆಸುವ ಜನರೂರು ಮನದಟ್ಟು ಮಾಡಿತು. ಖಂಡಿತಕ್ಕೂ ಈ ಅಭಿಯಾನ ನಿಲ್ಲದೇ ಮತ್ತಷ್ಟು ವಿಶಾಲಗೊಂಡು ವಿಸ್ತರಿಸುವುದರಲ್ಲಿ ಅನುಮಾನವೇ ಇಲ್ಲ ಅನ್ನಿಸುತ್ತದೆ.

ಈ ಸಮ್ಮೇಳನದ ಸಂದೇಶವನ್ನು ಜನರ ನಡುವೆ ಕೊಂಡೊಯ್ಯಲು ನಿರ್ಧರಿಸಲಾಯಿತು. ವಿವಿಧ ವಿಷಯಗಳ ಬಗ್ಗೆ ಕಿರು ಹೊತ್ತಿಗೆಗಳನ್ನು ಎಲ್ಲಾ ಪ್ರಾದೇಶಿಕ ಭಾಷೆಗಳಲ್ಲಿ ತರುವುದು ಮತ್ತೊಂದು ನಿರ್ಧಾರ.

ಅಭಿವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ ಕೇವಲ ಅಲ್ಪಸಂಖ್ಯಾತ ಸಮುದಾಯಗಳಿಗೆ ಮಾತ್ರವಲ್ಲ, ಬಹುಸಂಖ್ಯಾತ ಸಮುದಾಯಗಳ ಒಳಿತಿಗೂ ಅತ್ಯಗತ್ಯ ಎಂಬ ಸಮಾರೋಪದ ಮಾತು ಗಮನಾರ್ಹ. ■

ಈ ಬಾರಿ ಟ್ವೀಟ್ ಜುಗಲ್ ಬಂದಿ

@PMOIndia

ಯುವಕರು ಬದಲಾವಣೆಯ(ಚೇಂಜಿನ) ಏಜೆಂಟರು : ಪ್ರಧಾನಿ ('ಮನ್ ಕೀ ಬಾತ್'ನಲ್ಲಿ)

@narendramodi #ManKiBaat

11.34 AM 27 Nov 16

Joy@Joydas

ಸದ್ಯ ಅವರು 2 ಸಾವಿರ ನೋಟಿಗೆ 'ಚೇಂಜ್' ಹುಡುಕುತ್ತಿದ್ದಾರೆ

ಆಟೋ ಚಾಲಕರ ಮೇಲೆ ಸಂಚಾರಿ ಪೊಲೀಸರ ಕಿರುಕುಳ

ಬೆಂಗಳೂರಿನಲ್ಲಿ ಆಟೋ ಚಾಲಕರ ಮೇಲೆ ನಿರಂತರವಾಗಿ ಸಂಚಾರ ಪೊಲೀಸರು ದೌರ್ಜನ್ಯ, ಕಿರುಕುಳ ನಡೆಸುತ್ತಿದ್ದಾರೆ ಎಂದು ಆರೋಪಿಸಿ ನವೆಂಬರ್ 29ರಂದು ಆಟೋ ರಿಕ್ಷಾ ಡ್ರೈವರ್ಸ್ ಯೂನಿಯನ್(ಎಆರ್‌ಡಿಯು) ವತಿಯಿಂದ ಸ್ವಾತಂತ್ರ್ಯ ಉದ್ಯಾನವನದಲ್ಲಿ ಪ್ರತಿಭಟನೆ ನಡೆಸಿದರು.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಿಂದ ನೂರಾರು ಆಟೋ ಚಾಲಕರು ಮೆರವಣಿಗೆ ನಡೆಸಿ ಸ್ವಾತಂತ್ರ್ಯ ಉದ್ಯಾನವನದಲ್ಲಿ ಧರಣಿ ನಡೆಸಿದರು.

'ಆಟೋ ಚಾಲಕರ ಹೆಸರು, ವಿಳಾಸದ ಮಾಹಿತಿಯನ್ನು ಆಟೋಗಳಲ್ಲಿ ಪ್ರದರ್ಶಿಸಬೇಕು ಎಂಬ ನೀತಿಯನ್ನು ಜಾರಿಗೊಳಿಸಲಾಗಿದೆ. ಆದ–ರೆ, ಈ ನೀತಿ ಮೋಟಾರು ವಾಹನ ಕಾಯ್ದೆಯಲ್ಲಿ ಇಲ್ಲ. ಆದರೂ ಪ್ರಯಾಣಿಕರ ಅನುಕೂಲಕ್ಕಾಗಿ ಈ ನೀತಿಯನ್ನು ಆಟೋ ಚಾಲಕರು ಪಾಲಿಸುತ್ತಿದ್ದಾರೆ. ಆದರೆ, ಡಿಸ್‌ಪ್ಲೇ ನವೀಕರಣ ವೇಳೆ, ವಿಳಾಸ ಪುರಾವೆ, ವಿದ್ಯುತ್ ಬಿಲ್ ಸೇರಿದಂತೆ ಇತರೆ ದಾಖಲೆಗಳನ್ನು ತರುವಂತೆ ಸಂಚಾರ ಪೊಲೀಸರು ಹೇಳುತ್ತಿದ್ದಾರೆ. ಇದರಿಂದ ಕೆಲಸ ಕಾರ್ಯ ಬಿಟ್ಟು ದಿನಗಟ್ಟಲೆ ಕಛೇರಿಗೆ ಅಲೆದಾಡಬೇಕಾದ ಪರಿಸ್ಥಿತಿ ಇದೆ' ಎಂದು ಯೂನಿಯನ್‌ನ ಕಾರ್ಯದರ್ಶಿ ಹೆಚ್.ಬಿ.ಗಂಗರಾಜು ಅವರು ದೂರಿದರು. 'ಸಂಚಾರ ಪೊಲೀಸರು ಆಟೋಗಳ ನಂಬರ್ ಬರೆದು–ಕೊಂಡು ಪ್ರಕರಣ ದಾಖಲಿಸುತ್ತಿದ್ದಾರೆ. ಅಲ್ಲದೆ, ಕಾನೂನು ಬಾಹಿರವಾಗಿ ರದ್ದು ಪಡಿಸಲು ಶಿಫಾರಸ್ಸು ಮಾಡುತ್ತಿದ್ದಾರೆ. ನಿಯಮ ಉಲ್ಲಂಘಿಸದಿದ್ದರೂ ದಂಡ ಹಾಕುತ್ತಿದ್ದಾರೆ. ಇದಕ್ಕೆ ಕಡಿವಾಣ ಬೀಳಬೇಕು' ಎಂದು ಒತ್ತಾಯಿಸಿದರು.

'ಮೊಬೈಲ್ ಆ್ಯಪ್ ಆಧಾರಿತ ಸಾರಿಗೆ ಸೇವೆ ಒದಗಿಸುತ್ತಿರುವ ಓಲಾ, ಉಬರ್ ಟ್ಯಾಕ್ಸಿಗಳಿಂದ ಆಟೋ ಚಾಲಕರ ದುಡಿಮೆಗೆ ಪೆಟ್ಟು ಬಿದ್ದಿದೆ. ಈ ಟ್ಯಾಕ್ಸಿಗಳ ಹಾವಳಿಯನ್ನೂ ತಡೆಗಟ್ಟಬೇಕೆಂದು ಆಗ್ರಹಿಸಿದರು. ■





ಬೆಂಗಳೂರು



ಬಾಗೇಪಲ್ಲಿ

ರಾಜ್ಯದಲ್ಲಿ ಮೊಳಗಿತು 'ಆಕ್ರೋಶ್ ದಿವಸ್'

6% ಹಣದ ರೂಪ, 94% ಭೂಮಿ, ಚಿನ್ನ, ಇತ್ಯಾದಿಯಾಗಿ ಕಪ್ಪುಹಣ ಇದೆ

ವಿಶ್ವಬ್ಯಾಂಕ್ ವರದಿ ಪ್ರಕಾರ ದೇಶದಲ್ಲಿ ಕಪ್ಪುಹಣ ಕೇವಲ ಶೇ.21 ಇದೆ. ಶೇ.79 ವಿದೇಶದಲ್ಲಿದೆ. ಅದರಲ್ಲೂ ಶೇ.21ನಲ್ಲಿ ಕೇವಲ ಶೇ.6 ಹಣದ ರೂಪದಲ್ಲಿ ಹಾಗೂ ಶೇ.94 ಭೂಮಿ ಚಿನ್ನ ಸೇರಿದಂತೆ ದುಬಾರಿ ವಸ್ತುಗಳ ರೂಪದಲ್ಲಿದ್ದರೂ ಸಹ ಕೇವಲ ಪ್ರಮುಖ ತಯಾರಿಗಳನ್ನು ಮಾಡಿಕೊಳ್ಳದೇ ದೇಶವನ್ನು ಆರ್ಥಿಕ ದಿವಾಳಿ ಕೇಂದ್ರ ಸರ್ಕಾರ ದೂಡಿದೆ ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರಾದ ಕೆ.ಪ್ರಕಾಶ್ ತಿಳಿಸಿದರು.

ಎಡಪಕ್ಷಗಳ ನೇತೃತ್ವದಲ್ಲಿ ಬೆಂಗಳೂರಿನ ಮೈಸೂರು ಬ್ಯಾಂಕ್ ವೃತ್ತದಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆ ಉದ್ದೇಶಿಸಿ ಅವರು ಮಾತನಾಡಿದರು. ಸಿಪಿಐ ಮುಖಂಡರಾದ ಸಿದ್ದನಗೌಡ ಪಾಟೀಲ್, ಎಸ್‌ಯುಸಿಐ(ಸಿ) ಮುಖಂಡರಾದ ರಾಜಶೇಖರ್, ಸಿಪಿಐ(ಎಂಎಲ್)ನ ಮಾರುತಿ ಮತ್ತಿತರ ಮುಖಂಡರು ಮಾತನಾಡಿದರು. ಎಡಪಕ್ಷದ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಭಾಗವಹಿಸಿ ಆಕ್ರೋಶ ವ್ಯಕ್ತಪಡಿಸಿದರು.

ವಿದೇಶದಲ್ಲಿರುವ ಡಾಲರ್ ರೂಪದ ಕಪ್ಪುಹಣ ತನ್ನಿ

ವಿದೇಶದ ಬ್ಯಾಂಕ್‌ಗಳಲ್ಲಿ ಡಾಲರ್ ರೂಪದಲ್ಲಿ ಇಟ್ಟಿರುವ ಬಿಲಿಯಾಂತರ ಕೋಟಿಗಳ ಹಣವನ್ನು ಭಾರತಕ್ಕೆ ತರಬೇಕೆಂದು ತುಮಕೂರು ನಗರದ ಟೌನ್‌ಹಾಲ್ ವೃತ್ತದಲ್ಲಿ ಸಿಪಿಐ(ಎಂ) ವತಿಯಿಂದ ನವೆಂಬರ್ 28ರಂದು ಕರಪತ್ರಗಳನ್ನು ಹಂಚುವ ಮೂಲಕ ಪ್ರತಿಭಟನೆ ನಡೆಸಿತು.

ಪ್ರತಿಭಟನೆಯನ್ನು ಉದ್ದೇಶಿಸಿ ಕೊಳಗೇರಿ ನಿವಾಸಿಗಳ ಹಿತರಕ್ಷಣಾ ಸಮಿತಿಯ ಅಧ್ಯಕ್ಷ ಎ. ನರಸಿಂಹಮೂರ್ತಿ, ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ಸದಸ್ಯ ನೌಷಾದ್ ಸೆಹಗನ್, ಎಸ್.ಎಫ್.ಐ ಜಿಲ್ಲಾಧ್ಯಕ್ಷ ಇ.ಶಿವಣ್ಣ, ಸಿಪಿಐ(ಎಂ) ನಗರ ಕಾರ್ಯದರ್ಶಿ ಎಸ್.ರಾಘವೇಂದ್ರ ಮಾತನಾಡಿದರು.

ನವೆಂಬರ್ 30ರಂದು ಎಡಪಕ್ಷಗಳ ನೇತೃತ್ವದಲ್ಲಿ ತುಮಕೂರು ಜಿಲ್ಲೆಯ ಟೌನ್‌ಹಾಲ್ ನಿಂದ ಬಿಎಸ್‌ಎನ್‌ಎಲ್ ಕಛೇರಿ ವರೆಗೆ ಮೆರವಣಿಗೆಯಲ್ಲಿ ತೆರಳಿ ಪ್ರತಿಭಟನೆ ನಡೆಸಿದರು. ಈ ಸಂದರ್ಭದಲ್ಲಿ ಸಿಪಿಐ ರಾಜ್ಯ ಮಂಡಳಿ ಸದಸ್ಯ ಎನ್.ಶಿವಣ್ಣ, ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯ ಸಿ.ಅಂಜಪ್ಪ, ಎಸ್.ಯು.ಸಿ.ಐನ ಎಸ್.ಎನ್.ಸ್ವಾಮಿ, ಸಿಪಿಐ ಗಿರೀಶ್, ಸಿಪಿಐ ಜಿಲ್ಲಾ ಕಾರ್ಯದರ್ಶಿ ಕಂಬೇಗೌಡ, ಎಸ್.ಯು.ಸಿ.ಐ(ಸಿ) ನರಸಿಂಹರಾಜು, ಸಿಪಿಐ(ಎಂ) ನಗರ ಕಾರ್ಯದರ್ಶಿ ಎಸ್.ರಾಘವೇಂದ್ರ ಮಾತನಾಡಿದರು.

ಪ್ರತಿಭಟನೆಯ ನೇತೃತ್ವವನ್ನು ಸಿಪಿಐ ನ ನರಸಿಂಹಮೂರ್ತಿ.ಜಿ ಶಾಂತ್‌ಕುಮಾರ್, ವೇಣುಗೋಪಾಲ್, ಲಕ್ಷ್ಮೀಪತಿ, ಅರುಣ್‌ಕುಮಾರ್, ನಾಗಣ್ಣ, ಶಶಿಕಾಂತ್ ಸಿಪಿಐ(ಎಂ)ನ ರಾಮಚಂದ್ರು, ಶಿವಣ್ಣ, ದರ್ಶನ್, ಲಕ್ಷ್ಮಣ್, ಸ್ವಾಮಿ,ಎಸ್.ಯು.ಸಿ.ಐ(ಸಿ)ನ ಮಂಜುಳ, ರತ್ನಮ್ಮ, ಪ್ರೀತಿ, ಅಶ್ವಿನಿ ಮಾದಪ್ಪ ಸೇರಿದಂತೆ ಮುಂತಾದವರು ನೇತೃತ್ವ ವಹಿಸಿದ್ದರು.

ಬಡವರನ್ನು ಸಾಯಿಸಿ ನೋಟು ನಿಷೇಧ :

ಇತ್ತೀಚಿಗೆ ನಡೆದ ಪ್ರಮುಖ ರಾಜ್ಯ ವಿಧಾನಸಭಾ ಚುನಾವಣೆಗಳಲ್ಲಿ ಸೋತು ಸುಣ್ಣವಾಗಿರುವ ಬಿಜೆಪಿ ಪ್ರಚಾರ ಗಿಟ್ಟಿಸಲು ನೋಟು ನಿಷೇಧಗೊಳಿಸಿ ಜನತೆಯನ್ನು ಸಂಕಷ್ಟಕ್ಕೆ ದೂಡಿದೆ. ಬಡಜನತೆ ಸಾವಿನ ಕೂಪಕ್ಕೂ ದೂಡಲಾಗಿದೆ ಎಂದು ಸಿಪಿಐ(ಎಂ) ಉಡುಪಿ ಜಿಲ್ಲಾ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ ತಿಳಿಸಿದರು.

ಕೇಂದ್ರ ಸರ್ಕಾರದ ವಿರುದ್ಧ ಕುಂದಾಪುರ ಹಾಗೂ ಬೈಂದೂರು ವಲಯ ಸಮಿತಿ ನೇತೃತ್ವದಲ್ಲಿ ತಾಲ್ಲೂಕು ಪಂಚಾಯತ್ ಮುಂಭಾಗ ನಡೆದ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು.

ಪ್ರತಿಭಟನೆ ವೇಳೆಯಲ್ಲಿ ರಸ್ತೆಯಲ್ಲಿ ಹಾದು ಹೋಗುತ್ತಿದ್ದ ವಲಸೆ ಕಾರ್ಮಿಕನೋರ್ವ ಕೇಂದ್ರದ ವಿರುದ್ಧ ತನ್ನ ಆಕ್ರೋಶವನ್ನು ಹೊರಗೆಡವಿದ್ದಾನೆ. ಬೀದರ್ ಮೂಲಕ ಕಾರ್ಮಿಕ 'ಹಳೆ ನೋಟುಗಳನ್ನು ನಾವೇನ್ ಮಾಡೋದ್ ಸ್ವಾಮಿ. ನನ್ ಹೆಸರ್ನಾಗ ಬ್ಯಾಂಕ್ ಖಾತೆ ಇಲ್ಲ. ನಾನ್ ಎಲ್ ಪಗಾರ್ ಚೇಂಜ್ ಮಾಡ್ಕೊಳ್ಳಿ, ಹೊಟ್ಟೆಗೆ ಹಿಟ್ಟಿಲ್ಲ. ನೋಟ್ ಬ್ಯಾನ್ ಮಾಡೋದ್ ಬೇಕಿತ್ತಾ, ಪಗಾರ್ ಇಲ್ದೆ ಎಷ್ಟ್ ದಿವ್ಸಾ ಆಯ್ತು ಸ್ವಾಮಿ' ಎಂದು ಕೂಗುತ್ತಾ ಅಸಹಾಯಕತೆಯನ್ನು ತೋಡಿಕೊಂಡಿದ್ದು, ನೋಡಿದವರ ಮನಕಲಕಿತು.

ಡಿಸೆಂಬರ್‌ವರೆಗೆ ಅವಕಾಶ ನೀಡಲು ಆಗ್ರಹ :

ರೂಪಾಯಿ ಅಮಾನ್ಯಗೊಳಿಸಿದ ಕೇಂದ್ರ ಸರಕಾರದ ಅವ್ಯವಸ್ಥಿತ ಕ್ರಮವನ್ನು ಖಂಡಿಸಿ ಸಿಪಿಐ(ಎಂ) ದ.ಕ ಜಿಲ್ಲಾ ಸಮಿತಿ ವತಿಯಿಂದ ಮಂಗಳೂರಿನ ಜಿಲ್ಲಾಧಿಕಾರಿ ಕಛೇರಿ ಎದುರು ಇಂದು (ನವೆಂಬರ್ 28) ನಡೆಸಿದ ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ ಸಿಪಿಐ(ಎಂ) ಹಿರಿಯ ಮುಖಂಡರಾದ ಕೆ. ಆರ್. ಶ್ರೀಯಾನ್ ಮಾತನಾಡಿ ಜನಸಾಮಾನ್ಯರನ್ನು ನಿತ್ಯ ಸಂಕಷ್ಟದಿಂದ ತಪ್ಪಿಸಲು ಚಲಾವಣೆ ನಿಲ್ಲಿಸಿದ ರೂ. 500 ಮತ್ತು ರೂ. 1000ದ ನೋಟುಗಳನ್ನು ಡಿಸೆಂಬರ್ 30 ರವರೆಗೂ ಬಳಸಲು ಕೇಂದ್ರ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ದ.ಕ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಕೆ.ಯಾದವ ಶೆಟ್ಟಿ ಮಾತನಾಡಿದರು. ಕೃಷ್ಣಪ್ಪ ಸಾಲ್ಯಾನ್ ಸ್ವಾಗತಿಸಿದರು. ಪಕ್ಷದ ಹಿರಿಯ ಮುಖಂಡ ಯು. ಬಿ. ಲೋಕಯ್ಯ, ಜಿಲ್ಲಾ ಸಮಿತಿ ಸದಸ್ಯರಾದ ಸದಾಶಿವದಾಸ್, ವಾಸುದೇವ ಉಚ್ಚಿಲ, ಜಯಂತ ನಾಯ್ಕ್, ಯೋಗೀಶ್ ಜಪ್ಪಿನಮೊಗರು, ಮುನೀರ್ ಕಾಟಿಪಳ್ಳ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಪುಟ 6 ಕ್ಕೆ


ಮಂಗಳೂರು


ಉಡುಪಿ



ಹಾಸನ



ತುಮಕೂರು


ಬೀದರ್



ಮೈಸೂರು


ಕಲಬುರಗಿ



ಗಜೇಂದ್ರಗಡ



ಶಿವಮೊಗ್ಗ

“ದಕ್ಷಿಣಾಯಣ – ಈ ಕಾಲದಲ್ಲಿ ರಾತ್ರಿಗಳು ದೀರ್ಘವಾಗಿರುತ್ತವೆ. ಹಗಲುಗಳು ಚಿಕ್ಕದಾಗಿರುತ್ತವೆ”



ಪ್ರೊ. ರಾಜೇಂದ್ರ ಚೆನ್ನಿ

‘ದಕ್ಷಿಣಾಯಣ – ಈ ಕಾಲದಲ್ಲಿ ರಾತ್ರಿಗಳು ದೀರ್ಘವಾಗಿರುತ್ತವೆ. ಹಗಲುಗಳು ಚಿಕ್ಕದಾಗಿರುತ್ತವೆ’. ಹೀಗೆಂದು ಪ್ರಸಿದ್ಧ ಭಾಷಾತಜ್ಞರ ವಿದ್ವಾಂಸರು ಆಗಿರುವ ಗಣೇಶ್ ದೇವಿ ತಾವು ಆರಂಭಿಸಿದ ಬರಹಗಾರರ, ಕಲಾವಿದರ ಕ್ರಿಯಾಶೀಲರ ಅಖಿಲ ಭಾರತೀಯ ಸಂಘಟನೆಯ ವಿವರಣೆಯನ್ನು ಆರಂಭಿಸುತ್ತಾರೆ. ಅವರು ಹೇಳುವ ಹಾಗೆ ಇದೊಂದು ಸಂಘಟನೆಯೂ ಅಲ್ಲ. ಒಂದು ಅದ್ಭುತವಾದ ರೂಪಕದ ನೆರಳಲ್ಲಿ ಒಂದುಗೂಡಿದ ಬರಹಗಾರರ ಗುಂಪೊಂದು ದಕ್ಷಿಣದ ಕಡೆಗೆ ಪ್ರಯಾಣ ಮಾಡತೊಡಗಿತು. ಮಹಾರಾಷ್ಟ್ರದ ಪಾನ್ಸರೆ, ಧಾಬೋಲ್ಕರ್ ಇಂಥ ವಿಚಾರವಾದಿಗಳ ಕೊಲೆಯಾಗಿ ವರ್ಷಗಳೇ ಕಳೆದಿದ್ದರೂ ಹಂತಕ ಸಂಘಟನೆಗಳ ಪತ್ತೆ ಆಗಿರಲಿಲ್ಲ. ಅಷ್ಟರಲ್ಲಿ ಧಾರವಾಡದಲ್ಲಿ ಕಲಬುರ್ಗಿಯವರ ಕೊಲೆಯಾಯಿತು. ಆಗ ಕೇಂದ್ರ ಸಾಹಿತ್ಯ ಅಕಾಡೆಮಿಯು ತೋರಿಸಿದ ನಿರ್ಲಕ್ಷ್ಯ ಹಾಗು ಇಡೀ ದೇಶದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ನಡೆಯುತ್ತಿದ್ದ ಹಲ್ಲೆಗಳ ವಿರುದ್ಧ ನೂರಾರು ಬರಹಗಾರರು ಪ್ರಶಸ್ತಿಗಳನ್ನು ವಾಪಸ್ಸು ಕೊಡಲಾರಂಭಿಸಿದರು. ಅವರಲ್ಲಿ ಗಣೇಶ್ ದೇವಿ ಒಬ್ಬರು ಭಾರತದ ಎಲ್ಲಾ ಭಾಷೆಗಳ ಬರಹಗಾರರ ಆತ್ಮೀಯವಾದ ಬಳಗವನ್ನೇ ಹೊಂದಿರುವ ಅವರು ತಮ್ಮ ಗೆಳೆಯರ ಗುಂಪಿನೊಂದಿಗೆ ದಕ್ಷಿಣಾಯಣ ಪ್ರವಾಸವನ್ನು ಆರಂಭಿಸಿದರು. ಧಾಬೋಲ್ಕರ್, ಪಾನ್ಸರೆ ಇವರ ಕುಟುಂಬಗಳನ್ನು ಭೇಟಿಯಾಗಿ ಧಾರವಾಡಕ್ಕೆ ಬಂದರು.

ಧಾರವಾಡ ಸಮಾವೇಶ

ಅಂದು ಕಲಬುರ್ಗಿಯವರ ಮನೆಯಲ್ಲಿ ಅವರ ಕುಟುಂಬದೊಂದಿಗೆ ಭಾರತದ ಅನೇಕ ರಾಜ್ಯಗಳಿಂದ ಬಂದಿದ್ದ ಬರಹಗಾರ, ಕಲಾವಿದರು ಕುಳಿತುಕೊಂಡು ’ನಾವು ನಿಮ್ಮ ಜೊತೆಗಿದ್ದೇವೆ’. ಎಂದಾಗ ಒಂದು ಹೊಸ ಸಂಚಲನವೇ ಆರಂಭವಾಯಿತು. ಕಲಬುರ್ಗಿಯವರ ಕೊಲೆಯಿಂದ ತತ್ತರಿಸಿ ಹೋಗಿದ್ದ ನಮಗೆಲ್ಲ

ನವೆಂಬರ್ 18, 19, 20 ರಂದು ದಕ್ಷಿಣಾಯಣದ ‘ಅಭಿವ್ಯಕ್ತಿ’ ಸಮಾವೇಶವು ಗೋವಾದ ಮಡಗಾಂವ್ ನಲ್ಲಿ ನಡೆಯಿತು. ಭಾರತದ ಎಲ್ಲಾ ಮೂಲೆಗಳಿಂದ ಬಂದ 750 ಬರಹಗಾರರು, ಹೋರಾಟಗಾರರು, ಕವಿಗಳು, ನಾಟಕಕಾರರು, ಚಲನಚಿತ್ರ ನಿರ್ದೇಶಕರು, ಖ್ಯಾತ ನಟರು, ಪತ್ರಿಕೋದ್ಯಮಗಳು ನೆರೆದಿದ್ದರು. ಸಮಾವೇಶದ ಒಂದೊಂದು ಚರ್ಚೆಯೂ ನಮ್ಮ ಸಂದರ್ಭದ ಸೂಕ್ಷ್ಮಗಳನ್ನು ಎದುರಿಗಿಟ್ಟವು. ಇವಾವೂ ಒಣ ಚರ್ಚೆಗಳಾಗಿರಲಿಲ್ಲ. ಪ್ರಗತಿಪರತೆಯ ಪ್ರದರ್ಶನವೂ ಆಗಿರಲಿಲ್ಲ. ಕಟುವಾಸ್ತವಗಳ ಮಧ್ಯ ಭಾರತದ ಮನಸ್ಸು ತನ್ನೊಂದಿಗೇ ಮೆಲುದನಿಯಲ್ಲಿ ಗಂಭೀರವಾಗಿ ವಿವೇಕ ಪೂರ್ಣವಾಗಿ ಮಾತನಾಡಿಕೊಂಡಂತೆ ಇತ್ತು.

ಪ್ರತಿಭಟನೆಯ ಒಂದು ಆಸರೆ ದೊರೆತಂತಾಯಿತು. ಇಲ್ಲಿ ಯಾವ ರಾಜಕೀಯ ಪಕ್ಷವೂ ಇರಲಿಲ್ಲ. ಸಂಘಟನೆಯೂ ಇರಲಿಲ್ಲ. ತಮ್ಮ ಕ್ಷೇತ್ರದಲ್ಲಿ ಅತ್ಯಂತ ಶ್ರೇಷ್ಠವಾದುದನ್ನು ಸಾಧಿಸಿದ, ಸೂಕ್ಷ್ಮಮನಸ್ಸಿನ ನೂರಾರು ಬರಹಗಾರರು ಅಸಹಿಷ್ಣುತೆಯ ವಿರುದ್ಧ ಬಹುದೊಡ್ಡ ಸಾಂಸ್ಕೃತಿಕ ಪ್ರತಿಭಟನೆಯನ್ನು ಯಾವ ಘೋಷಣೆಯೂ ಇಲ್ಲದೇ ಆರಂಭಿಸಿದ್ದರು. ಧಾರವಾಡದಲ್ಲಿ ಅಂದು ನಡೆದ ಸಭೆ – ಬೆದರಿಕೆ, ಹಿಂಸೆಗಳ ದೀರ್ಘರಾತ್ರಿಗಳ ಕಾಲದಲ್ಲಿ – ನಮಗೆ ನಮ್ಮ ದನಿಯಲ್ಲಿಯೇ ವಿಶ್ವಾಸವನ್ನು ತಂದು–ಕೊಟ್ಟಿತು. ಇಂದಿಗೂ ಒಂದುಗೂಡಲಾಗದ ಕನ್ನಡದ ಬರಹಗಾರರಿಗೆ ಇದೊಂದು ಪಾಠವೂ ಆಗಿತ್ತು.

ನೋಡು ನೋಡುತ್ತಲೇ ಕಲಬುರ್ಗಿಯವರ ಹತ್ಯೆಯಾಗಿ ಒಂದು ವರ್ಷ ಕಳೆದುಹೋಗಿತ್ತು. ಅಂ–ದು ಧಾರವಾಡದ ಗೆಳೆಯರು ಏರ್ಪಡಿಸಿದ ಮೌನ ಪ್ರತಿಭಟನೆ ಮತ್ತು ಸಾರ್ವಜನಿಕ ಸಭೆಗಳು ನಮ್ಮ ರಾಜ್ಯದ ಚರಿತ್ರೆಯಲ್ಲಿಯೇ ಅಪರೂಪದ ಘಟನೆಗಳು. ಹನ್ನೆರಡು ಸಾವಿರ ಜನರು ಮೌನವಾಗಿ ಧಾರವಾಡದ ಬೀದಿಗಳಲ್ಲಿ ನಡೆಯುತ್ತಾ ತಮ್ಮ ಆಕ್ರೋಶವನ್ನು ಕಾಳಜಿಯನ್ನು ವ್ಯಕ್ತಪಡಿಸಿದರು. ಆ ಸಭೆಯಲ್ಲಿ ದಕ್ಷಿಣಾಯಣದ ಎಂಭತ್ತು ಜನ ಬರಹಗಾರರು ಭಾಗವಹಿಸಿದ್ದರು. ಧೋ ಎಂದು ಸುರಿಯುತ್ತಿದ್ದ ಮಳೆ. ಸಭೆಯನ್ನು ನಿಲ್ಲಿಸೋಣವೆಂದರೆ ಇಲ್ಲ, ನಾವು ಮಳೆಯಲ್ಲಿಯೇ ಕೂರುತ್ತೇವೆ ಮುಂದುವರೆಸಿ ಎಂದ ಜನ. ಪಾನ್ಸರೆ, ಧಾಬೋಲ್ಕರ್ ಕಲುಬುರ್ಗಿಯವರ ಕುಟುಂಬಗಳು ಧಾರಾಕಾರ ಮಳೆಯಲ್ಲಿ ವೇದಿಕೆಯ ಮೇಲೆ ಕುಳಿತಿದ್ದರೆ, ಪಂಜಾಬಿನ ಆತಮ್ ಜಿತ್ ಸಿಂಗ್, ಖ್ಯಾತ ಪತ್ರಕರ್ತ ಸಿದ್ಧಾರ್ಥ ವರದರಾಜನ್, ಗೋವಾದ ಕೊಂಕಣಿ ಬರಹಗಾರ ಮೋಜೋ ಹೀಗೆ ಭಾರತದ ಕ್ರಿಯಾಶೀಲ ದನಿಗಳು ಜನರ ಸ್ವಾತಂತ್ರ್ಯಗಳನ್ನು ದಮನ ಮಾಡುತ್ತಿರುವ ಪ್ರಭುತ್ವದ ವಿರುದ್ಧ, ಆವರಿಸಿಕೊಳ್ಳುತ್ತಿರುವ ಫ್ಯಾಸಿಜಮ್‌ನ ವಿರುದ್ಧ ಪ್ರತಿಭಟನೆಯನ್ನು ದಾಖಲಿಸಿದವು.

ಮಡಗಾಂವ್ ‘ಅಭಿವ್ಯಕ್ತಿ’ ಸಮಾವೇಶ

ನವೆಂಬರ್ 18, 19, 20 ರಂದು ದಕ್ಷಿಣಾಯಣದ ’ಅಭಿವ್ಯಕ್ತಿ’ ಸಮಾವೇಶವು ಗೋವಾದ ಮಡಗಾಂವ್ ನಲ್ಲಿ ನಡೆಯಿತು. ಭಾರತದ ಎಲ್ಲಾ ಮೂಲೆಗಳಿಂದ ಬಂದ 750 ಬರಹಗಾರರು, ಹೋರಾಟಗಾರರು, ಕವಿಗಳು, ನಾಟಕಕಾರರು, ಚಲನಚಿತ್ರ ನಿರ್ದೇಶಕರು, ಖ್ಯಾತ ನಟರು, ಪತ್ರಿಕೋದ್ಯಮಗಳು ನೆರೆದಿದ್ದರು. ಸಮಾವೇಶದ ಒಂದೊಂದು ಚರ್ಚೆಯೂ ನಮ್ಮ ಸಂದರ್ಭದ ಸೂಕ್ಷ್ಮಗಳನ್ನು ಎದುರಿಗಿಟ್ಟವು. ಕೊನೆಯ ದಿನ ಮಾತನಾಡಿದ ಯೋಗೇಂದ್ರ ಯಾದವ್ ಅವರು ನಮ್ಮ ಇಂದಿನ ಬಿಕ್ಕಟ್ಟಿಗೆ ಒಂದು ರೂಪಕವನ್ನು ಕೊಟ್ಟಿದ್ದು ಹೀಗೆ. "ನಾವು ಈಗ ನಾಲ್ಕು ರಸ್ತೆಗಳು ಕೂಡುವ ಜಾಗಕ್ಕೆ ಬಂದು ನಿಂತಿದ್ದೇವೆ. ಯಾವ ದಾರಿ ಹಿಡಿಯಬೇಕೆಂಬ ಸಂಧಿಗ್ಧದಲ್ಲಿದ್ದೇವೆ. ಇಲ್ಲಿ ಒಬ್ಬ ಪೆದ್ದು ಹುಡುಗ (ಪದ್ದು) ಕುಳಿತಿದ್ದಾನೆ. ಅವನಿಗೆ ಏನೂ ತಿಳಿಯದು. ಅಷ್ಟರಲ್ಲಿ ಇನ್ನೊಬ್ಬ ’ದಾದಾ’ನಂತಿರುವವನು ಅತ್ಯಂತ ಆತ್ಮವಿಶ್ವಾಸದಿಂದ, ಎಲ್ಲವನ್ನೂ ಬಲ್ಲವನಂತೆ ಬಂದು ನಮಗೆ ಹೀಗೆ ನೆಟ್ಟಗೇ ಹೋಗಿ ಎಂದು ದಾರಿತೋರಿಸುತ್ತಾನೆ. ಅದು ನಾವು ಎಲ್ಲಿ ಹೋಗಬಾರದೋ ಅಲ್ಲಿಗೆ ಹೋಗುವ ದಾರಿ".

ಇನ್ನೊಂದೆಡೆ ‘ದೊಡ್ಡ ಮಾಧ್ಯಮ ಸಂಸ್ಥೆಗಳನ್ನು ನಂಬಲೇಬೇಡಿ. ಅವು ಬನಿಯ–ಬಂಡವಾಳಶಾಹಿಗಳಿಗೆ ಬಿಕರಿಯಾಗಿವೆ. ಅವು ಸತ್ಯವನ್ನು ಹೇಳಲಾರವು’ ಎಂದು ಸಾಗರಿಕಾ ಘೋಷ್ ಹೇಳುತ್ತಿದ್ದರು. ಸೆನ್ಸಾರ್‌ಶಿಪ್‌ನ ವಿರುದ್ಧ ಹೋರಾಡುತ್ತಿರುವ ನಟ ಅಮೋಲ್ ಪಾಲೇಕರ್ ’ಇದು ಚಿತ್ರ ಮಾಡುವವರ ಸಮಸ್ಯೆ ಮಾತ್ರ ಏಕೆ? ಚಿತ್ರ ನೋಡುವವರದೂ ಅಲ್ಲವೇ’ ಎಂದು ಎಚ್ಚರಿಸುತ್ತಿದ್ದರು. ಮಾಧ್ಯಮಗಳ ಮೂಲಕ ಕಾಶ್ಮೀರದ ಬಗ್ಗೆ ಏನನ್ನೋ ಕಲ್ಪಿಸಿಕೊಂಡಿರುವ ನಮಗೆ ಕಾಶ್ಮೀರದ ಬರಹಗಾರರು ತೆರೆದಿಟ್ಟಿದ್ದು ಬೇ–ರೊಂದು ಸತ್ಯವನ್ನೇ.

ಇವಾವೂ ಒಣಚರ್ಚೆಗಳಾಗಿರಲಿಲ್ಲ. ಪ್ರಗತಿಪರತೆಯ ಪ್ರದರ್ಶನವೂ ಆಗಿರಲಿಲ್ಲ. ಕಟುವಾಸ್ತವಗಳ ಮಧ್ಯ ಭಾರತದ ಮನಸ್ಸು ತನ್ನೊಂದಿಗೇ ಮೆಲುದನಿಯಲ್ಲಿ ಗಂಭೀರವಾಗಿ ವಿವೇಕ ಪೂರ್ಣವಾಗಿ ಮಾತನಾಡಿಕೊಂಡಂತೆ ಇತ್ತು.

ಮೊದಲ ದಿನದ ಸಂಜೆ ಮಡಗಾಂವ್‌ನ ಬೀದಿಗಳಲ್ಲಿ ಮೌನ ಮೆರವಣಿಗೆಯ ನಂತರ ಲೋಹಿಯ ಮೈದಾನದಲ್ಲಿ ಸಭೆ ಸೇರಿತ್ತು. ಸನಾತನ ಸಂಸ್ಥೆಯ ಪ್ರಧಾನ ಕೇಂದ್ರವಿರುವುದು ಗೋವಾದಲ್ಲಿಯೇ. ಆ ಸಭೆಯಲ್ಲಿ ಹಮೀದ್ ಧಾಭೋಲ್ಕರ್, ಮೇಘಾ ಪಾನ್ಸರೆ, ಉತ್ತಮ್ ಪರಮಾರ್ ಇವರು ಈ ಸಂಸ್ಥೆಯ ವಿರುದ್ಧ ಹಾಗೂ ಬಲಪಂಥೀಯ ರಾಜಕಾರಣದ ವಿರುದ್ಧ ರಣಕಹಳೆಯನ್ನೇ ಊದಿದರು.

ಪ್ರಬಲಗೊಳ್ಳುತ್ತಿರುವ ಫ್ಯಾಸಿಜಮ್ ನ ವಿರುದ್ಧ ಇಂಥದೊಂದು ಗಟ್ಟಿಯಾದ ಪ್ರತಿಭಟನೆಯ ದನಿ ನಾವಂತೂ ಕೇಳಿಯೇ ಇರಲಿಲ್ಲ. ನೂರಾರು ಪ್ರತಿಭಟನೆಗಳ ಹರಿಕಾರರಾದ, ಈ ಮೈದಾನಕ್ಕೆ ಹೆಸರುಕೊಟ್ಟ ರಾಮ್ ಮನೋಹರ್ ಲೋಹಿಯ ಅವರು ಈ ದನಿಯನ್ನು ಕೇಳಿದ್ದರೆ "ನಿರಾಸೆಯ ಕಾಲದಲ್ಲಿ" ಆತ್ಮವಿಶ್ವಾಸವನ್ನು ಕಂಡು ಸಾರ್ಥಕರಾಗುತ್ತಿದ್ದರು.

ಇದು ದಕ್ಷಿಣಾಯಣ. ಈ ಕಾಯದಲ್ಲಿ ರಾತ್ರಿಗಳು ದೀರ್ಘವಾಗಿರುತ್ತವೆ. ಹಗಲುಗಳು ಕಿರಿದಾಗಿರುತ್ತವೆ. ಆದರೆ ರಾತ್ರಿಗಳಿಗೂ ಅಂತ್ಯವಿದೆ. ಹಗಲುಗಳು ಬಂದೇ ಬರುತ್ತವೆ. ■

ಆಕ್ರೋಶ್ ದಿವಸ್.........

ಪುಟ 5 ರಿಂದ

ಸಿಐಟಿಯು ನೇತೃತ್ವದಲ್ಲಿ ಮಂಗಳೂರಿನ ಬಂದರು ಪ್ರದೇಶದ ಕಾರ್ಮಿಕ ಸಮುದಾಯವು ಪ್ರತಿಭಟನಾ ರ್‍ಯಾಲಿ ನಡೆಸುವ ಮೂಲಕ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ಹಮಾಲರು, ಕೂಲಿಕಾರರು ಭಾಗವಹಿಸಿದ್ದರು.

ಸಂಸತ್ತಿಗೆ ವಿಧೇಯತೆ ತೋರದ ಪ್ರಧಾನಿ ಮೋದಿ ವರ್ತನೆ ಸರ್ವಾಧಿಕಾರ!

ನೋಟು ನಿಷೇದಂತಹ ಬಹುದೊಡ್ಡ ತೀರ್ಮಾನವನ್ನು ತಗೆದುಕೊಳ್ಳುವ ಸಂದರ್ಭದಲ್ಲಿ ಸಾಕಷ್ಟು ಪೂರ್ವ ತಯಾರಿ ಇಲ್ಲದೆ ಹಾಗೂ ಪ್ರಜಾಸತ್ತೆಯ ಆಶಯಗಳನ್ನು ಗಾಳಿಗೆ ತೂರಿ ದೇಶವನ್ನು ಆರ್ಥಿಕ ಸಂಕಷ್ಟಕ್ಕೆ ದೂಡಿದ್ದಾರೆ. ಪ್ರಧಾನಿ ಮೋದಿರವರು ಸಂಸತ್ತಿಗೆ ತಿಳಿಸಿದೆ ಸರ್ವಾಧಿಕಾರಿಯೆಂತೆ ವರ್ತಿಸುತ್ತಿದ್ದಾರೆ ಎಂದು ಆರೋಪಿಸಿ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಸಿಪಿಐ(ಎಂ)ನ ಗದಗ ಜಿಲ್ಲೆಯ ಗಜೇಂದ್ರಗಡ ನಗರ ಶಾಖೆಯು ಕಾಲಕಾಲೇಶ್ವರ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಸಿಪಿಐ(ಎಂ) ಪುರಸಭೆ ಸದಸ್ಯ ಎಂ ಎಸ್ ಹಡಪದ ಮಾತನಾಡಿ “ಆಗಿರುವ ಆರ್ಥಿಕ ದುಷ್ಪರಿಣಾಮ ಹಾಗೂ ಅದನ್ನು ಎದುರಿಸುವ ಸಾಮರ್ಥ್ಯದ ಅಗತ್ಯ ಕ್ರಮಗಳನ್ನಾಗಲಿ ಈ ಸರ್ಕಾರ ತಗೆದುಕೊಳ್ಳುವಲ್ಲಿ ವಿಫಲವಾಗಿದೆ. ಈ ಬೇಜವಾಬ್ದಾರಿ ಯಿಂದಾಗಿ ಈಗಾಗಲೇ ಹಲವು ಜನ ಸಾವಿಗಿಡಾಗಿದ್ದಾರೆ. ಇದರ ಪರಿಣಾಮ ಇನ್ನೂ ಗಂಭೀರವಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದರು.



ಕಾರ್ಮಿಕ ಮುಖಂಡರಾದ ಮಾರುತಿ ಚಿಟಗಿ, ಯುವ ಮುಖಂಡ ಪೀರು ರಾಠೋಡ ಮಾತನಾಡಿದರು. ಪ್ರತಿಭಟನೆಯಲ್ಲಿ ಫಯಾಜ ತೋ ಟದ, ಎಂ ಬಿ ಸೋಂಪೂರ, ಬಿ ಎಸ್ ಶೀಲವಂತರ, ಎಚ್ಚರಪ್ಪ ಬಡಿಗೇರ, ಮೈಬು ಹವಾಲ್ದಾರ, ಚನ್ನಪ್ಪ ಗುಗಲೋತ್ತರ, ಬಾಷಾಸಾಬ ಕರ್ನಾಚಿ, ಇಬ್ರಾಹಿಂ ಆರಗಿದ್ದಿ, ರಾಚಮ್ಮ ನಾಲವತ್ತವಾಡ, ಲಕ್ಷ್ಮಣ ಮಾಳೋತ್ತರ, ವಿರುಪಾಕ್ಷಿ ಶೆಟ್ಟರ, ಅಬ್ದುಲ್‌ಸಾಬ ಲೋರ್, ರಫಿಕ್ ಕರ್ನಾಚಿ, ರಂಜಾನ್ ಸಂಕನೂರ, ಚಾಂದಸಾಬ ಕೊಪ್ಪಳ, ಅಶೋಕ ಉಕ್ಕಿಸಲ, ಶಿವಾಜಿ ಗಡ್ಡದ, ಶಿವಾನಂದ ಬೊಸ್ಲೆ, ಮುಂತಾದವರು ಭಾಗವಹಿಸಿದ್ದರು.

ಇತರೆಡೆ

ಶಿವಮೊಗ್ಗದಲ್ಲಿ ಡಿಸೆಂಬರ್ 30ರವರೆಗೆ ಹಳೇ ನೋಟು ಬಳಕೆಗೆ ಅವಕಾಶ ನೀಡಬೇಕೆಂದು ಸಿಪಿಐ(ಎಂ) ಕಾರ್ಯಕರ್ತರು ಜಿಲ್ಲಾಧಿಕಾರಿ ಕಛೇರಿ ಎದುರು ಪ್ರತಿಭಟನೆ ನಡೆಸಿ, ಕೇಂದ್ರ ಸರ್ಕಾರ–ಕ್ಕೆ ಮನವಿ ಸಲ್ಲಿಸಿದರು. ಜಿಲ್ಲಾ ಕಾರ್ಯದರ್ಶಿ ಎಂ.ನಾರಾಯಣ್,



ಎಸ್.ಬಿ.ಶಿವಶಂಕರ್, ಕೆ.ಪ್ರಭಾಕರನ್, ಮುನಿರಾಜು, ಅನಂತರಾಮು, ತುಳಸಿಪ್ರಭಾ, ಕೆ. ಲಕ್ಷ್ಮೀನಾರಾಯಣ್, ನಂಜುಂಡಪ್ಪ ಮುಂತಾದ ಕಾರ್ಯಕರ್ತರು ಭಾಗವಹಿಸಿದ್ದರು.

ಬೀದರ್ ಜಿಲ್ಲೆಯ ಹುಮ್ನಾಬಾದ್‌ನಲ್ಲಿ ಸಿಪಿಐ(ಎಂ) ಹಾಗೂ ಜನವಾದಿ ಮಹಿಳಾ ಸಂಘಟನೆ ನೇತೃತ್ವದಲ್ಲಿ ಜಂಟಿಯಾಗಿ ನವೆಂಬರ್ 26ರಂದು ಪ್ರತಿಭಟನೆ ನಡೆಸಲಾಗಿದೆ.

ಹರಪನಹಳ್ಳಿ, ಮೈಸೂರು ಗಳಲ್ಲಿ ಎಡಪಕ್ಷಗಳ ನೇತೃತ್ವದಲ್ಲಿ ಕೇಂದ್ರ ಅಂಚೆ ಕಛೇರಿ ಮುಂಭಾಗ, ಸಿಪಿಐ(ಎಂ) **ಹಾಸನ**ದ ಹೇಮಾವತಿ ಪ್ರತಿಮೆ ಮುಂಭಾಗ, **ಕಲಬುರಗಿ**ಯ ಸರ್ಧಾರ್ ವಲ್ಲಭಾಯಿ ವೃತ್ತದಲ್ಲಿ ಪ್ರತಿಭಟನೆ ನಡೆಸಿ ಭೂತ ದಹನ ಮಾಡಲಾಗಿದೆ. ಮತ್ತು **ಚಿಕ್ಕಬಳ್ಳಾಪುರ** ಜಿಲ್ಲೆಯ **ಬಾಗೇಪಲ್ಲಿ**ಯಲ್ಲಿ ಗೂಳೂರು ಸರ್ಕಲ್‌ನಿಂದ ಮಾನವ ಸರಪಳಿ ಮೂಲಕ ಪ್ರತಿಭಟನಾ ಮೆರವಣಿಗೆ ನಡೆಸಿ ಆಕ್ರೋಶ್ ದಿವಸ್ ಆಚರಿಸಲಾಯಿತು. ■



ವ್ಯಂಗ್ಯಚಿತ್ರ:
ಪಿ.ಮಹಮ್ಮದ್, ಪ್ರಜಾವಾಣಿ

ಬಾಬರಿ ಮಸೀದಿ ಧ್ವಂಸದ ವಾರ್ಷಿಕ

ಕೋಮುವಾದಿ ಅಪಾಯದ ವಿರುದ್ಧ ಹೋರಾಟದ ಸಂಕಲ್ಪವನ್ನು ಬಲಪಡಿಸೋಣ

ಬಾಬರಿ ಮಸೀದಿ ಮೇಲಿನ ಆಕ್ರಮಣವು ಜಾತ್ಯತೀತ ಹಾಗೂ ಪ್ರಜಾಸತ್ತಾತ್ಮಕ ಭಾರತದ ಮೇಲೆ ಸಾರಿದ ದೀರ್ಘ ಸಮರದ ಆರಂಭವಾಗಿತ್ತು.ಆದ್ದರಿಂದ ಡಿಸೆಂಬರ್ ಆರನ್ನು ಜಾಗ್ರತರಾಗಿರಬೇಕೆಂದು ಎಚ್ಚರಿಸುವ ದಿನವನ್ನಾಗಿ ಆಚರಿಸಬೇಕು. ನಮ್ಮ ಎಲ್ಲಾ ಶಕ್ತಿಯನ್ನು ಧಾರೆಯೆರೆದು ವಿಶಾಲ ಜನವಿಭಾಗಗಳನ್ನು ಸಂಘಟಿಸುವ ಮೂಲಕ ಸರ್ವಾಧಿಕಾರಿ-ಕೋಮುವಾದಿ ದಾಳಿಯನ್ನು ಪ್ರತಿರೋಧಿಸುವ ನಮ್ಮ ಸಂಕಲ್ಪವನ್ನು ಬಲಪಡಿಸುವ ನಿಟ್ಟಿನಲ್ಲಿ ಪುನರ್ ಸಮರ್ಪಿಸಿಕೊಳ್ಳುವ ಒಂದು ಸಂದರ್ಭ ವಾಗಬೇಕು.



ಪ್ರಕಾಶ ಕಾರಟ್

ಡಿಸೆಂಬರ್ ಆರು ಬಾಬರಿ ಮಸೀದಿ ಧ್ವಂಸದ ಕರಾಳ ಕೃತ್ಯದ ವಾರ್ಷಿಕ ಸಂದರ್ಭ. 24 ವರ್ಷಗಳ ಹಿಂದೆ ಆರ್‌ಎಸ್‌ಎಸ್-ಹಿಂದುತ್ವ ಪಡೆಯವರು ಬಾಬರಿ ಮಸೀದಿಯನ್ನು ಉರುಳಿಸುವ ಮೂಲಕ ಭಾರತೀಯ ಗಣರಾಜ್ಯದ ಜಾತ್ಯತೀತ-ಪ್ರಜಾಸತ್ತಾತ್ಮಕ ಸ್ವರೂಪಕ್ಕೆ ತೀವ್ರವಾದ ಪೆಟ್ಟು ನೀಡಿದರು. ಈ ಒಂದೇ ಒಂದು ಕೃತ್ಯದ ಮೂಲಕ ಅವರು ಸಂವಿಧಾನಕಕೆ ಸವಾಲು ಹಾಕಿದರು, ಅದು ಮುಂದಿಟ್ಟಿರುವ ಪ್ರಜಾಸತ್ತಾತ್ಮಕ-ಜಾತ್ಯತೀತ ಚೌಕಟ್ಟನ್ನು ಕಿತ್ತು ಹಾಕುವ ತಮ್ಮ ಉದ್ದೇಶವನ್ನು ಸಾರಿದರು.

1992ರ ಡಿಸೆಂಬರ್ 6ರಂದು ಸಂಘ ಪರಿವಾರ ಬಾಬರಿ ಮಸೀದಿಯನ್ನು ನಾಶ ಮಾಡಿದ್ದು ಕೇವಲ ಕಾಕತಾಳೀಯ ಘಟನೆ ಅಲ್ಲ. ಭಾರತದ ಸಂವಿಧಾನ ಶಿಲ್ಪಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ನಿಧನದ ದಿನವನ್ನು ಡಿಸೆಂಬರ್ ಆರರಂದು ದೇಶದಾದ್ಯಂತ ಸ್ಮರಿಸಲಾಗುತ್ತದೆ. 1956ರ ಡಿಸೆಂಬರ್ ಆರರಂದು ಡಾ. ಭೀಮರಾವ್ ಅಂಬೇಡ್ಕರ್ ನಿಧನರಾದರು. ಅಂಬೇಡ್ಕರ್‌ರ ಚಿತಾಭಸ್ಮ ವಿಸರ್ಜಿಸಿದ ಮುಂಬಯಿಯ ದಾದರ್ ಸಮುದ್ರ ತಟದಲ್ಲಿ ಲಕ್ಷಾಂತರ ಜನರು, ಅವರಲ್ಲಿ ಬಹಳಷ್ಟು ದಲಿತರು, ನೆರೆದು ಶ್ರದ್ಧಾಂಜಲಿ ಸಲ್ಲಿಸುತ್ತಾರೆ.

ಮಸೀದಿ ನಾಶಕ್ಕೆ ಡಿಸೆಂಬರ್ ಆರನೇ ದಿನಾಂಕವನ್ನೇ ಸಂಘ ಪರಿವಾರ ಆಯ್ಕೆ ಮಾಡಿಕೊಂಡಿತು ಎಂಬ ಸಂಗತಿ, ಮೊದಲು ಆರ್‌ಎಸ್‌ಎಸ್ ಸದಸ್ಯರು ಹಾಗೂ ಆನಂತರ ಅದರ ರಾಜಕೀಯ ವಿಭಾಗವಾದ ಬಿಜೆಪಿ ಸಹಿತ ಅದು ಪೋಷಿಸಿದ ವಿವಿಧ ಸಂಘಟನೆಗಳ ಸದಸ್ಯರ ಮನಗಳಲ್ಲಿ, ಹೃದಯಗಳಲ್ಲಿ ಸಂವಿಧಾನದ ವಿರುದ್ಧ ಇದ್ದ ತಿರಸ್ಕಾರ ಮತ್ತು ಆಳವಾದ ವೈಷಮ್ಯದ ಭಾವನೆಗೆ ಅನುಗುಣವಾಗಿಯೇ ಇದೆ. ಆರ್‌ಎಸ್‌ಎಸ್ ಮತ್ತು ಹಿಂದೂ ಮಹಾಸಭಾದ ಸಮಾನ ಸಿದ್ಧಾಂತವಾದ ಹಿಂದುತ್ವವನ್ನು ಒಪ್ಪುವವರು ಡಾ. ಅಂಬೇಡ್ಕರ್ ಅವರನ್ನು ಮತ್ತು ಅನ್ಯಾಯಯುತ ಹಾಗೂ ಅಸಮಾನ ಹಿಂದೂ ಕಾನೂನುಗಳಲ್ಲಿ ಅವರು ತರಲು ಬಯಸಿದ್ದ ಬದಲಾವಣೆಗಳನ್ನು ಕಟುವಾಗಿ ಟೀಕಿಸುತ್ತಿದ್ದರು. ಸಂವಿಧಾನ ಸಮಿತಿಯ ಅಧ್ಯಕ್ಷರಾಗಿ ಅವರು ಸಂವಿಧಾನ ರಚನಾ ಸಭೆಯ ಮುಂದೆ ಮಂಡಿಸಿದ ಸಂವಿಧಾನ ಅಂತಿಮವಾಗಿ ಅಂಗೀಕಾರವಾದಾಗ ಆರ್‌ಎಸ್‌ಎಸ್ ಒಂದರೆ ಕ್ಷಣವೂ ತಡ ಮಾಡದೆ ಅದನ್ನು ಖಂಡಿಸಿತು, ಮನುಶಾಸ್ತ್ರವೊಂದೇ ತಾನು ಒಪ್ಪುವ ಕಾನೂನು ಅಥವ ಧರ್ಮಶಾಸ್ತ್ರ ಎಂದು ಘೋಷಿಸಿತು.

ರಾಮ ಮಂದಿರದ ಪರವಾಗಿ ಹುಟ್ಟುಹಾಕಿದ ಪ್ರಚಾರಾಂದೋಲನ ಅನೇಕ ರಾಜ್ಯಗಳಲ್ಲಿ ಮತ್ತು ಕೇಂದ್ರದಲ್ಲಿ 1998ರಲ್ಲಿ ಬಿಜೆಪಿ ಅಧಿಕಾರಕ್ಕೇರುವಂತೆ ಮಾಡಿತು. ಅಂದಿನ ವಾಜಪೇಯಿ ಸರಕಾರವು, ಪ್ರಭುತ್ವದ ಎಲ್ಲ ಸಾರ್ವಜನಿಕ ಸಂಸ್ಥೆಗಳಲ್ಲಿ ಆರ್‌ಎಸ್‌ಎಸ್‌ನವರನ್ನು ತುರುಕಲು, ಹಿಂದುತ್ವ ಸಿದ್ಧಾಂತದ ಆಧಾರದಲ್ಲಿ ಇತಿಹಾಸವನ್ನು ಮರು-ಬರೆಯಲು ಮತ್ತು ವಿಭಜನಕಾರಿ ಅಜೆಂಡಾದ ಆಧಾರದಲ್ಲಿ ಕೋಮುವಾದಿ ಧ್ರುವೀಕರಣಕ್ಕಾಗಿ ಸಾಧ್ಯವಾದುದೆಲ್ಲವನ್ನೂ ಮಾಡಿತು.

ಒಂದು ದಶಕದ ನಂತರ, ಲೋಕಸಭೆಯಲ್ಲಿ ಬಹುಮತದೊಂದಿಗೆ ನರೇಂದ್ರ ಮೋದಿ ಸರಕಾರ ಅಧಿಕಾರಕ್ಕೆ ಬಂತು. ಇದರೊಂದಿಗೆ ಕೋಮುವಾದಿ ಅಜೆಂಡಾವನ್ನು ಮುಂದೊತ್ತುವ ಕೆಲಸದ ವೇಗವನ್ನು ಹೆಚ್ಚಿಸಲಾಯಿತು. ಉನ್ನತ ಶಿಕ್ಷಣ ಸಂಸ್ಥೆಗಳು ಮತ್ತು ಸಂಶೋಧನಾ ಸಂಸ್ಥೆಗಳಲ್ಲಿ ಹಿಂದುತ್ವ ಸಿದ್ಧಾಂತವನ್ನು ತುರುಕಲಾಗುತ್ತಿದೆ; 'ಘರ್ ವಾಪಸಿ', 'ಲವ್ ಜಿಹಾದ್', 'ಗೋ ರಕ್ಷೆ' ಸೋಗಿನಲ್ಲಿ ಅಲ್ಪಸಂಖ್ಯಾತರನ್ನು ದಾಳಿಯ ಗುರಿ ಮಾಡಲಾಗುತ್ತಿದೆ. ಅಲ್ಪಸಂಖ್ಯಾತರು ಭಯೋತ್ಪಾದಕರು ಹಾಗೂ ದೇಶದ್ರೋಹಿಗಳು ಎಂದು ಕಳಂಕ ಹೊರಿಸಲಾಗುತ್ತಿದೆ. ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ಸರ್ವಾಧಿಕಾರಶಾಹಿ ದಾಳಿ ನಡೆ-ಯುತ್ತಿದೆ ಮತ್ತು ಭಿನ್ನಮತದ ಹಕ್ಕನ್ನು ನಿರ್ದಯವಾಗಿ ಹತ್ತಿಕ್ಕಲಾಗುತ್ತಿದೆ. ನ್ಯಾಯಾಂಗದ ನೇಮಕಗಳಲ್ಲಿ ಹಸ್ತಕ್ಷೇಪ ಮಾಡಲು ದೃಢ ಪ್ರಯತ್ನ ನಡೆಸಲಾಗುತ್ತಿದೆ. ಮಾಧ್ಯಮ ಸ್ವಾತಂತ್ರ್ಯವನ್ನು ಗಂಭೀರವಾಗಿ ಮೊಟಕು ಮಾಡಲಾಗುತ್ತಿದೆ. ಪ್ರಭುತ್ವದ ಒಕ್ಕೂಟ ಸ್ವರೂಪ ಕೂಡ ಗಂಭೀರ ಆಕ್ರಮಣಕ್ಕೊಳಗಾಗಿದೆ.

ಈ ರೀತಿಯಾಗಿ ಬಾಬರಿ ಮಸೀದಿ ಮೇಲಿನ ಆಕ್ರಮಣವು ಜಾತ್ಯತೀತ ಹಾಗೂ ಪ್ರಜಾಸತ್ತಾತ್ಮಕ ಭಾರತದ ಮೇಲೆ ಸಾರಿದ ದೀರ್ಘ ಸಮರದ ಆರಂಭವಾಗಿತ್ತು. ಆದ್ದರಿಂದ ಡಿಸೆಂಬರ್ ಆರನ್ನು ಜಾಗ್ರತರಾಗಿರಬೇಕೆಂದು ಎಚ್ಚರಿಸುವ ದಿನವನ್ನಾಗಿ ಆಚರಿಸಬೇಕು. ನಮ್ಮ ಎಲ್ಲಾ ಶಕ್ತಿಯನ್ನು ಧಾರೆ-ಯೆರೆದು ವಿಶಾಲ ಜನವಿಭಾಗಗಳನ್ನು ಸಂಘಟಿಸುವ ಮೂಲಕ ಸರ್ವಾಧಿಕಾರಿ-ಕೋಮುವಾದಿ ದಾಳಿಯನ್ನು ಪ್ರತಿರೋಧಿಸುವ ನಮ್ಮ ಸಂಕಲ್ಪವನ್ನು ಬಲಪಡಿಸುವ ನಿಟ್ಟಿನಲ್ಲಿ ಪುನರ್‌ಸಮರ್ಪಿಸಿಕೊಳ್ಳುವ ಒಂದು ಸಂದರ್ಭವಾಗಬೇಕು. ನವ-ಉದಾರವಾದ ಮತ್ತು ವಿಚ್ಛಿದ್ರಕಾರಿ ಕೋಮುವಾದದ ಅವಳಿ ದಾಳಿಗಳಿಗೆ ಎದುರಾಗಿ ವರ್ಗ ಹಾಗೂ ಸಾಮೂಹಿಕ ಸಂಘರ್ಷಗಳನ್ನು ಬೆಳೆಸುವ ಮೂಲಕ ಇದನ್ನು ಸಾಧಿಸಬಹುದಾಗಿದೆ.

ಅನು: ವಿಶ್ವ



ಕೊಲ್ಕತಾದಲ್ಲಿ ಪ್ರತಿಭಟನೆ

ನೋಟು ಬಿಕ್ಕಟ್ಟು : ಪ್ರತಿಭಟನೆ, ಹೋರಾಟ ಮುಂದುವರೆಯಲಿ –ಸಿಪಿಐ(ಎಂ) ಪೊಲಿಟ್‌ಬ್ಯುರೊ

500 ಮತ್ತು 1000 ರೂಪಾಯಿ ನೋಟುಗಳನ್ನು ಹಿಂತೆಗೆದುಕೊಂಡು ಜನಗಳ ಮೇಲೆ ಮತ್ತಷ್ಟು ಹೊರೆಹಾಕಿ, ಅವರ ಜೀವನಾಧಾರಗಳ ಮೇಲೆ ಮಾಡಿರುವ ಪ್ರಹಾರದ ವಿರುದ್ಧ ನವಂಬರ್ 28ರಂದು ಬೀದಿಗಿಳಿದು ಪ್ರತಿಭಟನೆ ಮಾಡಿದ ಲಕ್ಷಾಂತರ ಜನಗಳನ್ನು ಅಭಿನಂದಿಸುತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಸಾಕಷ್ಟು ಪ್ರಮಾಣದಲ್ಲಿ ಪರ್ಯಾಯ ವ್ಯವಸ್ಥೆ ಏರ್ಪಡಿಸುವ ವರೆಗೆ ಎಲ್ಲ ವ್ಯವಹಾರಗಳಿಗೆ ಹಳೆಯ ನೋಟುಗಳನ್ನು ಬಳಸಲು ಅವಕಾಶವಾಗಬೇಕೆಂಬ ಹೋರಾಟವನ್ನು, ಪ್ರತಿಭಟನಾ ಚಳುವಳಿಯನ್ನು ಮುಂದುವರೆಸಬೇಕು ಎಂದು ಎಲ್ಲ ರಾಜಕೀಯ ಪಕ್ಷಗಳಿಗೆ, ಕಾರ್ಮಿಕ ಸಂಘಟನೆಗಳಿಗೆ ಮತ್ತು ಸಾಮೂಹಿಕ ಸಂಘಟನೆಗಳಿಗೆ ಕರೆ ನೀಡಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಮತ್ತು ಬಿಜೆಪಿ ಜನಗಳನ್ನು ದಾರಿ ತಪ್ಪಿಸಲೆಂದೇ ಈ ರಾಷ್ಟ್ರೀಯ ಪ್ರತಿಭಟನಾ ದಿನವನ್ನು ಭಾರತ್ ಬಂದ್ ಕರೆ ಎಂದು ಕರೆದಿದ್ದಾರೆ. ಈ ಪ್ರತಿಭಟನೆಗೆ ಕರೆ ನೀಡಿದ ಯಾವ ಪ್ರತಿಪಕ್ಷವೂ ಇದನ್ನು ಭಾರತ್ ಬಂದ್ ಎಂದು ಕರೆದಿಲ್ಲ. ವಾಸ್ತವವಾಗಿ ದೇಶದ ಮೇಲೆ ಈ ಅನಾಣ್ಯೀಕರಣದ ಮೂಲಕ ಆರ್ಥಿಕ ಬಂದ್ ಹೇರಿರುವುದು ಮೋದಿ ಸರಕಾರವೇ ಎಂದು ಸಿಪಿಐ(ಎಂ) ಟಿಪ್ಪಣಿ ಮಾಡಿದೆ.

ನಿರ್ದಿಷ್ಟವಾಗಿ ತ್ರಿಪುರ ಮತ್ತು ಕೇರಳದಲ್ಲಿ ಹರತಾಳಗಳು ಯಶಸ್ವಿಯಾಗಿರುವುದು ಎಡಪಕ್ಷಗಳು ಶಕ್ತಿಶಾಲಿ ಪ್ರತಿಭಟನೆಯನ್ನು ದಾಖಲಿಸಲು ಜನಗಳನ್ನು ಅಣಿನೆರೆಸಿದ್ದರಿಂದಾಗಿ ಎಂದು ಸಿಪಿಐ(ಎಂ) ಹೇಳಿದೆ.

ದೇಶಾದ್ಯಂತ ಜನಾಕ್ರೋಶ ದಿನ

ಪುಟ 2 ರಿಂದ

ಯೆಚೂರಿಯವರು, ಪ್ರಧಾನಿಗಳು ಭಾಷಣಗಳನ್ನು ಕೊಡುವುದರಲ್ಲಿ ಮಗ್ನರಾಗಿದ್ದಾರೆ, ಸಂಸತ್ತಿನ ಸಭೆಗಳಲ್ಲಿ ಹಾಜರಾಗುತ್ತಿಲ್ಲ, ಶ್ರೀಮಾನ್ ಮೋದಿಯವರು ತಮ್ಮ ಜನಗಳಿಗೇ ಉತ್ತರದಾಯಿಯಾಗಿಲ್ಲ ಎಂದು ಟೀಕಿಸಿದರು.

ರ‍್ಯಾಲಿಯನ್ನುದ್ದೇಶಿಸಿ ಸಿಪಿಐ ರಾಷ್ಟ್ರೀಯ ಕಾರ್ಯದರ್ಶಿ ಅತುಲ್ ಅಂಜನ್, ಸಿಪಿಐ(ಎಂಎಲ್)-ಲಿಬರೇಶನ್ ಪೊಲಿಟ್‌ಬ್ಯುರೊ ಸದಸ್ಯರಾದ ಕವಿತಾ ಕೃಷ್ಣನ್, ಎಸ್‌ಯುಸಿಐ(ಕಮ್ಯುನಿಸ್ಟ್) ಕೇಂದ್ರ ಸಮಿತಿ ಸದಸ್ಯರಾದ ಸತ್ಯವಾನ್, ಅಖಿಲ ಬಾರತ ಫಾರ್ವರ್ಡ್ ಬ್ಲಾಕ್ ರಾಷ್ಟ್ರೀಯ ಕಾರ್ಯದರ್ಶಿ ಜಿ.ದೇವರಾಜನ್ ಮತ್ತು ಆರ್‌ಎಸ್‌ಪಿ ಹಾಗೂ ಸಿಜಿಪಿಐ ಮುಖಂಡರು ಮಾತನಾಡಿದರು.

ರಾಜಧಾನಿಯ ಇತರೆಡೆಗಳಲ್ಲೂ ಮತ್ತು ದೇಶದ ಇತರೆಡೆಗಳಲ್ಲೂ ಪ್ರತಿಭಟನಾ ಪ್ರದರ್ಶನಗಳು ನಡೆದವು. ತ್ರಿಪುರ ಮತ್ತು ಕೇರಳದಲ್ಲಿ ಹರತಾಳಗಳು ನಡೆದವು.

'ನಗದುರಹಿತ' ಆರ್ಥಿಕದತ್ತ ಪರಿವರ್ತನೆಯ ಮಾರ್ಗನಕಾಶೆಗೆ ಮುಖ್ಯಮಂತ್ರಿಗಳ ಸಮಿತಿ: ಸದಸ್ಯರಾಗಲು ತ್ರಿಪುರಾ ಮುಖ್ಯಮಂತ್ರಿಗಳ ನಕಾರ

ದೇಶದ ಒಕ್ಕೂಟ ರಚನೆಯನ್ನು ಧಿಕ್ಕರಿಸಿ ನೋಟು ಬಿಕ್ಕಟ್ಟು ಸೃಷ್ಟಿಸಿದ ಮೇಲೆ ಕೇಂದ್ರಸರಕಾರಕ್ಕೆ ಈಗ ಅದರಿಂದ ಹೊರಬರಲು ರಾಜ್ಯಗಳಮುಖ್ಯಮಂತ್ರಿಗಳ ಸಲಹೆ ಕೇಳುವ ಯೋಚನೆ ಬಂದಿದೆ. ಪ್ರಧಾನ ಮಂತ್ರಿಗಳ ಸಲಹೆಯ ಮೇರೆಗೆ ಹಣಕಾಸು ಮಂತ್ರಿಗಳು ಮುಖ್ಯಮಂತ್ರಿಗಳ ಸಮಿತಿಯೊಂದನ್ನು ರಚಿಸುವ ಯೋಚನೆ ನಡೆಸಿದ್ದಾರಂತೆ. 500 ಮತ್ತು 1000 ರೂಪಾಯಿಗಳ ನೋಟುಗಳನ್ನು ಹಿಂತೆಗೆದುಕೊಂಡುದರ ಪರಿಣಾಮಗಳನ್ನು ಪರಿಶೀಲಿಸುವುದು ಮತ್ತು 'ನಗದುರಹಿತ' ಆರ್ಥಿಕದತ್ತ ಪರಿವರ್ತನೆಯ ಮಾರ್ಗನಕಾಶೆಯನ್ನು ಸೂಚಿಸುವುದು ಈ ಸಮಿತಿಗೆ ಒಪ್ಪಿಸಬೇಕೆಂದಿರುವ ಕೆಲಸ. ಎನ್‌ಡಿಎ ಭಾಗವಾದ ತೆಲುಗುದೇಶಂನ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಇದರ ಅಧ್ಯಕ್ಷರೆಂದು ಸೂಚಿಸಲಾಗಿದೆ. ಮಧ್ಯಪ್ರದೇಶದ ಬಿಜೆಪಿ ಮುಖ್ಯಮಂತ್ರಿ ಶಿವರಾಜ್ ಚೌಹಾಣ್ ಅಲ್ಲದೆ, ಬಿಹಾರದ ಮುಖ್ಯಮಂತ್ರಿ ನಿತಿಶ್ ಕುಮಾರ್, ಒಡಿಶಾದ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಮತ್ತು ತ್ರಿಪುರಾದ ಮುಖ್ಯಮಂತ್ರಿ ಮಾಣಿಕ ಸರಕಾರ್ ಅವರನ್ನು ಸಮಿತಿಯ ಸದಸ್ಯರಾಗಿ ಆಹ್ವಾನಿಸಲಾಗಿದೆ ಎಂದು ವರದಿಯಾಗಿದೆ.

"ಪ್ರಧಾನ ಮಂತ್ರಿಗಳ ಸಲಹೆಯಂತೆ ಹಣಕಾಸು ಮಂತ್ರಿ ಅರುಣ್ ಜೇಟ್ಲಿಯವರು ನನಗೆ ಕರೆ ಮಾಡಿ ಈ ಮುಖ್ಯಮಂತ್ರಿಗಳ ಸಮಿತಿಯಲ್ಲಿ ಇರಬೇಕು ಎಂದು ಕೇಳಿಕೊಂಡರು. ನನಗೆ ಇದರಲ್ಲಿ ಆಸಕ್ತಿ ಇಲ್ಲ ಎಂದು ನಾನು ಹೇಳಿದೆ" ಎಂದು ಮಾಣಿಕ್ ಸರಕಾರ್ ವರದಿಗಾರರಿಗೆ ಹೇಳಿದ್ದಾರೆ. ಪರ್ಯಾಯ ವ್ಯವಸ್ಥೆಯಿಲ್ಲದೆ ಕೋಟ್ಯಂತರ ಜನಗಳನ್ನು, ಅದರಲ್ಲೂ ಬಡಜನಗಳನ್ನು ಫಜೀತಿಗೀಡು ಮಾಡಿರುವ ಈ ಕ್ರಮಕ್ಕೆ ತಮ್ಮ ಬೆಂಬಲವಿಲ್ಲ ಎಂಬುದನ್ನು ತ್ರಿಪುರಾ ಮುಖ್ಯಮಂತ್ರಿಗಳು ಪುನರುಚ್ಚರಿಸಿದರು.

ಬಿಹಾರದ ಮುಖ್ಯಮಂತ್ರಿಗಳು ಈ ಆಹ್ವಾನಕ್ಕೆ ತಕ್ಷಣವೇ ಸ್ಪಂದಿಸಿಲ್ಲ ಎಂದೂ ವರದಿಯಾಗಿದೆ.

ಫಿಡೆಲ್ ಕ್ಯಾಸ್ಟ್ರೋ : ಕಣ್ಮರೆಯಾದ ಕ್ರಾಂತಿಕಾರಿ

– ಪ್ರಕಾಶ ಕೆ.

ಸಮಾಜವಾದಿ ಕ್ರಾಂತಿಗಳ ಮೂಲಕ ಜಗತ್ತಿನ ಮೇಲೆ ಪ್ರಭಾವ ಬೀರಿದ ಲೆನಿನ್, ಸ್ಟಾಲಿನ್, ಮಾವೋ, ಕಿಮ್–ಉಲ್–ಸುಂಗ್, ಹೊ ಚಿ ಮಿನ್ ನಂತರ ಅಂತಹುದೊಂದು ಪ್ರಭಾವ ಬೀರಿದ್ದು ಫಿಡೆಲ್ ಎಂದರೆ ತಪ್ಪಾಗಲಿಕ್ಕಿಲ್ಲ. ಮೂರನೇ ಜಗತ್ತಿನ ಎಡ ಮತ್ತು ಪ್ರಗತಿಪರ ಚಳುವಳಿಗಳ ಮೇಲೆ ಅಪಾರ ಪರಿಣಾಮವನ್ನು ಬೀರಿದ ಕ್ಯೂಬಾದ ಸಮಾಜವಾದಿ ಕ್ರಾಂತಿಯು, ಫಿಡೆಲ್‌ರ ಮಾರ್ಕ್ಸ್‌ವಾದಿ ಸಿದ್ಧಾಂತ ಮತ್ತು ಆಚರಣೆಯ ಒಂದು ಕಾಣಿಕೆಯಾಗಿದೆ. 20ನೇ ಶತಮಾನದ ಸಮಾಜವಾದಿ ಕ್ರಾಂತಿಗಳ ಮರೆಯಲಾಗದ ನಾಯಕರ ಪರಂಪರೆಯಲ್ಲಿ ಬಹುಶಃ ಕೊನೆಯ ಕೊಂಡಿಯಾಗಿ, ಫಿಡೆಲ್ ಚರಿತ್ರೆಯಲ್ಲಿ ಚಿರಸ್ಥಾಯಿಯಾಗಿದ್ದಾರೆ.

ತಮ್ಮ 90 ನೆಯ ವರ್ಷದಲ್ಲಿ ವಯೋಮಾನ ಸಹಜ ಸಾವನ್ನು ಕಂಡ ಫಿಡೆಲ್ ಕ್ಯಾಸ್ಟ್ರೋ ಚರಿತ್ರೆಯ ಪುಟಗಳಲ್ಲಿ ಚಿರಸ್ಥಾಯಿಯಾದ ಮತ್ತು ದಂತಕಥೆ–ಯಾದ ಜಗತ್ತಿನ ಕೆಲವೇ ಕೆಲವು ಕ್ರಾಂತಿಕಾರಿಗಳಲ್ಲಿ ಒಬ್ಬರು. ಎರಡನೇ ಮಹಾಯುದ್ಧದ ನಂತರ ಜಗತ್ತಿನೆಲ್ಲೆಡೆ ಅಲೆಅಲೆಯಾಗಿ ಎದ್ದು ಬಂದ ಸಮಾನತೆ ಮತ್ತು ಸ್ವಾತಂತ್ರ್ಯಕ್ಕಾಗಿನ ರಣೋತ್ಸಾಹದಲ್ಲಿ ಹೋರಾಟ ನಡೆಸಿದ ನೆಲ್ಸನ್ ಮಂಡೇಲ, ಹೋ ಚಿ ಮಿನ್ಹ್, ಪ್ಯಾಟ್ರಿಸ್ ಲುಮುಂಬಾ, ಚೆ ಗೆವಾರ ಮುಂತಾದ ದಂತಕತೆಗಳಾದ ಬಂಡಾಯಗಾರರ ಸಾಲಿನಲ್ಲಿ ಫಿಡೆಲ್ ನಿಂತಿದ್ದಾರೆ.

ಉಜ್ವಲ ಭವಿಷ್ಯದ ಕನಸುಗಳೊಂದಿಗೆ, ಅನ್ಯಾಯಕ್ಕೆ ಸಮಾಧಿಯನ್ನು ಕಟ್ಟಬೇಕೆಂಬ ಛಲದೊಂದಿಗೆ, ಬಡತನ, ಅಸಮಾನತೆ, ಶೋಷಣೆಯನ್ನು ಜಗದ ನೊಗದಿಂದ ಕಿತ್ತೆಸೆಯಬೇಕೆಂಬ ಧೃಡತೆಯೊಂದಿಗೆ, ಅದನ್ನು ಸಾಧಿಸಲು ಕಮ್ಯುನಿಸಂನಿಂದ ಮಾತ್ರ ಸಾಧ್ಯ ಎಂದು ಪ್ರಾಮಾಣಿಕವಾಗಿ ನಂಬಿದ ಅಸಂಖ್ಯಾತ ಪ್ರಗತಿಪರರು ಮತ್ತು ಬುದ್ದಿಜೀವಿಗಳು, ಅತ್ಯಂತ ಶ್ರೇಷ್ಠ ಮಹಿಳೆಯರು ಮತ್ತು ಪುರುಷರ ಜಾತಿಗೆ ಸೇರಿದವರು ಫಿಡೆಲ್. ಅಂದಿಗೆ ಲ್ಯಾಟಿನ್ ಅಮೇರಿಕದ ಹಲವಾರು ದೇಶಗಳಲ್ಲಿ ಅಮೇರಿಕದ ಬೆಂಬಲ ಮತ್ತು ಪಿತೂರಿಗಳಿಂದ ಸ್ಥಾಪನೆಗೊಂಡಿದ್ದ ಸರ್ವಾಧಿಕಾರಿ ನಾಯಕರಿದ್ದರು. ಕ್ಯೂಬಾದಲ್ಲಿ ಬಟಿಸ್ಟಾ, ಡೊಮಿನಿಕನ್ ರಿಪಬ್ಲಿಕ್‌ನಲ್ಲಿ ಟ್ರೂಜಿಲ್ಲೋ, ಹೈಟಿಯಲ್ಲಿ ಡುವೆಲಿಯರ್, ನಿಕರಾಗುವಾದಲ್ಲಿ ಸೊಮೊಜ್ಹ, ವೆನಿಜುವೆಲಾದಲ್ಲಿ ಪೆರೆಝ್ ಜಿಮೆನೆಝ್, ಪರಾಗ್ವೆಯಲ್ಲಿ ಸ್ಟ್ರೋಸ್ನರ್, ಮುಂತಾಗಿ ಕ್ರೂರ ಸರ್ವಾಧಿಕಾರಿಗಳು ವಸಾಹತುಶಾಹಿ ಮತ್ತು ಬಂಡವಾಳಶಾಹಿಗಳ ಸೇವೆ ಸಲ್ಲಿಸುತ್ತಿದ್ದರು. ಇದಕ್ಕೆ ವಿರುದ್ಧವಾಗಿ ಫಿಡೆಲ್ ತನ್ನ 32 ನೇ ವಯಸ್ಸಿನಲ್ಲಿ 1959 ಜನವರಿಯಲ್ಲಿ ಕ್ಯೂಬಾ ಕ್ರಾಂತಿಯನ್ನು ಯಶಸ್ವಿಯಾಗಿ ಸಂಘಟಿಸಿದರು. ಪಶ್ಚಿಮ ಭೂಗೋಳದಲ್ಲಿ ನಡೆದ ಮೊದಲ ಸಮಾಜವಾದಿ ಕ್ರಾಂತಿಯಿದು.

"ಇತಿಹಾಸ ನನ್ನನ್ನು ದೋಷಮುಕ್ತಗೊಳಿಸುತ್ತದೆ"

ಫಿಡೆಲ್ ತಂದೆ ಏಂಜಲೋ ಕ್ಯಾಸ್ಟ್ರೋ ಮೂಲತಃ ಸ್ಪೈನ್ ದೇಶದವರು. ಒಂದು ಸಾಮಾನ್ಯ ಬಡಕುಟುಂಬದ ಹಿನ್ನೆಲೆಯಿಂದ ಬಂದು, ಕ್ಯೂಬಾದ ಪೂರ್ವ ಓರಿಯಂಟೆ ಪ್ರಾಂತದ ಬೈರನ್ ಪ್ರದೇಶದಲ್ಲಿ ನೆಲೆಸಿ, ಅಪಾರ ಪ್ರಮಾಣದ ಭೂಮಿಯನ್ನು ಗಳಿಸಿದ್ದರು. ಫಿಡೆಲ್ ಕುಟುಂಬ ಅತ್ಯಂತ ಶ್ರೀಮಂತವಾದರೂ ಸುತ್ತಲ ವಾತಾವರಣ ತೀರಾ ಬಡತನದಿಂದ ಕೂಡಿತ್ತು. ಫಿಡೆಲ್‌ಗೆ ಬಂಡಾಯ ಮತ್ತು ಸಾಹಸದ ಪ್ರವೃತ್ತಿ ಬಾಲ್ಯದಿಂದಲೂ ಬಂದಿತ್ತು. ಹವಾನಾ ವಿಶ್ವವಿದ್ಯಾಲಯದಲ್ಲಿ ಓದುವಾಗ ಈ ಪ್ರವೃತ್ತಿಗೆ ಒಂದು ಸ್ಪಷ್ಟವಾದ ದಾರಿಯನ್ನು ಕಂಡುಕೊಂಡರು. ಬಟಿಸ್ಟಾನ ಸರ್ವಾಧಿಕಾರದ ವಿರುದ್ಧ ಅಲ್ಲಿಂದಲೇ ಸಂಘಟನೆ ಆರಂಭಿಸಿದರು. ಕ್ಯೂಬಾದ ಪರಿಸ್ಥಿತಿಯನ್ನು ಅನುಸರಿಸಿ ಗೆರಿಲ್ಲಾ ಮಾದರಿ ಪ್ರತಿರೋಧವನ್ನು ರೂಪಿಸಿದರು. ಅದನ್ನು ಮೊದಲು ಪ್ರಯೋಗಿಸಿದ್ದು ಮೊಂಕಾಡಾ ಬ್ಯಾರಕ್ ದಾಳಿಯಲ್ಲಿ. ಆದರೆ ಲೆಕ್ಕಾಚಾರಗಳಲ್ಲಿ ಸ್ವಲ್ಪ ವ್ಯತ್ಯಾಸವಾಗಿ ದಾಳಿ ವಿಫಲವಾಯಿತು. ಸೆರೆ ಸಿಕ್ಕ ಫಿಡೆಲ್ ಮತ್ತು ಗೆಳೆಯರನ್ನು ಬಟಿಸ್ಟಾ ಸರ್ಕಾರ ಜೈಲಿಗೆ ಹಾಕಿತು. ಕೋರ್ಟಿನಲ್ಲಿ ಸ್ವತಃ ವಾದ ಮಾಡಿದ ಫಿಡೆಲ್ ಕೊನೆಯಲ್ಲಿ ಲಿಖಿತ ಭಾಷಣವನ್ನು ಮಂಡಿಸಿದರು. ಕ್ಯೂಬಾದ ಭೂತ, ವರ್ತಮಾನ ಮತ್ತು ಭವಿಷ್ಯತ್ ಬಗ್ಗೆಗಿನ ಮಾರ್ಗದರ್ಶಿಯಾದ ಇದು ಚರಿತ್ರೆಯಲ್ಲಿ "ಇತಿಹಾಸ ನನ್ನನ್ನು ದೋಷಮುಕ್ತಗೊಳಿಸುತ್ತದೆ" ಎಂದು ಹೆಸರಾಗಿದೆ. ಬಟಿಸ್ಟಾ ನ್ಯಾಯಾಲಯ ವಿಧಿಸಿದ ಜೈಲು ಶಿಕ್ಷೆಯಿಂದ ಮಧ್ಯದಲ್ಲೇ ಬಿಡುಗಡೆಯಾಗಿ, ಮೆಕ್ಸಿಕೋಗೆ ತಲೆಮರೆಸಿಕೊಂಡು ಹೋದರು.

ಮೆಕ್ಸಿಕೋದಲ್ಲಿ ಒಂದು ಗೆರಿಲ್ಲಾ ಸೈನ್ಯವನ್ನು ಸಂಘಟಿಸಿದರು. ಫಿಡೆಲ್‌ನ ಆತ್ಮೀಯ ಸಂಗಾತಿ ಚೆ' ಗೆವಾರ ಜೊತೆಯಾದದ್ದು ಅಲ್ಲಿಯೇ. ತೀವ್ರವಾದ ಸಂಕಷ್ಟಗಳನ್ನು ಎದುರಿಸಿ 'ಗ್ರಾನ್ಮಾ'ದಲ್ಲಿ ಕ್ರಾಂತಿಯನ್ನು ಮಾಡಲು ಹೊರಟದ್ದು ರೋಚಕ ಕಥೆ. ಕೇವಲ 12 ಜನರನ್ನು ಕೊಂಡೊಯ್ಯಬಹುದಾದ ದೋಣಿಯಲ್ಲಿ 82 ಜನ ಗೆರಿಲ್ಲಾ ಸೈನಿಕರನ್ನು ತುಂಬಿಕೊಂಡು ಸಮುದ್ರ ದಾಟುವ ಕೆಲಸ ಮಾಡುವುದಕ್ಕೆ ಬರೀ ಧೈರ್ಯವಿದ್ದರೆ ಸಾಕೇ? ಕ್ರಾಂತಿ ಮಾಡಲೇಬೇಕೆಂಬ ಬದ್ಧತೆ ಮತ್ತು ತುಡಿತ – ಅದು ಫಿಡೆಲ್‌ಗಿತ್ತು. ಸಿಯೆರ್ರಾ ಮೇಸ್ತ್ರದ ಬೆಟ್ಟಗುಡ್ಡಗಳಲ್ಲಿ ನಡೆದ ಬಟಿಸ್ಟಾ ಸೈನ್ಯದ ವಿರುದ್ಧ ಸಂಕ್ಲಿಷ್ಟ ದಾಳಿ ಪ್ರತಿದಾಳಿಗಳಲ್ಲಿ ಬದುಕುಳಿದವರು 12 ಜನ. ಆಗಲೂ 'ನಾವು ಕ್ರಾಂತಿ ಗೆಲ್ಲುತ್ತೇವೆ' ಎಂಬ ಅದಮ್ಯ ವಿಶ್ವಾಸ. ಅವರು ಅಂದುಕೊಂಡ ಹಾಗೆ ಕ್ಯೂಬನ್ ಜನತೆಯ ಬೆಂಬಲದೊಂದಿಗೆ, ಅಮೇರಿಕದ ಏಜೆಂಟ್ ಸರ್ವಾಧಿಕಾರಿ ಫಲ್ಗೆನ್ಸಿಯೋ ಬಟಿಸ್ಟಾನ ಪಲಾಯನದೊಂದಿಗೆ, ಕ್ರಾಂತಿ ಸಂಭವಿಸಿತು. ಕ್ಯೂಬಾ ಸಮಾಜವಾದದ ನವ ಮನ್ವಂತರಕ್ಕೆ ಕಾಲಿಟ್ಟಿತು.

11 ಅಮೆರಿಕದ ಅಧ್ಯಕ್ಷರುಗಳನ್ನು ಮಣಿಸಿದ ಫಿಡೆಲ್

ಜಗತ್ತಿನ ಬೃಹತ್ ಸಾಮ್ರಾಜ್ಯಶಾಹಿ ಸಂ.ರಾ.ಅಮೇರಿಕ, ತನ್ನ ದಕ್ಷಿಣದ ತುದಿಯಿಂದ ಕೇವಲ 80 ಮೈಲುಗಳ ಕೂಗಳತೆಯ ದೂರದಲ್ಲಿ ಸಮಾಜವಾದಿ ರಾಷ್ಟ್ರವೊಂದರ ಅಸ್ಥಿತ್ವವನ್ನು ಸಹಿಸಿಕೊಂಡೀತಾದರೂ ಹೇಗೆ? ಕೇವಲ 1 ಲಕ್ಷ ಚದರ ಕಿ.ಮೀ. ವಿಸ್ತಾರದ, ಕೇವಲ 1 ಕೋಟಿ ಜನಸಂಖ್ಯೆಯ ಪುಟ್ಟ ಕ್ಯೂಬಾ ಜಗತ್ತಿನ ಬ್ರಹ್ಮರಾಕ್ಷಸನನ್ನು ಎದುರು ಹಾಕಿಕೊಂಡ ಪರಿಯ ಸೈದ್ಧಾಂತಿಕ ಸೊಬಗನ್ನು ಬಣ್ಣಿಸುವುದು ಹೇಗೆ? ಹೇಗಾದರೂ ಫಿಡೆಲ್‌ರ ಕ್ಯೂಬಾವನ್ನು ಮಣಿಸಲೇಬೇಕೆಂದು ಅಮೇರಿಕ ನಡೆಸಿದ ದಾಳಿ, ದಬ್ಬಾಳಿಕೆ, ತಂತ್ರ–ಕುತಂತ್ರಗಳಿಗೆ ಲೆಕ್ಕವೇ ಇಲ್ಲ. 1959 ರಿಂದ ಇದುವರೆಗೂ ಆಗಿಹೋದ ಅಮೇರಿಕದ ಅಧ್ಯಕ್ಷರೆಲ್ಲರೂ ಕ್ಯೂಬಾದಲ್ಲಿ ಸಮಾಜವಾದವನ್ನು ಮುಗಿಸಬೇಕೆಂದು ಮತ್ತು ಫಿಡೆಲ್‌ರನ್ನು ಕೊಲ್ಲಬೇಕೆಂದು ನಡೆಸಿದ ಪ್ರಯತ್ನಗಳಿಗೆ ಲೆಕ್ಕವಿಲ್ಲ. ಐಸೆನ್‌ಹೋವರ್,

ಪುಟ 10 ಕ್ಕೆ

ನಾವು ಮೃತ್ಯುಂಜಯರು

ಜೊತೆಗಾರರ ಕೈ ಹಿಡಿದು ಹವಾನದ ರಾಜ
ಬೀದಿಗಳಲ್ಲಿ ನೀನು

ನಡೆದು ಬಂದ ಗಾಂಭೀರ್ಯಕ್ಕೆ ಜಗತ್ತು ಬೆಕ್ಕಸ
ಬೆರಗಾಗಿತ್ತು ಸಂಗಾತಿ

ಅಣತಿ ದೂರದಲ್ಲಿ ಕುದಿಯುತ್ತಾ ನೋಡುತ್ತಿದ್ದ
ಬಲಾಢ್ಯ ದೊಡ್ಡಣ್ಣನ

ಮುಖದಲ್ಲಿ ಮೊದಲ ಬಾರಿಗೆ ದಿಗಿಲು, ಬೆವರು...

ಗ್ರಾನ್ಮಾ ನೌಕೆಯಲ್ಲಿ ಸಂಗಾತಿಗಳ ಜೊತೆ ತೇಲುತ್ತಾ
ತೀರ ತಲುಪಿದಾಗ

ನಿಮ್ಮ ಮುಖದಲ್ಲಿದ್ದ ಆತ್ಮವಿಶ್ವಾಸ ಹುಂಬತನದಂತೆ
ಕಾಣಿಸಿತ್ತು, ದೊಡ್ಡಣ್ಣ ಗೊಳ್ಳನೆ ನಕ್ಕಿದ್ದ...

ಕಬ್ಬಿನ ತೋಟ, ಬೆಟ್ಟದ ಮೇಲಿನ ಗುಹೆಗಳಲ್ಲಿ
ನೀವು ಕ್ರಾಂತಿಯ ಪಾಠ ಹೇಳಿಕೊಡುತ್ತಿದ್ದಿರಿ... ಇತ್ತ
ಹವಾನಾದ ನೈಟ್ ಕ್ಲಬ್ಬಿನಲ್ಲಿ ನಿಮ್ಮ ದಾರುಣ
ಅಂತ್ಯವನ್ನು ಸಿರಿವಂತ ಧಣಿಗಳು ಸುಳ್ಳು ಸುಳ್ಳೇ
ಸಂಭ್ರಮಿಸುತ್ತಿದ್ದರು...

ಸಕ್ಕರೆ ಬಟ್ಟಲಿನ ನಾಡು ಕ್ಯೂಬಾದ ರೈತರ ಪಾಲಿಗೆ
ನೀವು ಮೊದಲ ಬಾರಿಗೆ ಸಿಹಿ ಕಾಣಿಸಿದಿರಿ. ದೊಡ್ಡಣ್ಣನ
ಬಾಯಿಗೆ ಮೊದಲ ಬಾರಿಗೆ ಕಹಿ ವಗರು. ಜಗತ್ತೇ
ಪುಟ್ಟ ಕ್ಯೂಬಾ ಆಗಬೇಕಿತ್ತು...

ಕೆಲಸ ಬಾಕಿಯಿದೆ ಸಂಗಾತಿ ನಿನ್ನದು, ಮಾತ್ರವಲ್ಲ
ನಮ್ಮದು.

ನಿನ್ನ ದೋಸ್ತ್ ಚೆ ದೊಡ್ಡಣ್ಣನ ದುಷ್ಟ ಸಂಚಿಗೆ
ಪ್ರಾಣ ತೆತ್ತ. ನೀನು ಮಾತ್ರ ಮೃತ್ಯುಂಜಯನಂತೆ
ಅಜೇಯನಾದೆ


ಇಂದು ಕೆಲವರು ಒಳಗೊಳಗೆ ಸಂಭ್ರಮಿಸಿರುತ್ತಾರೆ,
ದೊಡ್ಡಣ್ಣನ ಮುಖದಲ್ಲಿ ಏನೋ ಮಂದಹಾಸ

ಅವರಿಗೆ ಗೊತ್ತಿಲ್ಲ. ಕೋಟ್ಯಾಂತರ ಫಿಡಲ್, ಚೇ ಗಳು
ಇನ್ನೋ ಬದುಕಿದ್ದಾರೆ. ಮುಂದಕ್ಕೆ ಹುಟ್ಟಾತ್ತರೆ.

ಯುದ್ಧ ಗೆಲ್ಲದೆ ನಮಗೆ ಶಾಶ್ವತ ಮರಣವಿಲ್ಲ. ನಾವು
ಮೃತ್ಯುಂಜಯರು.

ಕ್ಯಾಸ್ಟ್ರೊ ಕೊಲ್ಲಲು 638 ದಾರಿಗಳು

"ಸಾವಿನ ಬಾಯಿಯಿಂದ ಪಾರಾದಕ್ಕಾಗಿ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಏನಾದರೂ ಇಟ್ಟರೆ ಅದು ನನಗೇ ದಕ್ಕಬೇಕು. ಏಕೆಂದರೆ ನಾನು 64 ಬಾರಿ ಸಿಐಎ ಕೈಯಿಂದ ಪಾರಾಗಿ ಬಂದಿದ್ದೇನೆ"



'ಕ್ಯಾಸ್ಟ್ರೊ ಕೊಲ್ಲಲು 638 ಸೂತ್ರಗಳು' ಇದು ಒಂದು ಫಿಲಂನ ಟೈಟಲ್ ಎಂದರೆ ನೀವು ಮೂಗು ಮುರಿಯಬಹುದು. ಹೌದು. ಇದು ಕ್ಯಾಸ್ಟ್ರೊ ಕೊಲ್ಲಲು ಸಿ.ಐ.ಎ. ಹೂಡಿದ 638 ತಂತ್ರಗಳ ಬಗ್ಗೆ 2006 ರಲ್ಲಿ ತಯಾರಿಸಲಾದ ಒಂದು ಬ್ರಿಟಿಷ್ ಡಾಕ್ಯುಮೆಂಟರಿ ಫಿಲಂ. ಇದನ್ನು ನೋಡಿದರೆ ಯಾರಾದರೂ ದಂಗಾಗಬೇಕು.

ಕ್ಯೂಬಾ ಮತ್ತು ಫೀಡೆಲ್ ಕ್ಯಾಸ್ಟ್ರೋ ಸಿಐಎಯ ಮುಗಿಯದ ಗುರಿ. ಬೊಲಿವಿಯಾದಲ್ಲಿ ಚೆಗೆವಾರನ್ನು ಬಲಿ ತೆಗೆದುಕೊಂಡ ಸಿಐಎ ಫಿಡೆಲ್ ಕ್ಯಾಸ್ಟ್ರೋ ಅವರ ಮೇಲೆ ಇನ್ನಿಲ್ಲದ ಸಂಚು ಹೂಡಿತ್ತು.

'ಸಾವಿನ ಬಾಯಿಯಿಂದ ಪಾರಾದಕ್ಕಾಗಿ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಏನಾದರೂ ಇಟ್ಟರೆ ಅದು ನನಗೇ ದಕ್ಕಬೇಕು. ಏಕೆ–ಂದರೆ ನಾನು 64 ಬಾರಿ ಸಿಐಎ ಕೈಯಿಂದ ಪಾರಾಗಿ ಬಂದಿದ್ದೇನೆ' ಎಂದು ಅಂತರ್ರಾಷ್ಟ್ರೀಯ ಸೌಹಾರ್ದತಾ ಸಮಾವೇಶದಲ್ಲಿ ಬಹಿರಂಗಪಡಿಸಿದ್ದರು. ಫಿಡೆಲ್ ಕ್ಯಾಸ್ಟ್ರೋ ಅವರ ಮನೆಯ ಮೇಲೆ ಬಾಂಬ್ ದಾಳಿ ನಡೆಸಿ, ಸಿಗಾರ್‌ಗೆ ರೋಗಾಣು ಹರಡಿ, ಪೆನ್‌ನಲ್ಲಿ ವಿಷಾನಿಲ ಇಟ್ಟು, ಹೋದ ಕಡೆಯೆಲ್ಲಾ ಬಂದೂಕು ಸಿದ್ಧಮಾಡಿ, ವಿಡಿಯೋ ಕ್ಯಾಮರಾದಲ್ಲಿ ಪಿಸ್ತೂಲ್ ಇಟ್ಟು, ಲಕ್ಷಾಂತರ ಡಾಲರ್ ಸುರಿದರೂ ಫಿಡೆಲ್ ಕ್ಯಾಸ್ಟ್ರೋ ಸಿಐಎ ಬಾಯಿಗೆ ಸಿಕ್ಕಿಲ್ಲ. ಫಿಡೆಲ್ ಅವರ ಅಜೇಯರಾಗಿ ಸಹಜ ಸಾವನಪ್ಪಿದರು. ಸಾವಿನಲ್ಲೂ ಅವರು ಸಿಐಎಯನ್ನು ಸೋಲಿಸಿದ್ದರು.

ಕ್ಯಾಸ್ಟ್ರೋರವರ ಜನಪ್ರಿಯತೆಯ ಗುಟ್ಟುಗಳಲ್ಲಿ ಒಂದು ಅವರ ಗಡ್ಡ ಎಂದು ತೀರ್ಮಾನಿಸಿದ ಸಿಐಎ ಅದನ್ನು ಎದುರಿಸಲು ಅವರು ಬಳಸುವ ಪಾದರಕ್ಷೆಗಳಲ್ಲಿ ಥಾಲಿಯಂ ಪುಡಿ ಬೆರೆಸುವ, ಕ್ಯಾಸ್ಟ್ರೋ ಅವರ ಭಾಷಣದ ಶೈಲಿ ಜನಪ್ರಿಯ ಎಂದು ತಿಳಿದು ಅವರ ಭಾಷಣವನ್ನು ಧ್ವನಿಮುದ್ರಿಸಿಕೊಳ್ಳುವ ಸ್ಟುಡಿಯೋದಲ್ಲಿ ರಾಸಾಯನಿಕ ದ್ರವ ಸಿಂಪಡಿಸಿ ಗಂಟಲು ಹಾನಿಯಾಗುವಂತೆ ಮಾಡುವ, ವಿಶ್ವಸಂಸ್ಥೆ ಅಧಿವೇಶನಕ್ಕೆ ಬಂದಾಗ ವಿಷಪೂರಿತ ಸಿಗಾರ್ ನೀಡುವ ಯೋಜನೆಗಳು ತಯಾರಾಗಿ ವಿಫಲವಾದವು. 'ಏಜೆಂಟ್ ಎಎಂ' ಎಂದು ಹೆಸರಾದ ಮೇಜರ್ ರೋಲ್ಯಾಂಡೋ ಕುಬೆಲಾಸ್ ಅವರಿಗೆ ವಿಷದ

ಪುಟ 11 ಕ್ಕೆ

ಭಾರತ ಕಳುಹಿಸಿದ ಗೋಧಿ



'ನೀವು ಕಳುಹಿಸಿದ ಗೋಧಿ ನಮ್ಮಲ್ಲಿ ಹೋರಾಟದ ಹುಮ್ಮಸ್ಸನ್ನು ಹೆಚ್ಚಿಸಿವೆ. ನೀವು ಕಳುಹಿಸಿದ ಗೋಧಿ ಅಮೇರಿಕಾದ ವಿರುದ್ಧ ನಾವು ಇನ್ನಷ್ಟು ದೃಢವಾಗಿ ನಿಲ್ಲುವಂತೆ ಮಾಡಿದೆ. ನೀವು ಕಳುಹಿಸಿದ ಗೋಧಿ ಹೋರಾಟದಲ್ಲಿ ನಾವು ಒಬ್ಬಂಟಿಯಲ್ಲ ಎಂದು ಸಾರಿದೆ. ಈ ಗೋಧಿಯಿಂದ ಕ್ಯೂಬಾದ ಪ್ರತಿಯೊಬ್ಬ ಪ್ರಜೆಗೂ ಒಂದು ವಾರ ಉತ್ತಮ ಬ್ರೆಡ್ ನೀಡುತ್ತೇನೆ'. ಎಂದರು ಕ್ಯಾಸ್ಟ್ರೋ.

ಪಂಜಾಬಿನ ಅತ್ಯುತ್ತಮ ಗೋಧಿಯನ್ನು ಕಲ್ಕತ್ತಾದ ಹಲ್ದಿಯ ಬಂದರಿಗೆ ತಂದು 37 ದಿನಗಳ ಕಾಲ ಹಿಂದೂ ಮಹಾಸಾಗರ, ಆಫ್ರಿಕಾ ಖಂಡದ ದಕ್ಷಿಣ ಭಾಗ , ಅಟ್ಲಾಂಟಿಕ್ ಸಾಗರದ ಮೂಲಕ 20 ಸಾವಿರ ಕಿ.ಮೀ. ಪ್ರಯಾಣ ಮಾಡಿದ ಕೆರೆಬಿಯನ್ ಪ್ರಿನ್ಸೆಸ್ – 'ಕೆರೆಬಿಯನ್ ಸಮುದ್ರದ ರಾಜಕುಮಾರಿ'– ಎಂಬ ಹಡಗು ಹವಾನಾದ ಹಡಗು ಕಟ್ಟೆಯನ್ನು ಸ್ಪರ್ಶಿಸಿದಾಗ ಫಿಡೆಲ್ ಕ್ಯಾಸ್ಟ್ರೋ ಆಡಿದ ಮಾತಿದು.

ಸಾಮ್ರಾಜ್ಯಶಾಹಿಯ ವಿರುದ್ಧ ಕ್ಯೂಬಾ ನಡೆಸುತ್ತಿರುವ ಹೋರಾಟ ಕ್ಯೂಬಾದ ಹೋರಾಟ ಮಾತ್ರವಲ್ಲ ಅದು ಜಗತ್ತಿನ ಮೂಲೆಮೂಲೆಗಳಲ್ಲಿ ಸಾಮ್ರಾಜ್ಯಶಾಹಿಯ ವಿರುದ್ಧ ಜನರು ನಡೆಸುತ್ತಿರುವ ಹೋರಾಟ ಎಂದು ಭಾವಿಸಿದ ಭಾರತ–ಕ್ಯೂಬಾ ಸೌಹಾರ್ದ ಸಮಿತಿ ಆಪತ್ಕಾಲದಲ್ಲಿರುವ ಕ್ಯೂಬಾಗೆ ಬೀದಿಬೀದಿಗಳಲ್ಲಿ ದಿನಗಟ್ಟಲೆ ಸಂಗ್ರಹಿಸಿದ ಹಣದಿಂದ ಖರೀದಿಸಿದ 10,105 ಟನ್ ಗೋಧಿಯನ್ನು ಕಳುಹಿಸಿದಾಗ ಫೀಡೆಲ್ ಕ್ಯಾಸ್ಟ್ರೋ ಅದನ್ನು ಸ್ವೀಕರಿಸಲು ಹವಾನಾದ ಬಂದರಿಗೇ ಬಂದರು. 'ನೀವು ಕೇವಲ

ಪುಟ 15 ಕ್ಕೆ



“ಗಂಭೀರ ಸವಾಲುಗಳೂ ಇವೆ, ದಿಕ್ಪಥವನ್ನೇ ಬದಲಿಸುವ ಅವಕಾಶವೂ ನಿರ್ಮಾಣವಾಗಿದೆ”

ಸಮರಧೀರ ಕಾರ್ಮಿಕ ಆಂದೋಲನ ಕಟ್ಟಲು ಸಿಐಟಿಯು 15ನೇ ಸಮ್ಮೇಳನದ ಕರೆ

ಪ್ರಸಕ್ತ ಸನ್ನಿವೇಶ ಗಂಭೀರ ಸವಾಲುಗಳನ್ನು ಕಾರ್ಮಿಕ ಆಂದೋಲನದ ಮುಂದಿಟ್ಟಿದೆ, ಜತೆ-ಗೆ ಸಮಸ್ತ ದಿಕ್ಪಥವನ್ನೇ ಬದಲಿಸುವ ಹೊಸ ಅವಕಾಶಗಳನ್ನೂ ನಿರ್ಮಿಸಿದೆ ಎಂಬ ತೀರ್ಮಾನಕ್ಕೆ ಒಡಿಶಾ ರಾಜ್ಯದ ಪುರಿಯಲ್ಲಿ ನವಂಬರ್ 26 ರಿಂದ 30ರ ವರೆಗೆ ನಡೆದ ದೇಶದ ಪ್ರಮುಖ ಕಾರ್ಮಿಕ ಸಂಘಟನೆ ಸಿಐಟಿಯುನ 15ನೇ ಅಖಿಲ ಭಾರತ ಸಮ್ಮೇಳನ ತಮ್ಮ ಅನುಭವಗಳ ವಿಶ್ಲೇಷಣೆಯ ಆಧಾರದಲ್ಲಿ ಬಂದಿದೆ.

ಆಳುವ ವರ್ಗಗಳ ದಾಳಿಗಳಿಗೆ ನಿರ್ಣಾಯಕ ತಡೆ ಹಾಕುವ ಅವಕಾಶ ಮತ್ತು ಸಮಯ ಬಂದಿದೆ ಎಂದಿರುವ ಸಮ್ಮೇಳನ ಈ ಬೆಳೆದು ಬರುವ ಅವಕಾಶವನ್ನು ಬಳಸಿಕೊಳ್ಳಲು ತಮ್ಮೆಲ್ಲ ಪ್ರಯತ್ನಗಳನ್ನು ಕೇಂದ್ರೀಕರಿಸಬೇಕು ಎಂದು ಎಲ್ಲ ಸಿಐಟಿಯು ಸಮಿತಿಗಳು, ಕಾರ್ಯಕರ್ತರು ಮತ್ತು ಸದಸ್ಯರಿಗೆ ಕರೆ ನೀಡಿದೆ.

ಆತ್ಮವಿಶ್ವಾಸ, ಐಕ್ಯತೆ ಮತ್ತು ಹೋರಾಟದ ಸಂದೇಶವನ್ನು ಎಲ್ಲ ಶ್ರಮಜೀವಿ ಜನವಿಭಾಗಗಳಿಗೆ ತಲುಪುವಂತೆ ಮಾಡಲು, ಕಾರ್ಮಿಕ ಆಂದೋಲನವನ್ನು ಈ ದಿಕ್ಕಿನಲ್ಲಿ ಒಯ್ಯುವಂತೆ ರಾಷ್ಟ್ರ ಮಟ್ಟದಲ್ಲೂ, ರಾಜ್ಯ ಮಟ್ಟಗಳಲ್ಲೂ ಸಕ್ರಿಯ ವರ್ಗಪ್ರಜ್ಞೆಯ ಮುತುವರ್ಜಿಗಳನ್ನು ವಹಿಸಬೇಕೆಂದು ತನ್ನ ಎಲ್ಲ ಸಮಿತಿಗಳು ಮತ್ತು ಕಾರ್ಯಕರ್ತರಿಗೆ ಕರೆ ನೀಡಲು ಸಮ್ಮೇಳನ ನಿರ್ಧರಿಸಿತು.

ನವಂಬರ್ 26 ರಂದು ಪುರಿಯ ಕಾಮ್ರೇಡ್ ಸಮರ ಮುಖರ್ಜಿ ನಗರದಲ್ಲಿ ಅತ್ಯಂತ ಹುರುಪಿನ ವಾತಾವರಣದಲ್ಲಿ ಸಮ್ಮೇಳನ ಆರಂಭವಾಯಿತು.

ಉದ್ಘಾಟನಾ ಅಧಿವೇಶನದಲ್ಲಿ ಅಧ್ಯಕ್ಷೀಯ ಭಾಷಣ ಮಾಡುತ್ತ ಎ.ಕೆ.ಪದ್ಮನಾಭನ್ ಅವರು ಜಗತ್ತಿನಾದ್ಯಂತ ಮಹಾನ್ ಅಕ್ಟೋಬರ್ ಕ್ರಾಂತಿ ಶತಮಾನೋತ್ಸವದ ಆಚರಣೆ ಪ್ರಾರಂಭಿಸಿರುವಾಗ ಇಡೀ ಕಾರ್ಮಿಕ ಆಂದೋಲನ ಗಂಭೀರ ಸವಾಲುಗಳನ್ನು ಎದುರಿಸುತ್ತಿದೆ ಎಂದು ಸನ್ನಿವೇಶದ ವಿವರಣೆ, ವಿಶ್ಲೇಷಣೆಗಳನ್ನು ನೀಡಿದರು. ಜನ-ವಿರೋಧಿ, ಕಾರ್ಮಿಕ-ವಿರೋಧಿ ನವ-ಉದಾರವಾದಿ ಧೋರಣೆಗಳನ್ನು ಹಿಮ್ಮೆಟ್ಟಿಸಲು ಸಮರ್ಥವಾಗಿರುವ ಒಂದು ಪರಿಣಾಮಕಾರಿ ಜಾಗತಿಕ ಕಾರ್ಮಿಕ ಆಂದೋಲನವನ್ನು ಬೆಳೆಸುವುದು ಈಗಿನ ಆವಶ್ಯಕತೆ ಎಂದು ಅವರು ಹೇಳಿದರು. ಅಂತರ್ರಾಷ್ಟ್ರೀಯ ಕಾರ್ಮಿಕ ಆಂದೋಲನವನ್ನು ಕುಂಠಿತಗೊಳಿಸಿರುವ ಸುಧಾರಣಾವಾದ ಮತ್ತು ಸೈದ್ಧಾಂತಿಕ ಮಾರ್ಗ ಚ್ಯುತಿಗಳ ದೌರ್ಬಲ್ಯಗಳನ್ನು ಮೀರಿ ನಿಲ್ಲಬೇಕಾಗಿದೆ, ಇತ್ತೀಚೆಗೆ ನಡೆದ ಡಬ್ಲ್ಯುಎಫ್‌ಟಿಯುನ 17 ನೇ ಸಮ್ಮೇಳನ ಈ ಬಗ್ಗೆ ಒತ್ತು ನೀಡಿದೆ. ಅಕ್ಟೋಬರ್ ಕ್ರಾಂತಿಯ ಶತಮಾನೋತ್ಸವದ ಸಂದರ್ಭವನ್ನು ದೇಶಾದ್ಯಂತ ಒಂದು ಸಮರಧೀರ ಸಂಘಟನೆಯನ್ನು ಕಟ್ಟಲು ಬಳಸಬೇಕು ಎಂದುಅವರು ಸಮ್ಮೇಳನದಲ್ಲಿ ಭಾಗವಹಿಸಲು ಆಗಮಿಸಿದ್ದ ಪ್ರತಿನಿಧಿಗಳಿಗೆ ಕರೆ ನೀಡಿದರು.

ಅಧ್ಯಕ್ಷೀಯ ಭಾಷಣದ ಮಧ್ಯದಲ್ಲಿ ಕ್ಯೂಬನ್ ಕ್ರಾಂತಿಗೆ ನೇತೃತ್ವ ನೀಡಿದ, ಸಮಾಜವಾದಿ ಕ್ಯೂಬವನ್ನು ಕಟ್ಟಿದ ನೇತಾರ ಫಿಡೆಲ್‌ಕಾಸ್ಟ್ರೊರವರ ನಿಧನದ ಸುದ್ದಿ ಬಂದುದರಿಂದ ಅವರಿಗೆ ಗೌರವಪೂರ್ಣ ಶ್ರದ್ಧಾಂಜಲಿ ಅರ್ಪಿಸುವ ಠರಾವನ್ನು ಅಂಗೀಕರಿಸಲಾಯಿತು.

ಉದ್ಘಾಟನಾ ಅಧಿವೇಶನದಲ್ಲಿ ಎರಡು ಮಹತ್ವದ ಠರಾವುಗಳನ್ನು ಅಂಗೀಕರಿಸಲಾಯಿತು. ಒಂದು, ಕಾರ್ಮಿಕ ವರ್ಗವನ್ನು ಸಮಾಜದಲ್ಲಿನ ಎಲ್ಲ ಶೋಷಣೆಗಳನ್ನು ಅಂತ್ಯಗೊಳಿಸುವಲ್ಲಿ ತನ್ನ ಪಾತ್ರವನ್ನು ವಹಿಸಲು ಸಿದ್ಧಗೊಳಿಸುವ ಪ್ರಯತ್ನಗಳನ್ನು ಆರಂಭಿಸಿದ ಅಕ್ಟೋಬರ್ ಕ್ರಾಂತಿಯ ಶತಮಾನೋತ್ಸವದ ಆಚರಣೆ ಕುರಿತಾದದ್ದು.

ಎರಡನೆಯದ್ದು, ಇದ್ದಕಿದ್ದಂತೆ ಕೇಂದ್ರ ಸರಕಾರ 86% ನೋಟುಗಳನ್ನು ರದ್ದು ಮಾಡಿ ಜನಸಾಮಾನ್ಯರ ಮೇಲೆ ಅಗಣಿತ ಸಂಕಟಗಳನ್ನು ಹೇರಿದ ಕ್ರಮದ ಕುರಿತಾದ್ದು.

ಉದ್ಘಾಟನಾ ಅಧಿವೇಶನದ ನಂತರ ಒಂದು ಬೃಹತ್ ಮೆರವಣಿಗೆ ಮತ್ತು ಸಾರ್ವಜನಿಕ ಸಭೆ ನಡೆಯಿತು. ಇದರಲ್ಲಿ ಒಡಿಶಾದ ಎಲ್ಲ ಜಿಲ್ಲೆಗಳಿಂದ ಬಂದ ಕಾರ್ಮಿಕರು ಭಾಗವಹಿಸಿದ್ದರು. ಸಿಐಟಿಯು ಒಡಿಶಾ ರಾಜ್ಯಾಧ್ಯಕ್ಷರಾದ ಲಂಬೋದರ ನಾಯಕ್ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು.

ಪ್ರತಿನಿಧಿಗಳ ಅಧಿವೇಶನದಲ್ಲಿ ಪ್ರಧಾನ ಕಾರ್ಯದರ್ಶಿಗಳು ಎರಡು ಭಾಗಗಳಲ್ಲಿ ಮಂಡಿಸಿದ ವರದಿಯ ಮೇಲೆ 49 ಪ್ರತಿನಿಧಿಗಳು ಮೊದಲ ಭಾಗದ ಮೇಲಿನ ಚರ್ಚೆಯಲ್ಲಿ ಬಾಗವಹಿಸಿದರೆ, ಒಂದು ಸಮರಧೀರ ಸಂಘಟನೆಯನ್ನು ಕಟ್ಟುವುದರ ಕುರಿತಾದ ಎರಡನೇ ಭಾಗದ ಮೇಲಿನ ಚರ್ಚೆಯಲ್ಲಿ 46 ಪ್ರತಿನಿಧಿಗಳು ಭಾಗವಹಿಸಿದರು.

ನವಂಬರ್ 28 ರಂದು ಬಿಜೆಪಿ ಸರಕಾರದ ಅನಾಣ್ಯೀಕರಣ ಕ್ರಮ ಹೇರಿದ ಸಂಕಟಗಳ ವಿರುದ್ಧ ಪ್ರತಿಭಟನಾ ದಿನವನ್ನು ಆಚರಿಸಬೇಕೆಂಬ ಎಡಪಕ್ಷಗಳ ಕರೆಯ ಹಿನ್ನೆಲೆಯಲ್ಲಿ ಅಧಿವೇಶನ ಆರಂಭವಾಗುವ ಮೊದಲು ಎಲ್ಲ ಪ್ರತಿನಿಧಿಗಳು ಪುರಿಯ ಸಮುದ್ರ ತಟದಲ್ಲಿ ಮಾನವ ಸರಪಣಿಯನ್ನು ನಿರ್ಮಿಸಿದ್ದು ಪಟ್ಟಣದ ಜನಗಳ ಮೆಚ್ಚುಗೆ ಗಳಿಸಿತು.


ಸಮ್ಮೇಳನ ಮೂರು ಪ್ರತ್ಯೇಕ ಆಯೋಗಗಳಲ್ಲಿ 1)ಜಾಗತೀಕರಣ, ಔದ್ಯೋಗಿಕ ಸಂಬಂಧಗಳು ಮತ್ತು ಕಾರ್ಮಿಕ ಕಾನೂನುಗಳ ಸುಧಾರಣೆ, 2) ಕೋಮುವಾದ ಮತ್ತು ಕಾರ್ಮಿಕ ವರ್ಗದ ಪಾತ್ರ ಹಾಗೂ 3) ಕಾರ್ಮಿಕ-ರೈತ ಮೈತ್ರಿ ಕುರಿತು ಆಮೂಲಾಗ್ರ ಚರ್ಚೆ ನಡೆಸಿತು. ಈ ಚರ್ಚೆಗಳ ಶಿಫಾರಸುಗಳನ್ನು ನವಂಬರ್ 30 ರಂದು ಸಮ್ಮೇಳನದ ಮುಂದೆ ಮಂಡಿಸಲಾಯಿತು.

24 ರಾಜ್ಯಗಳಿಂದ ಮತ್ತು ಸೋದರ ಕಾರ್ಮಿಕ ಸಂಘಟನೆಗಳಿಂದ 2033 ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದರು. ಇವರಲ್ಲಿ 447 ಮಹಿಳೆಯರು. ಮೊದಲ ಬಾರಿಗೆ ಮಹಿಳೆಯರ ಭಾಗವಹಿಸುವಿಕೆ 22% ತಲುಪಿತು. ಮೊದಲ ಅಖಿಲ ಭಾರತ ಮಹಿಳಾ ಅಧ್ಯಕ್ಷರನ್ನು ಆರಿಸಿದ ದಾಖಲೆಯೂ ಈ ಸಮ್ಮೇಳನದ್ದಾಗಿದೆ.


ಒರಿಸ್ಸಾದ ಕಡಲ ಕಿನಾರೆಯಲ್ಲಿ ನೋಟು ಅಮಾನ್ಯಗೊಳಿಸಿದರ ವಿರುದ್ಧ ಸಮ್ಮೇಳನದ ಪ್ರತಿನಿಧಿಗಳ ಮಾನವ ಸರಪಳಿ


ಕರ್ನಾಟಕದ ಪ್ರತಿನಿಧಿಗಳು


ಅಧ್ಯಕ್ಷರು: ಕೆ.ಹೇಮಲತಾ


ಪ್ರಧಾನ ಕಾರ್ಯದರ್ಶಿ: ತಪನ್ ಸೇನ್

ಸಿಐಟಿಯುನ 15ನೇ ಅಖಿಲ ಭಾರತ ಸಮ್ಮೇಳನ 460 ಸದಸ್ಯರಿರುವ ಜನರಲ್ ಕೌನ್ಸಿಲ್ ಮತ್ತು 160 ಸದಸ್ಯರಿರುವ ಕಾರ್ಯಕಾರಿ ಸಮಿತಿಯನ್ನು ಆರಿಸಿತು. **ಕೆ.ಹೇಮಲತಾ** ಅವರು ಅಧ್ಯಕ್ಷರಾಗಿಯೂ, **ತಪನ್‌ಸೇನ್** ಅವರು ಪ್ರಧಾನ ಕಾರ್ಯದರ್ಶಿಯಾಗಿಯೂ ಚುನಾಯಿತರಾಗಿದ್ದಾರೆ. ಇದುವರೆಗೆ ಅಧ್ಯಕ್ಷರಾಗಿದ್ದ **ಎ.ಕೆ.ಪದ್ಮನಾಭನ್** ಸೇರಿದಂತೆ 16 ಉಪಾಧ್ಯಕ್ಷರುಗಳಿರುತ್ತಾರೆ. ಕರ್ನಾಟಕದಿಂದ **ಎಸ್.ವರಲಕ್ಷ್ಮಿ** ಸೇರಿದಂತೆ ಉಪಾಧ್ಯಕ್ಷರುಗಳಲ್ಲಿ ನಾಲ್ವರು ಮಹಿಳೆಯರಿದ್ದಾರೆ.

ಸಮ್ಮೇಳನ 16 ಕಾರ್ಯದರ್ಶಿಗಳನ್ನು ಆರಿಸಿತು. ಕರ್ನಾಟಕದ ಸಿಐಟಿಯು ಪ್ರಧಾನ ಕಾರ್ಯದರ್ಶಿಯಾದ **ಮೀನಾಕ್ಷಿಸುಂದರಂ** ಆಯ್ಕೆಯಾಗದ್ದಾರೆ. ಈ ಕಾರ್ಯದರ್ಶಿಗಳಲ್ಲಿ ಮೂವರು ಮಹಿಳೆಯರು. ಹಿರಿಯ ಕಾರ್ಮಿಕ ಮುಖಂಡ **ಸುಕೊಮಲ್ ಸೇನ್** ಖಾಯಂ ಆಹ್ವಾನಿತರಾಗಿರುತ್ತಾರೆ.

ಕರ್ನಾಟಕದ ಕಾರ್ಯಕಾರಿ ಸಮಿತಿ ಸದಸ್ಯರು: ವಿ.ಜೆ.ಕೆ.ನಾಯರ್, ಕೆ.ಎನ್.ಉಮೇಶ್, ಸಯ್ಯದ್ ಮುಜೀಬ್, ವಸಂತ ಆಚಾರಿ, ಯಮುನಾ ಗಾಂವ್ಕರ್,

ಕರ್ನಾಟಕದ ಜನರಲ್ ಕೌನ್ಸಿಲ್ ಸದಸ್ಯರು:
ಕೆ.ಶಂಕರ್, ಕೆ.ಮಹಾಂತೇಶ್, ವೀರಸ್ವಾಮಿ, ಮಂಟನಗೌಡ, ಶಾಂತಾ ಎನ್ ಘಂಟೆ, ಹೆಚ್.ಎಸ್.ಸುನಂದ, ಬಾಲಕೃಷ್ಣ ಶೆಟ್ಟಿ, ಸುನೀಲ್ ಕುಮಾರ್ ಬಜಾಲ್, ಆರ್.ಎಸ್.ಬಸವರಾಜು, ಮಾಲಿನಿ ಮೆಸ್ತಾ, ಮಹೇಶ್ ಪತ್ತಾರ್, ಎನ್.ಪ್ರತಾಪ್ ಸಿಂಹ, ಪಿ.ಕೆ. ಪರಮೇಶ್ವರ್.

ಕ್ಯಾಸ್ಟ್ರೋ – ಪ್ರಸಿದ್ಧ ಹೇಳಿಕೆಗಳು

ಕ್ರಾಂತಿ ಹೂವಿನ ಹಾಸಿಗೆ ಅಲ್ಲ. ಕ್ರಾಂತಿ ಎಂದರೆ ಭೂತ ಮತ್ತು ಭವಿಷ್ಯದ ನಡುವೆ ಸಾವಿನ ವರೆಗೆ ಹೋರಾಟ

ನಾನು ಕ್ರಾಂತಿಯನ್ನು ಆರಂಭಿಸಿದ್ದು 82 ಜನರೊಂದಿಗೆ. ನಾನು ಇನ್ನೊಂದು ಬಾರಿ ಮಾಡುವುದಾದರೆ ಅಚಲ ನಂಬಿಕೆಯಿರುವ 10 – 15 ಜನರೊಂದಿಗೆ ಮಾಡುತ್ತೇನೆ. ಕ್ರಾಂತಿಕಾರಿಗಳ ಸಂಖ್ಯೆ ಮುಖ್ಯವಲ್ಲ. ಅಚಲ ನಂಬಿಕೆ ಮತ್ತು ಕಾರ್ಯಯೋಜನೆ ಮುಖ್ಯ.

ಬಂಡವಾಳಶಾಹಿ ಅಮೆರಿಕದಲ್ಲಾಗಲಿ ಜಗತ್ತಿನ ಯಾವ ಜಾಗದಲ್ಲೇ ಆಗಲಿ ಕೆಲಸ ಮಾಡುವುದಿಲ್ಲ. ಅದು ಬಿಕ್ಕಟ್ಟಿನಿಂದ ಬಿಕ್ಕಟ್ಟಿಗೆ ಜಾರುತ್ತಿರುತ್ತದೆ. ಪ್ರತಿ ಬರಿ ಇನ್ನಷ್ಟು ಗಂಭೀರ ಬಿಕ್ಕಟ್ಟಿಗೆ. ಇದು ಬಂಡವಾಳಶಾಹಿಯ ಬಗ್ಗೆ ನನ್ನ ಅಭಿಪ್ರಾಯ ಎಂಬುದು ಎಲ್ಲರಿಗೂ ಗೊತ್ತು.

ಮಾನವ ಹಕ್ಕುಗಳ ಬಗ್ಗೆ ಕೆಲವರು ಮತ್ತೆ ಮತ್ತೆ ಮಾತಾಡುತ್ತಾರೆ. ಮನುಕುಲದ ಹಕ್ಕಿನ ಬಗ್ಗೆಯೂ ಮಾತಾಡಬೇಕಿದೆ.
ಕೆಲವರು ಐಶಾರಾಮಿ ಕಾರುಗಳಲ್ಲಿ ಪ್ರಯಾಣಿಸಲು ಸಾಧ್ಯವಾಗುವಂತೆ, ಇನ್ನುಳಿದವರು ಯಾಕೆ ಬರಿಗಾಲಲ್ಲಿ ನಡೆಯಬೇಕು?
ಕೆಲವರು 70 ವರ್ಷ ಬದುಕಲು, ಇನ್ನುಳಿದವರು ಯಾಕೆ 35 ವರ್ಷ ಮಾತ್ರ ಬದುಕಬೇಕು?
ಕೆಲವರು ಭಾರೀ ಶ್ರೀಮಂತರಾಗಲು, ಇನ್ನುಳಿದವರು ಯಾಕೆ ಕಡು ಬಡವರಾಗಬೇಕು?
ನಾನು ತುಣುಕು ಬ್ರೆಡ್ ಇಲ್ಲದ ಮಕ್ಕಳ ಪರವಾಗಿ ಮಾತಾಡುತ್ತಿದ್ದೇನೆ
ನಾನು ಔಷಧಿ ಸಿಗದ ಬಡ ರೋಗಿಗಳ ಪರವಾಗಿ ಮಾತಾಡುತ್ತಿದ್ದೇನೆ
ನಾನು ಬದುಕುವ ಮತ್ತು ಮಾನವ ಘನತೆಯ ಹಕ್ಕನ್ನು ನಿರಾಕರಿಸಲಾಗಿರುವವರ ಪರವಾಗಿ ಮಾತಾಡುತ್ತಿದ್ದೇನೆ

ನನ್ನ ಮೇಲೆ ದೋಷಾರೋಪ ಮಾಡಿ. ಪರವಾಗಿಲ್ಲ. ಚರಿತ್ರೆ ನನ್ನನ್ನು ದೋಷಮುಕ್ತಗೊಳಿಸುತ್ತದೆ.

ಬಂಡವಾಳಶಾಹಿಗೆ ನೈತಿಕ ಮೌಲ್ಯಗಳಿಲ್ಲ. ಅಲ್ಲಿ ಎಲ್ಲವೂ ಮಾರಾಟಕ್ಕಿರುತ್ತದೆ. ಈ ಸನ್ನಿವೇಶದಲ್ಲಿ ಜನರನ್ನು ಶಿಕ್ಷಿತರನ್ನಾಗಿಸುವುದು ಕಷ್ಟ. ಜನ ಬಹಳ ಸ್ವಾರ್ಥಿಗಳಾಗುತ್ತಾರೆ. ಕೆಲವೊಮ್ಮೆ ಡಕಾಯಿತರೂ ಆಗುತ್ತಾರೆ?

ಫಿಡೆಲ್ ಕ್ಯಾಸ್ಟ್ರೋ : ಕಣ್ಮರೆಯಾದ ಕ್ರಾಂತಿಕಾರಿ........ ಪುಟ 8 ರಿಂದ

ಕೆನ್ನೆಡಿ, ಜಾನ್ಸನ್, ನಿಕ್ಸನ್, ಫೋರ್ಡ್, ಕಾರ್ಟರ್, ರೇಗನ್, ಹಿರಿಯ ಬುಷ್, ಕ್ಲಿಂಟನ್, ಕಿರಿಯ ಬುಷ್, ಹೀಗೆ ಅಮೇರಿಕದ 11 ಅಧ್ಯಕ್ಷರುಗಳನ್ನು ತಮ್ಮ ಅಧಿಕಾರಾವಧಿಯಲ್ಲಿ ಫಿಡೆಲ್ ಎದುರಿಸಿದರು. ಇವರುಗಳು ಸಿಐಎ ಮುಖಾಂತರ ಫಿಡೆಲ್‌ರನ್ನು ಕೊಲ್ಲಲು ನಡೆಸಿದ 634 ವಿಫಲ ಪ್ರಯತ್ನಗಳು ಜಾಗತಿಕ ದಾಖಲೆಯೇ ಸರಿ !

ಕ್ರಾಂತಿಯಾದ ಎರಡೇ ವರ್ಷಗಳಲ್ಲಿ ಕ್ಯೂಬವನ್ನು ವಶಪಡಿಸಿಕೊಳ್ಳಲು ಅಮೇರಿಕದ ಮಿಲಿಟರಿ 1961 ರಲ್ಲಿ 'ಬೇ ಆಫ್ ಪಿಗ್ಸ್'ನಲ್ಲಿ ಪ್ರಯತ್ನ ನಡೆಸಿತು. ಇದಕ್ಕೆ ಪ್ರತಿರೋಧವಾಗಿ ಅಂದಿನ ಸಮಾಜವಾದಿ ರಷ್ಯಾ ಕ್ಯೂಬಾದ ಪರವಾಗಿ ಕ್ಷಿಪಣಿಗಳನ್ನು ತಂದು ನಿಲ್ಲಿಸಿತು. ಇನ್ನೇನು ಮೂರನೇ ಪ್ರಪಂಚ ಯುದ್ಧ ನಡೆದೇ ಬಿಡುತ್ತದೆ ಎನ್ನುವಂತಾಗಿತ್ತು. ವಿಶ್ವಸಂಸ್ಥೆಯಲ್ಲಿ ಸಂ.ರಾ.ಅಮೇರಿಕದ ವಿರುದ್ಧ ಸತತವಾಗಿ ತೀರ್ಮಾನಗಳಾಗುತ್ತಿದ್ದರೂ, ತೊಂಬತ್ತರ ದಶಕದಲ್ಲಿ ಜಾರಿ ಮಾಡಿದ 'ಹೆಲ್ಮ್ಸ್–ಬರ್ಟನ್ ಆಕ್ಟ್' ಹೆಸರಲ್ಲಿ ಅದು ಆರ್ಥಿಕ ದಿಗ್ಬಂಧನಗಳನ್ನು ವಿಧಿಸಿದೆ. 2004 ರಲ್ಲಿ 'ಟೊರಿಸೆಲ್ಲಿ ತಿದ್ದುಪಡಿ' ಮೂಲಕ ಕಿರುಕುಳಗಳನ್ನು ಮತ್ತಷ್ಟು ಹೆಚ್ಚಿಸಿದೆ. ಈ ದಿಗ್ಬಂಧನವು ದೇಶದ ಬೆಳವಣಿಗೆಗೆ ಅಡ್ಡಿಯಾದದ್ದು ಮಾತ್ರವಲ್ಲ, ಹಣಕಾಸು ಮತ್ತು ಆರ್ಥಿಕ ಸ್ಥಿತಿಯನ್ನು ಹಿಂಡಿಹಾಕಿದೆ. ಪರಿಣಾಮವಾಗಿ ಕ್ಯೂಬನ್ ಜನತೆ ಅಪಾರ ಕಷ್ಟಗಳನ್ನು ಅನುಭವಿಸುವಂತಾಗಿದೆ. ಕನಿಷ್ಟ ಜೀವ ರಕ್ಷಕ ಔಷಧಿಗಳನ್ನೂ ಸಿಗದ ಹಾಗೆ ಮಾಡಲಾಗಿದೆ.

ಅಮೇರಿಕವು ಕ್ಯೂಬಾದ ವಿರುದ್ಧ ಶಾಶ್ವತವಾದ ಸೈದ್ಧಾಂತಿಕ ದಾಳಿಯನ್ನು ನಡೆಸುತ್ತಿದೆ. ಫ್ಲಾರಿಡಾದಿಂದ ರೇಡಿಯೋ ಮಾರ್ತಿ ಮತ್ತು ಟಿವಿ ಮಾರ್ತಿ ಮೂಲಕ ಮಾಧ್ಯಮ ಯುದ್ಧವನ್ನು ನಡೆಸುತ್ತಿದೆ. ಕ್ಯೂಬಾ ವಿರೋಧಿ ಶಕ್ತಿಗಳಿಗೆ ಪ್ರತಿಕ್ರಾಂತಿ ನಡೆಸಲು 'ನ್ಯಾಷನಲ್ ಎಂಡೋಮೆಂಟ್ ಫಾರ್ ಡೆಮಾಕ್ರಸಿ' **(NED)** ಮೂಲಕ ಹಣ ಸಹಾಯ ಮಾಡುತ್ತಿದೆ. ಕ್ಯೂಬಾ ಮತ್ತು ಕ್ಯಾಸ್ಟ್ರೋ ಬಗ್ಗೆ ಜಗತ್ತಿನಾದ್ಯಂತ ಸುಳ್ಳು ಸುದ್ದಿಗಳನ್ನು ಹರಡಲು ಗಖಂಖಆ ಮೂಲಕ ಹಲವಾರು ಪತ್ರಕರ್ತರಿಗೆ ಹಣ ನೀಡುತ್ತಿದೆ. ಫ್ಲಾರಿಡಾವನ್ನು ನೆಲೆ ಮಾಡಿಕೊಂಡು ಕ್ಯೂಬಾದಲ್ಲಿ ಭಯೋತ್ಪಾದಕ ಕೃತ್ಯಗಳನ್ನು ನಡೆಸಲು – ಆಲ್ಫಾ 99 ಮತ್ತು ಒಮೇಗಾ 7 – ಎಂಬ ಸಂಘಟನೆಗಳಿಗೆ ಹಣ ನೀಡುತ್ತಿದೆ. ಕಳೆದ 50 ವರ್ಷಗಳಲ್ಲಿ ಸುಮಾರು 3500 ಕ್ಕೂ ಹೆಚ್ಚು ಕ್ಯೂಬನ್ನರನ್ನು ಭಯೋತ್ಪಾದಕ ಕೃತ್ಯಗಳ ಮೂಲಕ ಕೊಲೆ ಮಾಡಲಾಗಿದೆ. ಇದಕ್ಕಿಂತಲೂ ಹೆಚ್ಚು ಜನ ಗಾಯಗೊಂಡಿದ್ದಾರೆ. ಇಂತಹ ಎಲ್ಲಾ ಸಂದರ್ಭಗಳಲ್ಲಿ ಕ್ಯಾಸ್ಟ್ರೋ ಪ್ರತಿಯಾಗಿ ಅಮೇರಿಕದ ಯಾವ ಪ್ರದೇಶದ ಮೇಲೂ, ಯಾವ ಜನರ ಮೇಲೂ ಹಿಂಸೆಯನ್ನಾಗಲೀ, ದಾಳಿಗಳನ್ನಾಗಲೀ ಸಂಘಟಿಸಿಲ್ಲ ಎಂಬುದು ಅವರ ಧೋರಣೆಗೆ ಸಾಕ್ಷಿಯಾಗಿದೆ. ಫಿಡೆಲ್ ತಮ್ಮ ತಾಯ್ನೆಲವನ್ನು ರಕ್ಷಿಸಿಕೊಳ್ಳುವುದರ ಜೊತೆಯಲ್ಲೇ ಅಮೇರಿಕದ ಜನತೆಯನ್ನು ಪ್ರೀತಿಸಿದ್ದರು. 'ನಮ್ಮದೇನಿದ್ದರೂ ಅಮೇರಿಕನ್ ಪ್ರಭುತ್ವದ ನೀತಿಗಳ ವಿರುದ್ಧವೇ ಹೊರತು ಅಮೇರಿಕನ್ ಜನತೆಯ ವಿರುದ್ಧವಲ್ಲ' ಎಂದು ಸ್ಪಷ್ಟವಾಗಿ ಹೇಳಿದ್ದರು.

ಕ್ಯೂಬಾದ ಸಮಾಜವಾದ

ಫಿಡೆಲ್ ನಾಯಕತ್ವದಲ್ಲಿ ಕ್ಯೂಬಾ ಎಲ್ಲರೂ ಗೌರವದಿಂದ ಬಾಳುವಂತಹ ಸಮಾಜವನ್ನು ನಿರ್ಮಿಸಲು ಪ್ರಯತ್ನಿಸಿತು. ಅನಕ್ಷರತೆಯನ್ನು ತೊಡೆದುಹಾಕಲಾಯಿತು, ಸಾರ್ವತ್ರಿಕ ಉಚಿತ ಶಿಕ್ಷಣವನ್ನು ಜಾರಿಗೊಳಿಸಲಾಯಿತು, ಜಗತ್ತಿನ ಯಾವುದೇ ಮುಂದುವರಿದ ದೇಶಗಳಿಗೆ ಸವಾಲೆನಿಸುವಂತಹ ಉತ್ತಮ ಆರೋಗ್ಯ ವ್ಯವಸ್ಥೆಯನ್ನು ಜಾರಿಗೆ ತರಲಾಯಿತು, ಎಲ್ಲ ಕ್ಷೇತ್ರಗಳಲ್ಲೂ ಮಹಿಳೆಯರಿಗೆ ಸಮಾನ ಅವಕಾಶಗಳನ್ನು ಕಲ್ಪಿಸಲಾಯಿತು, ಜನಾಂಗೀಯ ಸಮಾನತೆಯನ್ನು ಸಾಧಿಸಲಾಯಿತು. ತನ್ನ ಸಾರ್ವಭೌಮತೆಯನ್ನು ಎತ್ತಿ ಹಿಡಿಯುತ್ತಾ, ಸಾಮ್ರಾಜ್ಯಶಾಹಿಯ ಮುಂದೆ ಮಂಡಿಯೂರದೆ, ಮಾನವ ಅಭಿವೃದ್ಧಿ, ಹೆಚ್ಚಿನ ಮಟ್ಟದ ಸಾಮಾನ್ಯ ಜ್ಞಾನ, ವೈದ್ಯಕೀಯ ಕ್ಷೇತ್ರದಲ್ಲಿ ಅಪಾರವಾದ ಸಾಧನೆ, ಜೈವಿಕ ವಿಜ್ಞಾನದಲ್ಲಿ ಉನ್ನತ ಮಟ್ಟದ ಸಂಶೋಧನೆ, ಕ್ರೀಡಾ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆ, ... ಮುಂತಾದ ಕ್ಷೇತ್ರಗಳಲ್ಲಿ ಮುಂದುವರಿದ ದೇಶಗಳೂ ನಾಚಿಕೆ ಪಡುವಂತೆ ಕ್ಯೂಬಾ ಹೆಜ್ಜೆಗಳನ್ನಿಟ್ಟಿದೆ. ಅಮೇರಿಕ ಒಂದಲ್ಲ ಒಂದು ರೀತಿಯಲ್ಲಿ ತನ್ನ ಹಿಡಿತವನ್ನು ಹೊಂದಿರುವ ಜಗತ್ತಿನ ಬಹುತೇಕ ಸಣ್ಣ ಮತ್ತು ಬಡ ದೇಶಗಳಲ್ಲಿ ಸಾಮಾನ್ಯವಾಗಿ ಕಾಣುವ ಖಾಯಿಲೆಗಳು, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಕ್ಕುಗಳ ನಿರಂತರ ಉಲ್ಲಂಘನೆ, ಅತಿ ಹೆಚ್ಚಿನ ಶಿಶು ಮರಣ ಪ್ರಮಾಣಗಳು, ಹಸಿವು, ಅನಕ್ಷರತೆ, ವಸತಿಹೀನತೆ, ನಿರುದ್ಯೋಗ, ಭಿಕ್ಷಾಟನೆ, ಬೀದಿ ಮಕ್ಕಳು, ಡ್ರಗ್ ವ್ಯಸನಿಗಳು, ಡ್ರಗ್ ಮಾಫಿಯಾ, ಹೆಚ್ಚಿನ ಅಪರಾಧ ಪ್ರಮಾಣ, ... ಇವಾವುವೂ ಕ್ಯೂಬಾದಲ್ಲಿ ಇಲ್ಲ ಎಂಬುದರ ಹಿಂದೆ ಫಿಡೆಲ್‌ರ ಅಪಾರವಾದ ಶ್ರಮವಿದೆ.


ಕ್ಯೂಬಾ ಕ್ರಾಂತಿಯು ಲ್ಯಾಟಿನ್ ಅಮೇರಿಕ ದೇಶಗಳ ಎಡ ಚಳುವಳಿಗೆ ಪ್ರೇರಕ ಶಕ್ತಿಯಾಗಿ ಕೆಲಸ ಮಾಡಿದೆ. ಫಿಡೆಲ್ ಮತ್ತು ಚೆ ಗೆವಾರ ಕ್ಯೂಬಾದಲ್ಲಿ ಮಾತ್ರವಲ್ಲ ಇಡೀ ದಕ್ಷಿಣ ಅಮೇರಿಕದ ಕ್ರಾಂತಿಕಾರಿ ಚಳುವಳಿಯ ಸ್ಫೂರ್ತಿದಾಯಕ ಸಂಕೇತಗಳಾಗಿದ್ದಾರೆ. ವಿಶೇಷವೆಂದರೆ ಇಂದಿಗೂ ಫಿಡೆಲ್ ಅಥವಾ ಕ್ಯೂಬಾ ಕ್ರಾಂತಿಯ ಯಾವುದೇ ಜೀವಂತ ನಾಯಕರ ಅಧಿಕೃತ ಭಾವಚಿತ್ರ, ವಿಗ್ರಹ, ನಾಣ್ಯ, ರಸ್ತೆ ಹೆಸರು, ಕಟ್ಟಡ, ಸ್ಮಾರಕ ಯಾವುದನ್ನೂ ಮಾಡಲಿಲ್ಲ. ಫಿಡೆಲ್ ಒಬ್ಬ ದೈತ್ಯ ವ್ಯಕ್ತಿತ್ವವಾದರೂ ವ್ಯಕ್ತಿಪೂಜೆಯನ್ನು ಬೆಳೆಸಲಿಲ್ಲ.

ಫಿಡೆಲ್ ಹೇಗೆ ರಾಷ್ಟ್ರೀಯವಾದಿಯೋ ಅಷ್ಟೇ ಅಂತರರಾಷ್ಟ್ರೀಯವಾದಿಯೂ ಹೌದು. 60' ಮತ್ತು 70'ರ ದಶಕಗಳಲ್ಲಿ ಮಧ್ಯ ಮತ್ತು ದಕ್ಷಿಣ ಅಮೇರಿಕದ – ಎಲ್ ಸಾಲ್ವಡೊರ್, ಗ್ವಾಟೆಮಾಲ, ನಿಕರಾಗುವಾ, ಕೊಲಂಬಿಯ, ವೆನಿಜುವೆಲಾ, ಬಬೊಲಿವಿಯಾ, ಅಜೆಂಟೈನಾ – ಮುಂತಾದ ದೇಶಗಳ ಸಶಸ್ತ್ರ ಬಂಡಾಯ ಹೋರಾಟಗಳಿಗೆ ಫಿಡೆಲ್ ಸಹಾಯ ಮಾಡಿದ್ದಾರೆ. ದಕ್ಷಿಣ ಆಫ್ರಿಕಾದ ಜನಾಂಗೀಯ ಬಿಳಿ ಸರ್ಕಾರದ ಮಧ್ಯಪ್ರವೇಶದ ವಿರುದ್ಧ ಅಂಗೋಲದಲ್ಲಿ ಕ್ಯೂಬನ್ ಸೈನ್ಯವನ್ನು ಕಳುಹಿಸಿದ್ದರು. ವರ್ಣಬೇಧ ನೀತಿಯ ವಿರುದ್ಧ ನೆಲ್ಸನ್ ಮಂಡೇಲರ ಹೋರಾಟಕ್ಕೆ ಫಿಡೆಲ್‌ರದು ಸಂಪೂರ್ಣ ಬೆಂಬಲ. ಕ್ಯೂಬ ತನ್ನ ಡಾಕ್ಟರ್‌ಗಳನ್ನು ಮತ್ತು ಶಿಕ್ಷಕರನ್ನು ಜಗತ್ತಿನೆಲ್ಲೆಡೆ ಜನರಿಗೆ ಸೇವೆ ಸಲ್ಲಿಸಲು ಕಳುಹಿಸಿರುವ ಮಾದರಿ ವಿಶಿಷ್ಟವಾದದ್ದು. ಇದರ ಹಿಂದೆ ಫಿಡೆಲ್ ಇದ್ದರು. 80'ರ ದಶಕದಲ್ಲಿ ಅಲಿಪ್ತ ಚಳುವಳಿಯ ಮುಂಚೂಣಿಯಲ್ಲಿದ್ದು, ಲ್ಯಾಟಿನ್ ಅಮೇರಿಕ ದೇಶಗಳ ವಿದೇಶೀ ಸಾಲಗಳ ರದ್ಧತಿಗಾಗಿ ಫಿಡೆಲ್ ಕೆಲಸ ಮಾಡಿದರು. 90'ರ ದಶಕದಲ್ಲಿ ಸಮಾಜವಾದಿ ಸೋವಿಯತ್ ರಷ್ಯಾದ ಕುಸಿತದಿಂದ ಕ್ಯೂಬನ್ ಕ್ರಾಂತಿ ಸಂಕಷ್ಟಗಳಿಗೆ ಸಿಲುಕಿತು. ಅದನ್ನು 'ವಿಶೇಷ ಅವಧಿ' ಎನ್ನಲಾಗಿದೆ. ವಿರೋಧಿಗಳೂ ಆಶ್ಚರ್ಯ ಪಡುವಂತೆ ಫಿಡೆಲ್ ನೇತೃತ್ವದಲ್ಲಿ ಆ ಸಂದರ್ಭವನ್ನು ನಿಭಾಯಿಸಿದರು.

ಲ್ಯಾಟಿನ್ ಅಮೆರಿಕದ 'ಎಳೆಗೆಂಪು ಅಲೆ'ಯ ಹಿಂದಿನ ಸ್ಫೂರ್ತಿ

ಸಮಾಜವಾದಿ ಕ್ರಾಂತಿಗಳ ಮೂಲಕ ಜಗತ್ತಿನ ಮೇಲೆ ಪ್ರಭಾವ ಬೀರಿದ ಲೆನಿನ್, ಸ್ಟಾಲಿನ್, ಮಾವೋ, ಕಿಮ್–ಉಲ್–ಸುಂಗ್, ಹೊ ಚಿ ಮಿನ್ ನಂತರ ಅಂತಹುದೊಂದು ಪ್ರಭಾವ ಬೀರಿದ್ದು ಫಿಡೆಲ್ ಎಂದರೆ ತಪ್ಪಾಗಲಿಕ್ಕಿಲ್ಲ. ಮೂರನೇ ಜಗತ್ತಿನ ಎಡ ಮತ್ತು ಪ್ರಗತಿಪರ ಚಳುವಳಿಗಳ ಮೇಲೆ ಅಪಾರ ಪರಿಣಾಮವನ್ನು ಬೀರಿದ ಕ್ಯೂಬಾದ ಸಮಾಜವಾದಿ ಕ್ರಾಂತಿಯು, ಫಿಡೆಲ್‌ರ ಮಾರ್ಕ್ಸ್‌ವಾದಿ ಸಿದ್ಧಾಂತ ಮತ್ತು ಆಚರಣೆಯ ಒಂದು ಕಾಣಿಕೆಯಾಗಿದೆ. 20ನೇ ಶತಮಾನದ ಸಮಾಜವಾದಿ ಕ್ರಾಂತಿಗಳ ಮರೆಯಲಾಗದ ನಾಯಕರ ಪರಂಪರೆಯಲ್ಲಿ ಬಹುಶಃ ಕೊನೆಯ ಕೊಂಡಿಯಾಗಿ, ಫಿಡೆಲ್ ಚರಿತ್ರೆಯಲ್ಲಿ ಚಿರಸ್ಥಾಯಿಯಾಗಿದ್ದಾರೆ. ಜಗತ್ತು ಸೋವಿಯೆಟ್ ಕುಸಿತ, ಜಾಗತೀಕರಣದ ಅಟ್ಟಹಾಸದಿಂದ ಬಳಲುತ್ತಿದ್ದ ಪರಿಸ್ಥಿತಿಯಲ್ಲೇ 1990ರ ದಶಕದ ಕೊನೆಯ ಹೊತ್ತಿಗೆ ಆರಂಭವಾಗಿ ದಶಕದ ಕಾಲ ಮುಂದುವರೆದ, ಸ್ವಲ್ಪ ಹಿನ್ನಡೆ ಕಂಡರೂ ಇನ್ನೂ ಸೋಲದ 'ಎಳೆಗೆಂಪು ಅಲೆ' (ನವ–ಉದಾರವಾದ–ವಿರೋಧಿ ಎಡ–ಪ್ರಜಾಸತ್ತಾತ್ಮಕ ಮೇಲುಗೈ ಮತ್ತು ಸರಕಾರಗಳ ಸ್ಥಾಪನೆ) ಯ ಹಿಂದಿದ್ದ ಅದಮ್ಯ ವ್ಯೂಹ ಮತ್ತು ಸ್ಫೂರ್ತಿ ಫಿಡೆಲ್ ರದ್ದು.

ಕ್ಷಣ ಕ್ಷಣವೂ ಅಮೇರಿಕದ ಸಾಮ್ರಾಜ್ಯಶಾಹಿಗಳ ಕುತಂತ್ರಗಳನ್ನು ಎದುರಿಸುತ್ತಾ ಇಡೀ ಜೀವನವನ್ನು ಜನತೆಗಾಗಿ ಮುಡಿಪಿಟ್ಟ ಫಿಡೆಲ್‌ರದು ತೆರದಿಟ್ಟ ಬದುಕು. ತಮ್ಮ ತಂದೆ ಸಂಪಾದಿಸಿದ್ದ ಸುಮಾರು 25,000 ಎಕರೆ ಭೂಮಿಯನ್ನು ಕ್ರಾಂತಿಯಾಗುತ್ತಲೇ ಜನರಿಗೆ ಫಿಡೆಲ್ ಹಂಚಿಕೆ ಮಾಡಿದರು. ವಾರದ ಏಳೂ ದಿನವೂ ಕೆಲಸ ಮಾಡುತ್ತಿದ್ದ ಫಿಡೆಲ್‌ಗೆ ದಿನ ಕೊನೆಯಾಗುತ್ತಿದ್ದುದು ಮುಂಜಾನೆ 4 ಅಥವಾ 5 ಗಂಟೆಗೆ. ದಿನವೊಂದಕ್ಕೆ ಸರಾಸರಿ 4 ಗಂಟೆ ನಿದ್ರೆ ಮಾಡುತ್ತಿದ್ದ ಫಿಡೆಲ್ ಅತ್ಯಂತ ಕ್ರಿಯಾಶೀಲ ಮತ್ತು ಅಪಾರ ಜ್ಞಾನ ಸಂಪತ್ತಿನ ಕಣಜ. ಭವಿಷ್ಯದ ಬಗ್ಗೆ ಅಂದಾಜು ಮಾಡುವುದು ಮತ್ತು ಇತಿಹಾಸದ ಬಗ್ಗೆ ಆಸಕ್ತಿ ಫಿಡೆಲ್‌ರ ವಿಶೇಷ. ಅವರ ದಣಿವರಿಯದ ದುಡಿತದ ವೇಗಕ್ಕೆ ಯಾರೂ ಸಾಟಿಯಿಲ್ಲ. ಜಾಗತೀಕರಣದ ಅಪಾಯಗಳ ಬಗ್ಗೆ ಯುವಜನತೆಯನ್ನು ಸಜ್ಜುಗೊಳಿಸಲು ತುಂಬಾ ಮಹತ್ವ ನೀಡುತ್ತಿದ್ದರು. ಫಿಡೆಲ್ ನಿಖರತೆ, ಖಚಿತತೆ, ನಿಷ್ಕೃಷ್ಟತೆ, ಶಿಸ್ತು ಇವುಗಳನ್ನು ತುಂಬಾ ಪಾಲಿಸುತ್ತಿದ್ದರು. ಯಾವುದೇ ವಿಚಾರದಲ್ಲಿ ಗಣಿತದ ರೀತಿಯ ಖಚಿತತೆ ಬಯಸುತ್ತಿದ್ದರು. ಅಂದಾಜು ಮಾಡಿ ಹೇಳುವುದನ್ನು ಅವರು ಒಪ್ಪುತ್ತಿರಲಿಲ್ಲ. ಜ್ಞಾಪಕ ಶಕ್ತಿಗೆ ಮತ್ತೊಂದು ಹೆಸರನ್ನು ಏನಾದರೂ ಕೊಡುವುದಿದ್ದರೆ ಅದನ್ನು ಫಿಡೆಲ್ ಎನ್ನಬೇಕು. ಕ್ಯೂಬಾದ ಜನಮನವೆಲ್ಲವನ್ನೂ ಆವರಿಸಿಕೊಂಡಿದ್ದ ಫಿಡೆಲ್ ಭೌತಿಕವಾಗಿ ಇಲ್ಲವೆನ್ನುವ ಸಂಗತಿಯನ್ನು ಒಪ್ಪಿಕೊಳ್ಳುವುದಕ್ಕೆ ಕಾಲ ಹಿಡಿಯುತ್ತದೆ. ಆದರೆ ಹೆಚ್ಚುತ್ತಿರುವ ಬಂಡವಾಳಶಾಹಿ ಜಾಗತೀಕರಣದ ಪ್ರಸ್ತುತ ಸಂದರ್ಭದಲ್ಲಿ ಫಿಡೆಲ್‌ರ ವಿಚಾರಗಳು ಜೀವಂತವಾಗಿವೆ. ಭಾರತದಲ್ಲಿನ ಜನಪರ ಮತ್ತು ಕ್ರಾಂತಿಕಾರಿ ಹೋರಾಟಗಳಿಗೆ ಒಂದು ಸಮೃದ್ಧ ಅನುಭವವಾಗಿ ನಮ್ಮ ಮುಂದಿವೆ. ●



ಫಿಡೆಲ್ ಹೆಸರದು ರೋಮಾಂಚನ

1997 ರಲ್ಲಿ ನಾನು, ಎಸ್.ವೈ.ಗುರುಶಾಂತ್ ಮತ್ತು ಜಿ.ಎನ್.ಮೋಹನ್, ಹವಾನಾದಲ್ಲಿ ನಡೆದ ವಿಶ್ವ ವಿದ್ಯಾರ್ಥಿ ಯುವಜನ ಉತ್ಸವದಲ್ಲಿ ಪಾಲ್ಗೊಂಡಿದ್ದೆವು. ಫಿಡೆಲ್ ಬಗ್ಗೆ ಕೇಳಿದ್ದ ಒಂದೊಂದು ಮಾತು ಅಕ್ಷರಶಃ ನಾವು ಯಾವಾಗ ಅವರನ್ನು ನೋಡುತ್ತೇವೆ ಎನ್ನುವಂತಾಗಿತ್ತು. ಉತ್ಸವದ ಉದ್ಘಾಟನೆ ನಡೆದ ಕ್ರೀಡಾಂಗಣದಲ್ಲಿ ಸೇರಿದ್ದ ಲಕ್ಷಾಂತರ ಜನರ ನಡುವೆ ಫಿಡೆಲ್ ಎಲ್ಲಿ ಬೇಕಾದರೂ ಬಂದು ಕೂತುಬಿಡಬಹುದು ಎಂಬ ಮಾತು ನಮ್ಮನ್ನು ಮತ್ತಷ್ಟು ರೋಮಾಂಚಿತರನ್ನಾಗಿ ಮಾಡಿತ್ತು. ಅಲ್ಲೇ ನೂರು ಮೀಟರ್ ದೂರದಲ್ಲಿ ಫಿಡೆಲ್ ಪ್ರೇಕ್ಷಕರ ಜೊತೆ ಕೂತಿದ್ದಾರೆ ಎಂದರು. ಸಾಹಸ ಪಟ್ಟು ಹತ್ತಿರ ಹೋದೆವು. ಫಿಡೆಲ್ ಒಬ್ಬ ಸಾಮಾನ್ಯ ಮನುಷ್ಯನ ಹಾಗೆ ಕೂತಿದ್ದರು. ಏನೋ ಧನ್ಯ ಭಾವ. ಜಗತ್ತಿನ ಒಬ್ಬ ಶ್ರೇಷ್ಟ ಕ್ರಾಂತಿಕಾರಿಯನ್ನು ಕಂಡ ಭಾವ.

ಒಬ್ಬ ಕ್ರಾಂತಿಕಾರಿಗೆ ಮಾರ್ಕ್ಸ್‌ವಾದ ಮತ್ತು ಲೆನಿನ್‌ವಾದ ಕಾಂಪಾಸ್ ಇದ್ದ ಹಾಗೆ. ಅದಿಲ್ಲದೆ ಮುನ್ನಡೆಯಲಾಗದು ಎಂದರು ಫಿಡೆಲ್. ಈ ಕಾಂಪಾಸ್‌ನ್ನು ಹಿಡಿದು ಕ್ರಾಂತಿಯನ್ನು ಮುನ್ನಡೆಸಿದ ಫಿಡೆಲ್ ಇನ್ನು ನಮ್ಮೊಂದಿಗಿಲ್ಲ. 'ಸಮಾಜವಾದ ಇಲ್ಲವೇ ಸಾವು' ಎಂದೇಕೆ ಹೇಳುತ್ತಾರೆ ಎಂದು ಕೆಲವರು ಕೇಳುತ್ತಾರೆ; 'ವ್ಯಕ್ತಿಗಳನ್ನು ಕೊಲ್ಲಬಹುದು, ಚಿಂತನೆಗಳನ್ನು ಕೊಲ್ಲಲಾಗದು' ಎಂದು ಫಿಡೆಲ್ ಹೇಳಿದ್ದಾರೆ. ಜಾಗತೀಕರಣವನ್ನು ಎದುರಿಸಲು ಜಗತ್ತಿನ ತುಂಬೆಲ್ಲಾ ಸಮಾಜವಾದಿ ಚಿಂತನೆಗಳನ್ನು ಜಾಗತೀಕರಿಸಬೇಕು ಎಂದು ಫಿಡೆಲ್ ಹೇಳಿದ ಮಾತುಗಳಿವೆ.



ವಿಶ್ವಸಂಸ್ಥೆ ಈ ವರ್ಷದ ಹಿಂಸೆ ನಿರ್ಮೂಲನೆಯ ದಿನವನ್ನು 'ಕೊನೆಗೊಳಿಸಲು ಒಗ್ಗಟ್ಟಾಗಿ–ಅದಕ್ಕಾಗಿ ನಿಧಿ ಸಂಗ್ರಹಿಸಿ', ವಿಶ್ವವನ್ನು ಕೇಸರಿ ಮಾಡಿ ಎಂದು ಕರೆ ನೀಡಿದೆ. ಭಾರತದಲ್ಲಿ ನಾವು ಕೋಮುವಾದೀಕರಣವನ್ನು ಕೇಸರೀಕರಣವೆಂದು ತಪ್ಪಾಗಿ ಅರ್ಥೈಸಿದ್ದೇವೆ. ಆದರೆ ವಿಶ್ವ ಸಂಸ್ಥೆ ಕೇಸರಿಯನ್ನು ಸಶಕ್ತತೆಯ ಸಂಕೇತವಾಗಿ ಗುರುತಿಸುತ್ತದೆ ಮತ್ತು 'ನವೆಂಬರ್ 25 ರ ಲಿಂಗಾಧಾರಿತ ಹಿಂಸೆ ನಿರ್ಮೂಲನೆಯ ದಿನದಿಂದ ಡಿಸೆಂಬರ್ 10 ರ ಮಾನವ ಹಕ್ಕುಗಳ ದಿನ' ದ ವರೆಗಿನ 16 ದಿನಗಳ ಕಾರ್ಯಾಚರಣೆಯಲ್ಲಿ ಭಾಗವಹಿಸುವವರೆಲ್ಲರೂ ಕೇಸರಿ ಬಣ್ಣದ ಉಡುಪು, ಸಂಕೇತಗಳನ್ನು ಬಳಸುವಂತೆ ಕರೆ ನೀಡಿದೆ.

ಮೌನ ಮುರಿದು ಗಟ್ಟಿ ಮಾತನಾಡಿ, ಸಾಕು ಹಿಂಸೆ ನಿಲ್ಲಿಸಿ

ಜಗತ್ತು ಮೌನದ ಗೋಡೆಯನ್ನೊಡೆದು ಗಟ್ಟಿ ಧ್ವನಿಯಲ್ಲಿ ಹೇಳಬೇಕು, ಸಾಕು ಹಿಂಸೆ ನಿಲ್ಲಿಸಿ, ಅದಕ್ಕೊಂದು ಪೂರ್ಣ ವಿರಾಮ ಹಾಕಿ. ವಿಶ್ವಸಂಸ್ಥೆಯ ಮಾಜಿ ಪ್ರಧಾನ ಕಾರ್ಯದರ್ಶಿ ಬಾನ್.ಕೀ ಮೂನ್ ಅವರ ಮಾತಿನಲ್ಲಿ ಹೇಳುವುದೆಂದರೆ "ಮೌನದ ಗೋಡೆಗಳನ್ನೊಡೆದು ಮಹಿಳೆಯರಿಗೆ ಕಾನೂನಿನ ಸಾಧ್ಯತೆಗಳನ್ನು ಒದಗಿಸಲು ಇದು ಸಕಾಲ"

ಹಿಂಸೆ ಎಂದರೇನು. ವಿಶ್ವಸಂಸ್ಥೆ ಹೇಳುತ್ತದೆ, ಕೇವಲ ಪ್ರಕಟಿತ ಸ್ವರೂಪದ ಹೊಡೆತ ಬಡಿತ, ಅತ್ಯಾಚಾರ ದೌರ್ಜನ್ಯಗಳು ಮಾತ್ರವಲ್ಲ, ಬದಲಿಗೆ ಮಾನಸಿಕ, ಭಾವನಾತ್ಮಕ ಕಿರಿಕಿರಿ, ಕಿರುಕುಳಗಳೂ ಹಿಂಸೆಯೇ ಎಂದು. ಮಹಿಳೆಯ ಸರ್ವಾಂಗೀಣ ಅಭಿವೃದ್ಧಿಗೆ ಮಾರಕವಾಗಬಹುದಾದ, ಅವಳ ಸ್ವಾತಂತ್ರಕ್ಕೆ ಅಡ್ಡಿಯಾಗಬಹುದಾದ ಪ್ರತಿಯೊಂದು ಕ್ರಿಯೆಯನ್ನೂ ವಿಶ್ವಸಂಸ್ಥೆ ಹಿಂಸೆಯೆಂದು ಪರಿಗಣಿಸಬೇಕೆಂದೇ ಹೇಳುತ್ತದೆ. ಜಗತ್ತಿನಾದ್ಯಂತ ಮಹಿಳೆಯರು ಎದುರಿಸುವ ಹಿಂಸೆಗೆ ಉದಾಹರಣೆಯಾಗಿ ಈ ಕೆಳಗಿನ ಅಂಕಿ ಅಂಶಗಳನ್ನು ನೋಡಬಹುದು.


- ಪ್ರತೀ ಹತ್ತು ಮಹಿಳೆಯರಲ್ಲಿ 7 ಜನರು ಒಂದು ಬಾರಿಯಾದರೂ ದೈಹಿಕ ಅಥವಾ ಲೈಂಗಿಕ ಹಿಂಸೆ ಅನುಭವಿಸಿದ್ದಾರೆ.
- ಪ್ರತಿ 3 ರಲ್ಲಿ ಒಬ್ಬರು ದೌರ್ಜನ್ಯಕ್ಕೆ ತುತ್ತಾದವರಿರುತ್ತಾರೆ.
- ಪ್ರತಿ ವರ್ಷ ಸುಮಾರು 5.50 ಲಕ್ಷ ಹೆಣ್ಣು ಮಕ್ಕಳು ಮತ್ತು ಮಹಿಳೆಯರು ವೇಶ್ಯಾವಾಟಿಕೆಗೆ ತಳ್ಳಲ್ಪಡುತ್ತಿದ್ದಾರೆ.
- ಜಗತ್ತಿನ ಶೇ:50 ರಷ್ಟು 16 ವರ್ಷ ವಯಸ್ಸಿನೊಳಗಿನ ಬಾಲಕಿಯರು ಮತ್ತು ಯುವತಿಯರು ಲೈಂಗಿಕ ಹಿಂಸೆಗೆ ಗುರಿಯಾಗುತ್ತಿದ್ದಾರೆ.
- ವರ್ಷಕ್ಕೆ ಸುಮಾರು 10 ಕೋಟಿ ಭ್ರೂಣ ಹತ್ಯೆ ನಡೆಯುತ್ತದೆ.
- 6 ಕೋಟಿ ಹೆಣ್ಣು ಮಕ್ಕಳು ಬಾಲ್ಯವಿವಾಹಕ್ಕೆ ಬಲಿಯಾಗುತ್ತಿದ್ದಾರೆ.
- ಪ್ರತಿ ನಾಲ್ಕು ಗರ್ಭಿಣಿಯರಲ್ಲಿ ಒಬ್ಬರು ದೈಹಿಕ ಅಥವಾ ಲೈಂಗಿಕ ಹಿಂಸೆಗೆ ಗುರಿಯಾಗುತ್ತಾರೆ.

ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಬೆಳೆಯುವ ಪಟ್ಟಿಯನ್ನು ಬೆಳೆಯದಂತೆ ತಡೆಯೋಣ. ಹಿಂಸೆಗೆ ಕ್ರೌರ್ಯಕ್ಕೆ ಫುಲ್ ಸ್ಟಾಪ್ ಹಾಕೋಣ. ಈ ಅಂಶಗಳನ್ನು ಗಂಭೀರವಾಗಿ ಪರಿಗಣಿಸಿದ ವಿಶ್ವಸಂಸ್ಥೆ ತನ್ನ ಸದಸ್ಯ ರಾಷ್ಟ್ರಗಳಿಗೆ ಇವುಗಳನ್ನು ನಿರ್ಮೂಲನ ಮಾಡಲು ಅಗತ್ಯವಾದ ಹಲವು ಹತ್ತು ಮಾರ್ಗೋಪಾಯಗಳನ್ನು ಕೈಗೊಳ್ಳಲು 70 ರ ದಶಕದಿಂದಲೂ ನಿರ್ದೇಶಿಸುತ್ತ ಬಂದಿದೆ. 1975ರ ವರ್ಷವನ್ನು ಅಂತರ ರಾಷ್ಟ್ರೀಯ ಮಹಿಳಾ ವರ್ಷವನ್ನಾಗಿ ಘೋಷಿಸಿ ಮಹಿಳೆಯರ ಅಭಿವೃದ್ಧಿ, ಔನ್ನತ್ಯವನ್ನು ಸಾಧಿಸಲು ಅಗತ್ಯವಾದ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿತ್ತು. ಮತ್ತು ಅದೇ ವರ್ಷ ವಿಶ್ವ ಮಟ್ಟದ ಮೊದಲ ಮಹಿಳಾ ಸಮ್ಮೇಳನವನ್ನೂ ಮೆಕ್ಸಿಕೋದಲ್ಲಿ ಆಯೋಜಿಸುವಂತೆ ಕ್ರಮ ವಹಿಸಲಾಯಿತು. ಮತ್ತು ಆ ಸಮ್ಮೇಳನದ ಮೂಲಕ 1976 ರಿಂದ 1985ರ ವರೆಗೆ ಕಾರ್ಯಸೂಚಿಯೊಂದನ್ನು ವಿಶ್ವಸಂಸ್ಥೆಯ ಕಾರ್ಯಯೋಜನೆಯ ಭಾಗವಾಗಿ ಮಹಿಳಾ ದಶಕದ ಕರೆ ನೀಡಲಾಯಿತು. ಆ ಮೂಲಕ ಸಿದ್ಧಪಡಿಸಿದ ಕರಡನ್ನು 1980 ರಲ್ಲಿ ಕೋಪನ್ ಹೇಗನ್ ನಲ್ಲಿ ನಡೆದ "ಮಹಿಳೆಯರ ವಿರುದ್ಧದ ಎಲ್ಲ ರೀತಿಯ ತಾರತಮ್ಯಗಳ ನಿರ್ಮೂಲನ" ಕುರಿತ ಸಮಾವೇಶ (ಸೀಡಾ) ದಲ್ಲಿ ಅಂಗೀಕರಿಸಲಾಯಿತು. ನಂತರ 1985 ರಲ್ಲಿ ನಡೆದ ನೈರೋಬಿಯ ಸಮ್ಮೇಳನದಲ್ಲಿ ದಶಕದ ಕಲ್ಪನೆಯನ್ನು ಕೊನೆಗೊಳಿಸಿ ಸದಸ್ಯ ರಾಷ್ಟ್ರಗಳಿಗೆ ಕಾನೂನಿನ ಒಳಗೇ ಇರುವ ಹಲವು ಮಹಿಳೆಯರ ವಿರುದ್ಧದ ತೊಡಕುಗಳನ್ನು 2000 ನೇ ವರ್ಷದೊಳಗೆ ನಿವಾರಿಸಿಕೊಳ್ಳಬೇಕೆಂಬ ನಿರ್ದೇಶನ ನೀಡಿತು. ಅದರ ಭಾಗವಾಗಿಯೇ ರಾಜೀವ್ ಗಾಂಧಿ ಸರ್ಕಾರ "ರಾಷ್ಟ್ರೀಯ ಮಹಿಳಾ ದೃಷಿಕೋನ"ದ ಯೋಜನೆಯೊಂದನ್ನು ಚರ್ಚೆಗೆ ಬಿಟ್ಟಿತ್ತು. ನಂತರ ಪಿ.ವಿ.ನರಸಿಂಹ ರಾವ್ ಸರ್ಕಾರ ಅದರ ಜಾರಿಗಾಗಿ ಇನ್ನಷ್ಟು ಚರ್ಚೆಗಳನ್ನು ನಡೆಸಿತ್ತು. ಈಗ ಮೋದಿ



ಸರ್ಕಾರ ಕೂಡ 'ಬೇಟಿ ಬಚಾವ್ ಬೇಟಿ ಪಢಾವ್' ಎಂಬಿತ್ಯಾದಿ ಬಹಳ ಆಕರ್ಷಕ ಹೆಸರುಗಳ ಮೂಲಕ ಮತ್ತು ಹೆಣ್ಣು ಮಕ್ಕಳ ಮೇಲೆ "ಪ್ರೀತಿ ಬೆಳೆಯಲು, ಸೆಲ್ಫಿ ತೆಗೆಸಿಕೊಳ್ಳಿ!" ಎನ್ನುವ ಮಾತುಗಳ ಹಿಂದೆ ವಿಶ್ವಸಂಸ್ಥೆಯ ಆದೇಶ ಪರಿಪಾಲನೆಯ ಕರ್ತವ್ಯದ ಜಾಡನ್ನು ಕಾಣಬೇಕು.

ಇಡೀ ವಿಶ್ವದಲ್ಲಿ ಹೀಗೆ ಮಹಿಳಾ ಪರ ಕಣ್ಣೋಟದ ಪ್ರಶ್ನೆಯನ್ನು ಮುನ್ನೆಲೆಗೆ ತಂದ ಮೇಲೂ ಮಹಿಳೆಯರ ಮತ್ತು ಮಕ್ಕಳ ಮೇಲಿನ ಹಿಂಸಾಚಾರ ನಿರ್ಮೂಲನೆಯಾಗುವುದಿರಲಿ ಕನಿಷ್ಟ ನಿಯಂತ್ರಣವಾಗದ ಅಂಶ ಎಲ್ಲರ ನಿದ್ದೆಗೆಡಿಸಬೇಕು. ಆದರೆ ಹಾಗಾಗುವುದಿಲ್ಲ. ಯಾಕೆಂದರೆ ಪುರುಷ ಪ್ರಧಾನ ಪಾಳೆಯಗಾರೀ ಮೌಲ್ಯಗಳು ಕೇವಲ ಭಾರತದಲ್ಲಷ್ಟೇ ಅಲ್ಲ ಲಿಂಗಾಧಾರಿತ ಅಭಿವೃದ್ಧಿಯ ಸೂಚ್ಯಂಕದಲ್ಲಿ ಇತರ ರಾಷ್ಟ್ರಗಳನ್ನು ಹಿಂದಿಕ್ಕಿದ ನೋರ್ಡಿಕ್ ರಾಷ್ಟ್ರಗಳು– ನಾರ್ವೆ, ಸ್ವೀಡನ್,ಡೆನ್ಮಾರ್ಕ ಮತ್ತು ನೆದರ್‌ಲ್ಯಾಂಡ್ಸ್ ದೇಶಗಳಲ್ಲಿ ಕೂಡ ಲಿಂಗಾಧಾರಿತ ಹಿಂಸೆ ನಡೆಯುತ್ತದೆ ಎಂಬುದೇ ಕಳವಳಕಾರಿ ವಿಚಾರ. ಎಂದರೆ ಅಭಿವೃದ್ಧಿ ಎನುವುದು ಅದರಷ್ಟಕ್ಕೆ ಅದೇ ಮನುಷ್ಯನ ಗುಣಗಳನ್ನು ಬದಲಾಯಿಸುವುದಿಲ್ಲ. ಇದನ್ನು ವಿಶ್ವಸಂಸ್ಥೆ ಮನಗಂಡು ಮತ್ತೆ ಮತ್ತೆ ತನ್ನ ಸದಸ್ಯ ರಾಷ್ಟ್ರಗಳಿಗೆ ಪುನರ್ ಪರಿಶೀಲನೆಯ ಒತ್ತಾಯವನ್ನು ಮಾಡುತ್ತಲೇ ಇದೆ. ಆಗಾಗ ತನ್ನ ಸಭೆಗಳಲ್ಲಿ ಸರ್ವಸಮ್ಮತ ತೀರ್ಮಾನಗಳನ್ನು ಕೈಗೊಳ್ಳುವ, ಸಾಮಾಜಿಕ ನ್ಯಾಯದ ಆಯೋಗಗಳ ಮೂಲಕ ಚರ್ಚೆ ನಡೆಸುವ ಕ್ರಮಗಳನ್ನು ಕೈಗೊಳ್ಳುತ್ತಲೇ ಇದೆ. ಆದರೆ . . . . . .



ಸದಸ್ಯ ರಾಷ್ಟ್ರಗಳು ಗೊತ್ತುವಳಿಗಳಿಗೆ ಸಹಿ ಹಾಕುತ್ತವೆ ನಿಜ, ಮತ್ತು ತಮ್ಮ ದೇಶಗಳಲ್ಲಿ ಯೋಜನೆಗಳ ಘೋಷಣೆಗಳನ್ನೂ ಮಾಡುತ್ತವೆ ನಿಜ, ಆದರೆ ಅದನ್ನು ಕಾರ್ಯಗತಗೊಳಿಸಲು ಅಗತ್ಯವಾದ ಹಣ ಬಿಡುಗಡೆ ಮಾಡುವಲ್ಲಿ ಅಷ್ಟೇ ಆಸಕ್ತಿ ತೋರುವುದಿಲ್ಲವೆಂಬ ಕೊರತೆಯಿದೆ. ನಮ್ಮದೇ ದೇಶದಲ್ಲಿಯ ಉದಾಹರಣೆಗಳೇ ಸಾಕು. ಇಡೀ ದೇಶವನ್ನೇ ಬೆಚ್ಚಿ ಬೀಳಿಸಿದ ನಿರ್ಭಯಾ ಪ್ರಕರಣ ಕಿತ್ತದ್ದ ಆಕ್ರೋಷ, ಜಸ್ಟೀಸ್ ವರ್ಮಾ ಆಯೋಗ ರಚನೆ, ಕ್ಷಿಪ್ರವಾಗಿ ಬಂದ ವರದಿ ಮತ್ತು ಶಿಫಾರಸುಗಳು, ಅದರ ಬೆನ್ನಲ್ಲೇ ಅತ್ಯಾಚಾರಕ್ಕೆ ಸಂಬಂಧಿಸಿದ ಕಾನೂನುಗಳಿಗೆ ತಿದ್ದುಪಡಿಯೂ ಬಂದಾಯ್ತು. ಇದರ ಜೊತೆಯೇ ಭರವಸೆ ಮೂಡಿಸುವಂತೆ ಆ ವರ್ಷದ ಬಜೆಟ್ ನಲ್ಲಿ 1000 ಕೋಟಿ ಹಣವನ್ನು ಸಂತ್ರಸ್ತ ಪರಿಹಾರ ನಿಧಿಯಾಗಿ ಕಾಯ್ದಿರಿಸಲಾಯಿತು. ಮತ್ತೆ ಮುಂದಿನ ವರ್ಷ ಅದಕ್ಕಿನ್ನೊಂದು, ಅದಕ್ಕಿನ್ನೊಂದು ಎನ್ನುವಂತೆ ಸಧ್ಯ 3000 ಕೋಟಿ ಮೀಸಲಿರಿಸಿರುವ ಹಣ ಇದೆ. ಆದರೆ ಖರ್ಚು ಮಾಡಿದ ಹಣವೆಷ್ಟು? ಮತ್ತು ಅದನ್ನು ಯಾರ ಮೂಲಕ ಪಡೆಯಬೇಕು ಎನ್ನುವುದನ್ನು ನಿಗದಿ ಪಡಿಸಿಲ್ಲದಿರುವುದು ಇವುಗಳ ತಖ್ತೆ ತೆಗೆದರೆ ಗೊತ್ತಾಗುತ್ತದೆ. ಆ ಪ್ರಕಾರ ಮತ್ತು ನಡೆದ ಘಟನೆಗಳ ಆಧಾರದಲ್ಲಿ ಕರ್ನಾಟಕ ರಾಜ್ಯ ಸುಮಾರು 500 ಕೋಟಿ ರೂಪಾಯಿಗಳನ್ನು ಪಡೆಯಬೇಕಿತ್ತು. ಆದರೆ ಒಂದು ರೂಪಾಯಿ ಕೂಡ ಪಡೆದಿಲ್ಲವೆಂದರೆ ಘೋಷಣೆ ಮತ್ತು ಆಚರಣೆಗಳ ಮಧ್ಯೆಯ ಕಂದರವನ್ನು ಗುರುತಿಸಬೇಕು, ಅದನ್ನೇ ಮಾಡಿದ ವಿಶ್ವಸಂಸ್ಥೆ ಈ ವರ್ಷದ ಹಿಂಸೆ ನಿರ್ಮೂಲನೆಯ ದಿನವನ್ನು 'ಕೊನೆಗೊಳಿಸಲು ಒಗ್ಗಟ್ಟಾಗಿ–ಅದಕ್ಕಾಗಿ ನಿಧಿ ಸಂಗ್ರಹಿಸಿ' ವಿಶ್ವವನ್ನು ಕೇಸರಿ ಮಾಡಿ ಎಂದು ಕರೆ ನೀಡಿದೆ. ಭಾರತದಲ್ಲಿ ನಾವು ಕೋಮುವಾದೀಕರಣವನ್ನು ಕೇಸರೀಕರಣವೆಂದು ತಪ್ಪಾಗಿ ಅರ್ಥೈಸಿದ್ದೇವೆ, ಆದರೆ ವಿಶ್ವ ಸಂಸ್ಥೆ ಕೇಸರಿಯನ್ನು ಸಶಕ್ತತೆಯ ಸಂಕೇತವಾಗಿ ಗುರುತಿಸುತ್ತದೆ ಮತ್ತು 'ನವೆಂಬರ್ 25 ರ ಲಿಂಗಾಧಾರಿತ ಹಿಂಸೆ ನಿರ್ಮೂಲನೆಯ ದಿನದಿಂದ ಡಿಸೆಂಬರ್ 10 ರ ಮಾನವ ಹಕ್ಕುಗಳ ದಿನ' ದ ವರೆಗಿನ 16 ದಿನಗಳ ಕಾರ್ಯಾಚರಣೆಯಲ್ಲಿ ಭಾಗವಹಿಸುವವರೆಲ್ಲರೂ ಕೇಸರಿ ಬಣ್ಣದ ಉಡುಪು, ಸಂಕೇತಗಳನ್ನು ಬಳಸುವಂತೆ ಕರೆ ನೀಡಿದೆ. ಚಿಕ್ಕ ಮಕ್ಕಳಿಂದಲೇ ಲಿಂಗಾಧಾರಿತ ಹಿಂಸೆಯ ವಿರುದ್ಧದ ಮನೋಭಾವವನ್ನು ಮೂಡಿಸುವ, ಸಶಕ್ತತೆಯನ್ನು ಬದುಕಿನ ಧೋರಣೆಯಾಗಿಯೇ ಅಳವಡಿಸಿಕೊಳ್ಳಲು ಸಹಾಯವಾಗುವಂತೆ ಮಕ್ಕಳ ಫುಟ್ಬಾಲ್ ಪಂದ್ಯಗಳನ್ನು ಆಯೋಜಿಸುವಂತಹ ಕ್ರಿಯಾತ್ಮಕ ಚಟುವಟಿಕೆಗಳನ್ನು ನಡೆಸುವ ಉದಾಹರಣೆಗಳನ್ನೂ ನೀಡುತ್ತಿದೆ.

ಈಗ ನಮ್ಮ ಮುಂದಿರುವ ಸವಾಲು, ನಾವೇನು ಮಾಡಬಹುದು ಎಂಬುದು. ನಮ್ಮೊಳಗಿನ ಪುರುಷ ಪ್ರಾಧಾನ್ಯತೆಯ ಧೋರಣೆಯನ್ನು ಹಿಂದಿಕ್ಕಿ ಮನುಷ್ಯರಾಗುವ ಅನಿವಾರ್ಯತೆಯನ್ನು ಅರ್ಥ ಮಾಡಿಕೊಳ್ಳುತ್ತೇವೆಯೋ. ಹೆಣ್ಣೆಂಬ ಕಾರಣಕ್ಕೆ ಅನುಭವಿಸಲೇ ಬೇಕಾದ ಹಿಂಸೆ, ಮುಜುಗರ, ಕಟ್ಟು ಪಾಡು, ನಿಯಂತ್ರಣಗಳನ್ನು ಹಾಕದ ಒಂದು ಸಮಾಜ ನಿರ್ಮಾಣ ನನ್ನ ಕೈಯಲ್ಲೇ ಇದೆ. ನಾನು ಮಾತ್ರವೇ ಅದನ್ನು ನಿರ್ಮಿಸಲು ಸಾಧ್ಯ ಎಂಬ ಹೊಣೆಗಾರಿಕೆಯನ್ನು ಪ್ರತಿಯೊಬ್ಬರೂ ವ್ಯಕ್ತಿಗತವಾಗಿ ಹೊತ್ತುಕೊಳ್ಳುತ್ತಲೇ, ಅದನ್ನು ಸಾಮೂಹಿಕ ಮತ್ತು ಸಾಮಾಜಿಕ ಜವಾಬ್ದಾರಿಯನ್ನಾಗಿಸುವ ಕರ್ತವ್ಯವನ್ನೂ ಪಾಲಿಸಿದರೆ . . . ಹಿಂಸೆಯ ನಿರ್ಮೂಲನೆಯಷ್ಟೇ ಅಲ್ಲ, ಬದಲಿಗೆ ಮಾನವೀಯತೆಯ ಹೂ ಅರಳಿ ಸುಗಂಧ ಸೂಸುವ ಜಗತ್ತನ್ನು ನಿರ್ಮಾಣ ಮಾಡಬಹುದು. ಹಾಗಾದರೆ ಪ್ರತಿಜ್ಞೆ ಮಾಡೋಣ.

ಪ್ರತಿಜ್ಞೆ:

- ಮಹಿಳೆಯ ಮೇಲಿನ ಹಿಂಸೆಯನ್ನು ಮೂಕಪ್ರೇಕ್ಷಕನಾಗಿ/ಳಾಗಿ ನೋಡಿಕೊಂಡೂ ಸುಮ್ಮನಿರುವುದಿಲ್ಲ.
- ಪ್ರತಿ ಹೆಣ್ಣು ಮಗಳನ್ನು ಮತ್ತು ಮಹಿಳೆಯನ್ನು ಗೌರವಿಸುತ್ತೇನೆ.
- ಎಲ್ಲೇ ಆಗಲಿ ಹೆಣ್ಣು ಮಕ್ಕಳ ಮತ್ತು ಮಹಿಳೆಯರ ಮೇಲೆ ಅತ್ಯಾಚಾರ ಹಿಂಸೆ ನಡೆದರೆ ವಿರೋಧಿಸುತ್ತೇನೆ, ನಿಲ್ಲಿಸುತ್ತೇನೆ.
- ಹಿಂಸೆ ಮುಕ್ತ ಸಮಾಜಕ್ಕಾಗಿ ದುಡಿಯುತ್ತೇನೆ.

ಕ್ಯಾಸ್ಟ್ರೊ ಕೊಲ್ಲಲು 638 ದಾರಿಗಳು........ ಪುಟ 8 ರಿಂದ

ಮುಳ್ಳುಗಳಿದ್ದ ಫೌಂಟನ್ ಪೆನ್ನನ್ನು ಕ್ಯಾಸ್ಟ್ರೋ ವಿರುದ್ಧ ಬಳಸಲು ನೀಡಲಾಯಿತು. ಕ್ಯಾಸ್ಟ್ರೋ 1971ರಲ್ಲಿ ಚಿಲಿಗೆ ಭೇಟಿಕೊಟ್ಟಾಗ ಟಿವಿ ಕ್ಯಾಮೆರಾಗಳಲ್ಲಿ ಅಸ್ತ್ರಗಳನ್ನಿಟ್ಟು ಕೊಲೆ ಮಾಡುವ ಹೊಣೆಯನ್ನು ಸಿಐಎಯ ಪ್ರಮುಖ ಅಧಿಕಾರಿ ಡೇವಿಡ್ ಎ ಫಿಲಿಪ್ಸ್ ಅವರಿಗೆ ನೀಡಲಾಯಿತು.

ಸಿಐಎ ಏಜೆಂಟ್ ರೂಡಿ ಹೆರ್ರೆರಾ ಡಬಲ್ ಏಜೆಂಟ್ ಜುವಾನ್ ಲೂಯಿಸ್ ಬಳಿ 'ಫಿಡೆಲ್ ಅವರನ್ನು ಕೊಲ್ಲುವುದು ಸಿಐಎ ಗೆ ತೀರಾ ಅಗತ್ಯವಾಗಿದೆ. ಅವರು ಈಗ ಕ್ಯೂಬಾದ ನಾಯಕ ಮಾತ್ರವಲ್ಲ ವಿಶ್ವದ ನಾಯಕರುಗಳಲ್ಲಿ ಒಬ್ಬರು. ಆಫ್ರಿಕಾ, ಮಧ್ಯ ಅಮೇರಿಕ, ಲ್ಯಾಟಿನ್ ಅಮೇರಿಕಾದಲ್ಲಿ ನಡೆಯುತ್ತಿರುವ ವಿಮೋಚನಾ ಚಳವಳಿಗಳು ಕ್ಯೂಬಾದ ಮಾದರಿಯನ್ನು ಅನುಸರಿಸುತ್ತಿವೆ. ಫಿಡೆಲ್ ಅವರನ್ನು ಮಾದರಿಯಾಗಿ ಸ್ವೀಕರಿಸಿವೆ. ಫಿಡೆಲ್ ಅವರನ್ನು ಮುಗಿಸಿದರೆ ಯುದ್ಧವನ್ನು ಗೆದ್ದಂತೆ' ಎಂದರು.

ಲಂಡನ್ ಪತ್ರಿಕೆಯೊಂದರಲ್ಲಿ ಅಮೇರಿಕಾದ ಅಧ್ಯಕ್ಷ ಕ್ಲಿಂಟನ್ ಅವರು ಫಿಡೆಲ್ ಕ್ಯಾಸ್ಟ್ರೋ ಹಾಗೂ ರಾವುಲ್ ಕ್ಯಾಸ್ಟ್ರೋ ಅವರನ್ನು ಇಲ್ಲವಾಗಿಸಿ ಬಂಡವಾಳಶಾಹಿಗೆ ಮರಳಲು 80 ಲಕ್ಷ ಡಾಲರ್ ನೀಡುವುದಾಗಿ ಬರೆದ ಬಹಿರಂಗ ಪತ್ರ ಸುದ್ದಿಯಾಯಿತು. ಕ್ಯೂಬಾದ ಬೀದಿ ಬೀದಿಗಳಲ್ಲಿ ಜನ ಇದನ್ನು ಖಂಡಿಸಿ ಮೆರವಣಿಗೆ ನಡೆಸಿದರು.

ಕ್ಯೂಬಾ ಹಾಗೂ ಫಿಡೆಲ್ ವಿರುದ್ಧ ಸಿಐಎ ನಡೆಸಿದ ಸಂಚು, ಏಜೆಂಟ್‌ಗಳು, ಆಯುಧಗಳು, ಉಪಕರಣಗಳು ಎಲ್ಲವನ್ನೂ 'ಸಿಐಎ ಮ್ಯೂಸಿಯಂ'ನಲ್ಲಿ ಪ್ರದರ್ಶನದಲ್ಲಿಡಲಾಗಿದೆ. ಅದರ ಜೊತೆಗೆ ಆ ಗಿಡುಗವೂ ಇದೆ.

ಅಮೇರಿಕಾದ ಗೊಂಬೆ ಸರ್ಕಾರಗಳು ಕ್ಯೂಬಾದಲ್ಲಿ ಆಡಳಿತ ನಡೆಸುತ್ತಿದ್ದಾಗ ಹವಾನಾದ ಮುಖ್ಯ ಕೇಂದ್ರದಲ್ಲಿ ಅಮೇರಿಕಾದ ಆ ಗಿಡುಗವನ್ನು ನಿಲ್ಲಿಸಿದರು. ಕ್ರಾಂತಿಯಾಗಿದ್ದೇ ಜನ ದಂಡೆತ್ತಿ ಹೋಗಿ ಆ ಗಿಡುಗನ ಪ್ರತಿಮೆಯನ್ನು ಚೂರು ಮಾಡಿದರು. ಈಗ ಅದು ಮ್ಯೂಸಿಯಂ ಪೀಸ್.

3-4 ಲಕ್ಷ ಕೋಟಿ ರೂ. ಕಪ್ಪು ಹಣ ನಿಜಕ್ಕೂ ಹೊರ ಬರುತ್ತದೆಯೇ?

ಆರ್ಥಿಕ ವ್ಯವಸ್ಥೆಯಲ್ಲಿ ಚಲಾವಣೆಯಲ್ಲಿದ್ದ ಕಪ್ಪು ಹಣದ ಮೊತ್ತ ರೂ. 3ಲಕ್ಷ ಕೋಟಿಯಿಂದ 4ಕ್ಷ ಕೋಟಿಯ ವರೆಗೆ ಇರಬಹುದು ಎಂದು ಸರಕಾರ ಅಂದಾಜು ಮಾಡಿತ್ತು. ಇವನ್ನು 500 ಮತ್ತು 1000ರೂ.ಗಳ ನೋಟುಗಳಲ್ಲಿ ಬಚ್ಚಿಡಲಾಗಿದೆ ಎಂದು ನಂಬಲಾಗಿದೆ. ಆದ್ದರಿಂದ ಇವನ್ನು ಚಲಾವಣೆಯಿಂದ ಹಿಂತೆಗೆದುಕೊಂಡರೆ ಅಷ್ಟು ಹಣ ಚಲಾವಣೆಗೆ ಹಿಂದೆ ಬರುವುದಿಲ್ಲ. ಆಮೂಲಕ ಕಪ್ಪು ಹಣದ ಕೊಳೆ ತೊಳೆದು ಹೋಗಬೇಕು. ಆದರೆ ಸರಕಾರದ ಈ ನಿರೀಕ್ಷೆ ಹುಸಿಯಾಗುವ ಲಕ್ಷಣಗಳು ಅದು ವಿಧಿಸಿದ 50ದಿನಗಳಲ್ಲಿ ಅರ್ಧದಷ್ಟು ಕಳೆಯುವ ವೇಳೆಗೇ ಕಾಣುತ್ತಿದೆ ಎಂದು ವಿಶ್ಲೇಷಕರು ಅಭಿಪ್ರಾಯ ಪಡುತ್ತಿದ್ದಾರೆ.

ನವಂಬರ್ 8ರಂದು ಈ ನೋಟುಗಳನ್ನು ಹಿಂತೆಗೆದುಕೊಳ್ಳುವ ವೇಳೆಗೆ ಚಲಾವಣೆಯಲ್ಲಿದ್ದ 500 ಮತ್ತು 100ರೂ.ಗಳ ನೋಟುಗಳ ಮೊತ್ತ 15.44ಲಕ್ಷ ಕೋಟಿ ರೂ. ಈಗ ಡಿಸೆಂಬರ್ 1 ರ ವೇಳೆಗೆ ಬ್ಯಾಂಕಿಂಗ್ ವ್ಯವಸ್ಥೆಗೆ ಮರಳಿರುವ ಇಂತಹ ನೋಟುಗಳ ಮೊತ್ತ ಸುಮಾರು 11ಲಕ್ಷ ಕೋಟಿ ರೂ. ಬ್ಯಾಂಕುಗಳ ಮುಂದೆ ಮೈಲುದ್ದದ ಸಾಲುಗಳ ನಡುವೆಯೂ ಇಷ್ಟೊಂದು ಹಣ ವಾಪಾಸು ಬಂದಿದೆಯೆಂದರೆ ಸರಕಾರ ಕೊಟ್ಟ ಗಡುವಿನ ಉಳಿದ 26 ದಿನಗಳಲ್ಲಿ ಈ ಎಲ್ಲ ನೋಟುಗಳೂ ಠೇವಣಿಗಳಾಗಿ ವಾಪಾಸು ಬರುವ ಸಾಧ್ಯತೆಗಳನ್ನು ತಳ್ಳಿ ಹಾಕುವಂತಿಲ್ಲ. ಏನಿಲ್ಲೆಂದರೂ 3-4ಲಕ್ಷ ಕೋಟಿ ರೂ.ಗಳಷ್ಟು 'ಕಪ್ಪುಹಣ' ತೊಳೆದು ಹೋಗುವ ಸಾಧ್ಯತೆಯಂತೂ ಇಲ್ಲ. ಬಹುಶಃ ಕಾಳಧನಿಕರು ತಮ್ಮ ಕಪ್ಪು ಹಣವನ್ನು ಬಿಳಿ ಮಾಡುವ ದಾರಿಗಳನ್ನು ಕಂಡುಕೊಂಡು ಮೋದಿಯವರ 'ಮಿಂಚಿನ ಪ್ರಹಾರ'ವನ್ನು ವಿಫಲಗೊಳಿಸುವಲ್ಲಿ ಯಶಸ್ವಿಯಾಗಿದ್ದಾರೆ, ಅದರಲ್ಲೂ ಸ್ವತಃ ಮೋದಿ ಸರಕಾರದ 'ಕ್ಷಮಾದಾನ'ಗಳೂ ನೆರವಾಗಿರಬಹುದು ಎಂದು ದಿ ಟೆಲಿಗ್ರಾಫ್(ಡಿ.2) ವಿಶ್ಲೇಷಿಸಿದೆ.

ಡಿಸೆಂಬರ್ 30 ರ ವೇಳೆಗೆ ಮೋದಿ ಸರಕಾರ ಆಘಾತ ಎದುರಿಸಲು ಸಿದ್ಧವಾಗಬೇಕಾದೀತು ಎಂದು ಇನ್ನೊಂದು ಸುದ್ದಿಸಂಸ್ಥೆ ಐಎಎನ್‌ಎಸ್(ಡಿಸೆಂಬರ್1) ವರದಿ ಮಾಡಿದೆ. ಒಂದೋ ಕಪ್ಪುಹಣವನ್ನು ಸರಕಾರ ಹೇಳುತ್ತಿರುವಂತೆ ಉನ್ನತ ಮೌಲ್ಯದ ನೋಟುಗಳಲ್ಲಿ ಪೇರಿಸಿಟ್ಟಿರಲಿಲ್ಲ, ಅಥವ ಕಾಳ ಧನಿಕರು ಎಂದಿನಂತೆ ರಂಗೋಲಿಯೊಳಕ್ಕೆ ನುಸುಳುವ ದಾರಿಗಳನ್ನು ಕಂಡುಕೊಂಡಿದ್ದಾರೆ.

ಕೊನೆಗೂ ಮೋದಿ ಸರಕಾರದ 'ಮಿಂಚಿನ ಪ್ರಹಾರ'ಕ್ಕೆ ಬಲಿಯಾಗಿರುವುದು ಜನಸಾಮಾನ್ಯರು ಎಂಬುದಂತೂ ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ. ಇದರಿಂದಾಗಿ ಪ್ರಾಣ ಕಳಕೊಂಡವರ ಸಂಖ್ಯೆ ಡಿಸೆಣಬರ್ 1ರಂದು 82 ತಲುಪಿದೆ ಎಂದು ಕ್ಯಾಚ್‌ನ್ಯೂಸ್.ಕಾಂ ವರದಿ ಮಾಡಿದೆ. ಅದು ಈ 82 ಮಂದಿಯ ಪಟ್ಟಿಯನ್ನೂ ಪ್ರಕಟಿಸಿದೆ. 'ಒಳ್ಳೆಯ ದಿನ'ಗಳ ಉನ್ನತ ವಕ್ತಾರರು ಯಾರೂ ಇದನ್ನು ಇದುವರೆಗೆ ಪ್ರಶ್ನಿಸಿಲ್ಲ.

* ನವಂಬರ್ 25ರಂದು ಉತ್ತರ ಪ್ರದೇಶದ ಬಲಿಯಾದಲ್ಲಿ ಸೆಂಟ್ರಲ್ ಬ್ಯಾಂಕ್ ಎದುರು ಮೂರು ಗಂಟೆಗಳಿಗೂ ಹೆಚ್ಚು ಕಾಲ ನಿಂತಿದ್ದ 70ವರ್ಷದ ಇಂದ್ರಾಣಿ ಅಸು ನೀಗಿದ್ದಾಳೆ.


* ನವಂಬರ್ 26ರಂದು ಗಯಾದಲ್ಲಿ ಡಯಾಲಿಸಿಸ್‌ಗೆ ಸರಕಾರೀ ಅಸ್ಪತ್ರೆಯಲ್ಲೇ 500ರೂ. ನೋಟುಗಳನ್ನು ನಿರಾಕರಿಸಿದ್ದರಿಂದ ಗರ್ಭಿಣಿ ಮಹಿಳೆ ಪ್ರಾಣ ಕಳಕೊಂಡಿದ್ದಾಳೆ ಎಂದು ಪಿಟಿಐ ವರದಿ ಮಾಡಿದೆ.

* ನವಂಬರ್28ರಂದು ನೋಯ್ಡಾದಲ್ಲಿ 65 ವರ್ಷದ ದಿನಗೂಲಿ ಕಾರ್ಮಿಕ ಮುನ್ನಿಲಾಲ್ ಬ್ಯಾಂಕಿನಿಂದ ತನ್ನ ಮಕ್ಕಳು ಇಟ್ಟಿದ್ದ ಹಣವನ್ನು ತೆಗೆಯಲಾಗದೆ ತನ್ನ ಹೆಂಡತಿಯ ಶವ ಸಂಸ್ಕಾರಕ್ಕೆ 24 ಗಂಟೆಗಳಿಗೂ ಹೆಚ್ಚು ಕಾಲ ಕಾಯಬೇಕಾಯಿತು ಎಂದು ಇನ್ನೊಂದು ವರದಿ ಹೇಳುತ್ತದೆ.

ಬರಿಗೈಯಲ್ಲಿ ಹಿಂದಿರುಗಿದ ಸಾಲುಮರದ ತಿಮ್ಮಕ್ಕ

ಕರ್ನಾಟಕದಲ್ಲಿ ನವಂಬರ್ 29ರಂದು ಪರಿಸರ ರಕ್ಷಣೆಯ ಖ್ಯಾತಿಯ ಸಾಲು ಮರದ ತಿಮ್ಮಕ್ಕ ಕೂಡ ನೆಲಮಂಗಲದ ಚಿಕ್ಕಬಿದರಕಲ್ಲಿನ ಕೆನರಾಬ್ಯಾಂಕ್ ಎದುರು ಒಂದು ಗಂಟೆಗಳಿಗೂ ಹೆಚ್ಚು ಕಾಲ ಸಾಲಿನಲ್ಲಿ ನಿಂತು ಕೊನೆಗೂ ಬರಿಗೈಯಲ್ಲಿ ಹಿಂದಿರುಗಿದ ಸುದ್ದಿ ವರದಿಯಾಗಿದೆ.

ಈ ತಿಂಗಳ ಸಂಬಳದ ದಿನವಂತೂ ಬಹಳಷ್ಟು ಜನರಿಗೆ ಹಿಂದೆಂದೂ ಕಾಣದ ಪರಿತಾಪದ ದಿನವಾಗಿ ಬಿಟ್ಟ ವರದಿಗಳು ದೇಶದ ಹಲವೆಡೆಗಳಿಂದ ಬಂದಿದೆ. ರಿಝರ್ವ್ ಬ್ಯಾಂಕ್ ಸಂಬಳ ದಿನದ ಸನ್ನಿವೇಶ ಎದುರಿಸಲು ಸಾಕಷ್ಟು ವ್ಯವಸ್ಥೆ ಮಾಡಲಾಗಿದೆ ಎಂದರೂ ಬ್ಯಾಂಕುಗಳು ಕೇವಲ 20% ನಗದು ಪೂರೈಕೆಯಾಗಿದೆ ಎಂದು ಹೇಳಿವೆ, ಅವುಗಳ ಮುಂದಿರುವ ಸಾಲುಗಳು ಅವರ ಮಾತುಗಳನ್ನು ಪುಷ್ಟೀಕರಿಸುವಂತಿದ್ದವು, ರಿಝರ್ವ್ ಬ್ಯಾಂಕಿನ ಹೇಳಿಕೆಯನ್ನಲ್ಲ.



ವ್ಯಂಗ್ಯಚಿತ್ರ: ಅಧ್ವರ್ಯ, ಟೈಮ್ಸ್ ಆಫ್ ಇಂಡಿಯಾ

ಈ ನಡುವೆ ಪ್ರಧಾನಿಗಳು ದನಿ ಬದಲಿಸಿ 'ನಗದುರಹಿತ ವ್ಯವಸ್ಥೆ'ಯತ್ತ ದಾಪುಗಾಲು ಇಡುವ ಮಾತುಗಳನ್ನಾಡಿದ್ದಾರೆ. ಹಣಕಾಸು ಮಂತ್ರಿಗಳು ಜನಗಳ ಸಮಸ್ಯೆಗಳು ಎರಡು ತ್ರೈಮಾಸಿಕಗಳಲ್ಲಿ ನಿವಾರಣೆಯಾಗುತ್ತವೆ ಎಂದಿದ್ದಾರೆ. ಅಂದರೆ ಜನಗಳ ಸಮಸ್ಯೆಗಳು ಎರಡು ದಿನಗಳು ಮಾತ್ರ ಎಂದಿದ್ದದ್ದು 50 ದಿನವಾಯ್ತು, ಈಗ ಆರು ತಿಂಗಳಿಗೆ ವಿಸ್ತಾರಗೊಂಡಿದೆ. ಈ ನಡುವೆಯೂ ಕಾಳಧನಿಕರಿಗೆ ಕ್ಷಮಾದಾನದ ಮತ್ತೆರಡು ಯೋಜನೆಗಳನ್ನು ಪ್ರಕಟಿಸಲಾಗಿದೆ.

ಜನಗಳು ಇಷ್ಟೆಲ್ಲ ಕಷ್ಟಪಡುವಂತ ಕೆಟ್ಟ ದಿನಗಳಾದರೂ ಏಕೆ ಎಂದು ಜನ ಆಶ್ಚರ್ಯ ಪಡುವಂತಾಗಿದೆ.

ಇದು ಕಪ್ಪು ಹಣದ ವಿರುದ್ಧದ ಸಮರವೇ, ಅಥವಾ...

ಮಾಧ್ಯಮಗಳಲ್ಲಿ ಸಿಗುತ್ತಿರುವ ಮಾಹಿತಿಗಳ ಪ್ರಕಾರ ಮಾರ್ಚ್ 31, 2016ರಂದು ಮೋದಿ ಸರಕಾರದ ಬಹಳಷ್ಟು ಮಂತ್ರಿಗಳ ಬಳಿ ಲಕ್ಷ-ಲಕ್ಷ ನಗದು ಹಣ ಇತ್ತು. ನಿಯಮಗಳ ಪ್ರಕಾರ ಅವರೆಲ್ಲ ತಮ್ಮ ಆಸ್ತಿ-ಪಾಸ್ತಿಗಳ ಬಗ್ಗೆ ಪ್ರಧಾನ ಮಂತ್ರಿಗಳ ಕಚೇರಿಗೆ ಮಾಹಿತಿ ನೀಡಬೇಕು. ಆದರೆ ಈಗ ಮೋದಿ ಸರಕಾರದಲ್ಲಿ ಮಂತ್ರಿಗಳಾಗಿರುವ 76 ಮಂದಿಯಲ್ಲಿ 40 ಮಂದಿ ಮಾತ್ರ ತಮ್ಮ ಬಳಿ ಮಾರ್ಚ್ 31, 2016ರಂದು ಇದ್ದ ನಗದು ಹಣವನ್ನು ಘೋಷಿಸಿದ್ದಾರೆ. ಇವರಲ್ಲಿ 17 ಮಂತ್ರಿಗಳ ಬಳಿ 2ಲಕ್ಷರೂ.ಗಿಂತ ಹೆಚ್ಚಿನ ನಗದು ಇತ್ತು. ಇವರಲ್ಲಿ 5 ಮಂದಿ ಸಂಪುಟ ದರ್ಜೆಯ ಮಂತ್ರಿಗಳು, 12 ಮಂದಿ ರಾಜ್ಯಮಂತ್ರಿದರ್ಜೆಯವರು. ಅತಿ ಹೆಚ್ಚು ನಗದು ಇದ್ದದ್ದು ಹಣಕಾಸುಮಂತ್ರಿಗಳ ಬಳಿ: ರೂ.65,29,400.

ಪ್ರಧಾನ ಮಂತ್ರಿಗಳು ಬಿಜೆಪಿ ಎಂಪಿಗಳಿಂದ ನವಂಬರ್ 8ರ ನಂತರದ ವ್ಯವಹಾರಗಳ ವಿವರ ಕೊಡಲು ಹೇಳಿದ್ದಾರೆ, ನವಂಬರ್8ರ ವರೆಗಿದ್ದು ಕೇಳಿಲ್ಲ. ಬಹುಶಃ ನವಂಬರ್ 8ರ ವೇಳೆಗೆ ಇವರ‍್ಯಾರ ಬಳಿಯೂ 500/1000ದ ನೋಟುಗಳಲ್ಲಿ ನಗದು ಇರಲಿಲ್ಲ, ಆದ್ದರಿಂದಲೇ ಬಿಜೆಪಿ ಎಂಪಿಗಳಾಗಲೀ, ಕೇಂದ್ರ ಮಂತ್ರಿಗಳಾಗಲೀ ಹಳೆಯ ನೋಟುಗಳನ್ನು ವಿನಿಮಯ ಮಾಡುವ ಅಥವ ಠೇವಣಿ ಇಡುವ ಸಾಲುಗಳಲ್ಲಿ ಕಂಡು ಬರಲಿಲ್ಲ. ಆದರೆ ಬಿಜೆಪಿ ಮುಖಂಡರು ನಡೆಸಿದರೆನ್ನಲಾದ 'ಕಪ್ಪು' ವ್ಯವಹಾರಗಳು ಹಲವು ಮಾಧ್ಯಮಗಳಲ್ಲಿ ವರದಿಯಾಗಿವೆ.


ನವಂಬರ್ 8ರ ಪ್ರಕಟಣೆಯ ಸ್ವಲ್ಪವೇ ಮೊದಲು ಕೊಲ್ಕತಾದಲ್ಲಿ 500/1000ದ ನೋಟುಗಳ ಕಂತೆಗಳನ್ನು ಬಿಜೆಪಿಯ ಪಶ್ಚಿಮ ಬಂಗಾಲ ಘಟಕದ ಪರವಾಗಿ ಬ್ಯಾಂಕುಗಳಿಗೆ ತುಂಬಿದ್ದು ದೇಶಾದ್ಯಂತ ಸುದ್ದಿಯಾಗಿತ್ತು. ನಂತರವೂ ಇಂತಹ ಸುದ್ದಿಗಳು ಬರುತ್ತಲೇ ಇವೆ.

ಬಿಹಾರದ ಮಧುಬನಿ, ಕಟಿಹಾರ್, ಮಾಧೇಪುರ, ಲಖಿಸರಾಯ್, ಕಿಶನ್‌ಗಂಜ್ ಮತ್ತು ಅರ್ವಾಲ್‌ನಲ್ಲಿ ಬಿಜೆಪಿ ಮುಖಂಡರು250 ಚದರಡಿಯಿಂದ ಹಿಡಿದು ಅರ್ಧ ಎಕ್ರೆಯ ವರೆಗಿನ 8ಲಕ್ಷ ರೂ.ಗಳಿಂದ ಹಿಡಿದು 1.16ಕೋಟಿ ರೂ.ಗಳ ವರೆಗಿನ ವ್ಯವಹಾರವನ್ನು ನವಂಬರ್ ಮೊದಲ ವಾರದಲ್ಲಿ ನಡೆಸಿದ್ದಾರೆ ಎಂದು ಇಂಡಿಯನ್ ಎಕ್ಸ್‌ಪ್ರೆಸ್ ವರದಿ ಮಾಡಿತು. ಇದು ಪಕ್ಷಕ್ಕಾಗಿ ಮಾಡಿದ ವ್ಯವಹಾರಗಳು ಎಂದ ರಾಜ್ಯದ ಹಿರಿಯ ಬಿಜೆಪಿ ಮುಖಂಡರು ಇಂತಹ ಖರೀದಿಗಳು ಬೇರಡೆಗಳಲ್ಲೂ ನಡೆದಿವೆ ಎಂಬ ಮಾಹಿತಿಯನ್ನೂ ನೀಡಿದರು!

ತಮಿಳುನಾಡಿನಲ್ಲಿ ಕುಮಾರಸಮಿಪಟ್ಟಿ ಮುಖ್ಯ ರಸೆಯಲ್ಲಿ ಬಿಜೆಪಿಯ ಯುವ ಮುಖಂಡ ಜೆವಿಆರ್ ಅರುಣ್ ಎಂಬಾತನ ಕಾರಿನಲ್ಲಿ ಸರಿಯಾದ ದಾಖಲೆಗಳಿಲ್ಲದ 20.55ಲಕ್ಷ ರೂ. ಮೊತ್ತದ ನೋಟುಗಳನ್ನು ಪೋಲೀಸರು ವಶಪಡಿಸಿಕೊಂಡಿದ್ದಾರೆ, ಇದರಲ್ಲಿ ಹೊಸ 2000ರೂ.ಗಳ 926 ನೋಟುಗಳಿದ್ದವು ಎಂದು ನವಂಬರ್ 28ರಂದು 'ದಿ ಹಿಂದು' ವರದಿ ಮಾಡಿದೆ. ಆತ ಮೋದಿಯವರ ಈ ಕ್ರಮವನ್ನು ಬಹಳ ಅಬ್ಬರದಿಂದ ಪ್ರಚಾರ ಮಾಡುತ್ತಿದ್ದರು ಎಂದು ತಿಳಿದು ಬಂದಿದೆ.

ಇಂತಹ ಸುದ್ದಿಗಳ ಹಿನ್ನೆಲೆಯಲ್ಲಿ ನೋಟು ರದ್ದತಿಯ ನಿರ್ಣಯ ರಿಝರ್ವ್ ಬ್ಯಾಂಕಿನದ್ದು, ಸರಕಾರ ಅದನ್ನು ಅನುಮೋದಿಸಿತಷ್ಟೇ ಎಂದೊಬ್ಬ ಮಂತ್ರಿಗಳು ಹೇಳಿರುವುದಾಗಿ ವರದಿಯಾಗಿದೆ. ಈ ಮೊದಲು, ಈಗಲೂ ಹಲವು ಬಿಜೆಪಿ ಮಂದಿ ಇದು ಪ್ರಧಾನಿಗಳ ಅತ್ಯಂತ ಧೀರ ಕ್ರಮ ಎಂದು ಹಾಡಿಹೊಗಳುತ್ತಿದ್ದಾರೆ.

ವಾಸ್ತವವಾಗಿ ನವಂಬರ್ 8ರ ಪ್ರಧಾನಿಗಳ ಭಾಷಣ ಲೈವ್ ಅಲ್ಲ, ಅದು ಪೂರ್ವಮುದ್ರಿತ ಭಾಷಣ ಎಂದೊಬ್ಬ ದೂರದರ್ಶನದ ಪತ್ರಕರ್ತ ಹೇಳಿರುವುದಾಗಿಯೂ, ಆತನಿಗೆ ಈಗ ಕೊಲೆ ಬೆದರಿಕೆ ಬಂದಿದೆ ಎಂದೂ ಮಾಧ್ಯಮಗಳಲ್ಲಿ ವರದಿಯಾಗಿದೆ(ನವಂಬರ್27). ಈ ಭಾಷಣದ ವೀಡಿಯೋದಲ್ಲಿ ಹಲವು 'ಎಡಿಟಿಂಗ'ಗಳು ಕಾಣ ಬರುತ್ತಿವೆ ಎಂದೂ ಈ ಬಗ್ಗೆ ಕೇಳಿದ ಆರ್‌ಟಿಐ ಪ್ರಶ್ನೆಗೆ ಇನ್ನೂ ಉತ್ತರ ಬಂದಿಲ್ಲವೆಂದೂ ಈ ವರದಿ ಹೇಳಿದೆ.



ಜಮ್ಮು-ಕಾಶ್ಮೀರ: 'ಮಿಂಚಿನ ಪ್ರಹಾರ'ದ ಭಾವೋದ್ರೇಕವಷ್ಟೇ ಸಾಲದು

ಜಮ್ಮು-ಕಾಶ್ಮೀರದ ನಗ್ರೊತದಲ್ಲಿ ನಮ್ಮ ಸೇನಾಪಡೆಗಳ ಮೇಲಿನ ಇತ್ತೀಚಿನ ಭಯೋತ್ಪಾದಕ ದಾಳಿಯಲ್ಲಿ ಅಧಿಕಾರಿಗಳೂ ಸೇರಿದಂತೆ ಏಳು ಸೈನಿಕರ ಸಾವು ನಮ್ಮ ಭದ್ರತಾವ್ಯವಸ್ಥೆಯನ್ನು ನಿರ್ವಹಿಸುತ್ತಿರುವವರ ನಡುವೆ ಆತಂಕವನ್ನು ಮೂಡಿಸಿದೆ ಎಂದು ವರದಿಯಾಗಿದೆ. ಇದರೊಂದಿಗೆ ಭಾರತೀಯ ಸೇನೆಯ 'ಮಿಂಚಿನ ಪ್ರಹಾರ'ದ ನಂತರ ಕಳೆದುಕೊಂಡ ಒಟ್ಟು ಸಿಬ್ಬಂದಿಯ ಸಂಖ್ಯೆ 27 ಆಗಿದೆ. ಈ ವರ್ಷ ನಮ್ಮ ಸೇನೆ ಜಮ್ಮು-ಕಾಶ್ಮೀರದಲ್ಲಿ ಒಟ್ಟು 89 ಭದ್ರತಾ ಸಿಬ್ಬಂದಿಯನ್ನು ಕಳಕೊಂಡಿದೆ. ಸುಮಾರು 200 ಮಂದಿ ಗಾಯಗೊಂಡಿದ್ದಾರೆ. ಈ ಕಾರ್ಯಾಚರಣೆಗಳಲ್ಲಿ ಕೊಲ್ಲಲ್ಪಟ್ಟ ಉಗ್ರರ ಸಂಖ್ಯೆಗೆ ಹೋಲಿಸಿದರೆ ಇದು, ಅದರಲ್ಲೂ ಸೇನಾಧಿಕಾರಿಗಳ ಸಂಖ್ಯೆ ಆತಂಕ ಉಂಟು ಮಾಡುವಂತದ್ದು ಇದು ನಿಜವಾದ ಯುದ್ಧ ಆರಂಭವಾದರೆ ಅಪಾಯಕಾರಿಯಾಗಬಹುದು ಎಂದು ಪರಿಣಿತರು ಅಭಿಪ್ರಾಯ ಪಡುತ್ತಿದ್ದಾರೆ.(ದಿ ಹಿಂದು, ನ.30).

ಈ ಬಾರಿ 'ಮಿಂಚಿನ ಪ್ರಹಾರ'ದ ಸ್ವರೂಪದಲ್ಲಿ ನೀಡಿದ ಏಟು ಎದುರಾಳಿಗಳನ್ನು ರಕ್ಷಣಾತ್ಮಕಗೊಳಿಸಿದರೂ, ಅವರಿಗೆ ಇದೊಂದು ಕಡಿಮೆ ವೆಚ್ಚದ,ಹೆಚ್ಚು ಪ್ರದರ್ಶನದ ಕಾರ್ಯಾಚರಣೆಯಾಗಿದೆ ಎಂದು ನಿವೃತ್ತ ಸೇನಾಧಿಕಾರಿಯೊಬ್ಬರು ಹೇಳಿದ್ದಾರೆ.

ಜಮ್ಮು-ಕಾಶ್ಮೀರದಲ್ಲಿ ಹಿಂಸಾಚಾರದ ಸಂಖ್ಯೆ ಹಿಂದಿನ ವರ್ಷಗಳಿಗೆ ಹೋಲಿಸಿದರೆ ತುಸು ಹೆಚ್ಚಿದೆ, ಆದರೆ ಕೊಲ್ಲಲ್ಪಟ್ಟ ಅಥವ ಗಾಯಗೊಂಡ ಭದ್ರತಾ ಸಿಬ್ಬಂದಿಯ ಸಂಖ್ಯೆ ದೊಡ್ಡ ಪ್ರಮಾಣದಲ್ಲಿ ಹೆಚ್ಚಿದೆ ಎಂದು ಮಿಲಿಟರಿ ವಿಶ್ಲೇಷಕರು ಹೇಳುತ್ತಾರೆ. ನಾವು ಈಗ ಗಲಿಬಿಲಯ ಪರಿಸ್ಥಿತಿಯನ್ನು ಎದುರಿಸುತ್ತಿದ್ದೇವೆ, ಸರಕಾರ ಈ ಬಗ್ಗೆ ಯೋಚುಸಬೇಕಾಗಿದೆ ಎಂದು ಜಮ್ಮು-ಕಾಶ್ಮೀರದಲ್ಲಿ ನೇಮಿತರಾಗಿರುವ ಒಬ್ಬ ಸೇನಾಧಿಕಾರಿ ಹೇಳಿರುವುದಾಗಿ ಈ ಸುದ್ದಿ ತಿಳಸುತ್ತದೆ.

ದೇಶದ ರಕ್ಷಣೆಯ ಪ್ರಶ್ನೆ ಈ ಒಳ್ಳೆಯ ದಿನಗಳಲ್ಲಿ ಕೇವಲ ಭಾವೋದ್ರೇಕ ಎಬ್ಬಿಸಿ ಅದರ ರಾಜಕೀಯ ಲಾಭ ಪಡೆಯವುದಕ್ಕೆ ಸೀಮಿತ ಗೊಂಡಿರುವ ಪ್ರವೃತ್ತಿಯ ಬಗ್ಗೆ ನಿಜವಾದ ದೇಶಪ್ರೇಮಿಗಳು ಯೋಚಿಸುವಂತೆ ಮಾಡಿರುವ ಸಂಗತಿಯಿದು.

ಭಾರತಕ್ಕೆ ಸೇರಿದ ನೀರನ್ನು ಪಾಕಿಸ್ತಾನಕ್ಕೆ ಬಿಡಲು ಸಾಧ್ಯವಿಲ್ಲ ಎಂದು ಪ್ರಧಾನ ಮಂತ್ರಿಗಳು ಪಂಜಾಬಿನ ಭಟಿಂಡಾದಲ್ಲಿ ಎರಡು ದೇಶಗಳ ನಡುವಿನ ಸಿಂಧೂ ನದಿ ಸಂಧಿಯ ಬಗ್ಗೆ ಮಾತಾಡುತ್ತ ಹೇಳಿದ್ದಾರೆ

-ಸುದ್ದಿ



ವ್ಯಂಗ್ಯಚಿತ್ರ: ಕೀರ್ತಿಶ್, ಬಾಮುಲಾಹಿಜ.ಕಾಂ



ನವಂಬರ್ 8ರಂದು 86% ನೋಟುಗಳನ್ನು ಹಿಂತೆಗೆದುಕೊಳ್ಳುವ ಪ್ರಕಟಣೆ ಮಾಡಿದಾಗ ಅದು ಕಪ್ಪು ಹಣ ಹೊರಗೆಳೆಯಲು, ನಕಲಿ ನೋಟುಗಳನ್ನು ತಡೆಯಲು ಮತ್ತು ಆಮೂಲಕ ಭಯೋತ್ಪಾದನೆಗೆ ಹಣ ಸಿಗದಂತೆ ಮಾಡಲು ಎನ್ನಲಾಗಿತ್ತು. ಆಗ 'ನಗದುರಹಿತ' ಅರ್ಥವ್ಯವಸೆಯ್ಥ ಮಾತೇ ಇರಲಿಲ್ಲ. ಆದರೆ ಈಗ ಕೋಟ್ಯಂತರ ಮಂದಿ ತಮ್ಮದೇ 'ಬಿಳಿ' ಹಣ ಪಡೆಯಲು ಸಾಲುಗಟ್ಟಿ ನಿಂತಿರುವಾಗ 'ನಗದು ರಹಿತ ಅರ್ಥವ್ಯವಸ್ಥೆ ' ಪ್ರಧಾನ ಮಂತ್ರಿಗಳ ಮನದ ಮಾತಾಗಿ ಬಿಟ್ಟಿದೆ. ಆದರೆ ಇದೊಂದು ಹುಚ್ಚು ಕಲ್ಪನೆ, ಮೊದ್ದು ಮಾತು ಎನ್ನುತ್ತಾರೆ ಪ್ರಸಿದ್ಧ ಅರ್ಥಶಾಸ್ತ್ರಜ್ಞ ಪ್ರೊ. ಪ್ರಭಾತ್ ಪಟ್ನಾಯಕ್. ಅದಕ್ಕಾಗಿ 500 ಮತ್ತು 1000 ರೂ ಕರೆನ್ಸಿ ನೋಟುಗಳನ್ನು ರದ್ದುಮಾಡಿರುವುದಂತೂ ದಬ್ಬಾಳಿಕೆಯ ಕ್ರಮವಾಗಿದೆ ಎನ್ನುತ್ತಾರೆ ಅವರು.

' ಅವರ The Chimera of a Cashless Economy ಲೇಖನದ ಭಾವಾನುವಾದ ನಮ್ಮ ಓದುಗರಿಗಾಗಿ ಇಲ್ಲಿದೆ.

'ನಗದು ರಹಿತ' ಅರ್ಥ ವ್ಯವಸ್ಥೆ ಎನ್ನುವುದೊಂದು ಹುಚ್ಚು ಕಲ್ಪನೆ



ವ್ಯಂಗ್ಯಚಿತ್ರ: ಕೇಶವ್, ದಿ ಹಿಂದು

ಕಪ್ಪು ಹಣ ನಿರ್ಮೂಲನೆ ಮಾಡುವ ಉದ್ದೇಶದಿಂದ 500 ಮತ್ತು 1000 ರೂಪಾಯಿ ನೋಟುಗಳನ್ನು ರದ್ದುಮಾಡಿರುವುದಾಗಿ ಪ್ರಧಾನ ಮಂತ್ರಿ ಮೋದಿ ಸಮರ್ಥಿಸಿಕೊಂಡಿದ್ದಾರೆ. ಈ ಉದ್ದೇಶದ ಜೊತೆಗೆ, ನೋಟು ರದ್ದತಿಯು 'ನಗದು ರಹಿತ' ಅರ್ಥ ವ್ಯವಸ್ಥೆಯ ಉದಯಕ್ಕೆ ಕಾರಣವಾಗುತ್ತದೆ ಎಂಬ ವಾದವನ್ನೂ ಅವರು ಮಂಡಿಸಿದ್ದಾರೆ. ಅವರ ಈ ವಾದವೂ ನಿಬ್ಬೆರಗಾಗುವಷ್ಟು ಮಂದ ಬುದ್ಧಿಯಿಂದಲೇ ಕೂಡಿದೆ.

ನಮ್ಮ ದಿನ ನಿತ್ಯದ ವ್ಯವಹಾರಗಳಲ್ಲಿ ಕರೆನ್ಸಿ ನೋಟುಗಳು(ನಗದು ಹಣ) ಅಥವಾ ಬ್ಯಾಂಕ್‌ಗಳು ಪರಿಚಯಿಸಿರುವ ಚೆಕ್, ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್ ಮುಂತಾದ ರೂಪಗಳಲ್ಲಿ ಹಣ ಬಳಕೆಯಾಗುತ್ತದೆ. ನಗದು ಬಳಕೆಯಲ್ಲಿ ನಿರ್ವಹಣಾ ವೆಚ್ಚವಿಲ್ಲ. ಅದು ಸುಲಭ ಮತ್ತು ಸರಳ. ನಗದು ಬಳಕೆಗೂ ಮತ್ತು ಹಣದ ಬೇರೆ ರೂಪಗಳ ಬಳಕೆಗೂ ಭಿನ್ನತೆ ಇದೆ. ಎಲ್ಲರೂ ಎಲ್ಲ ವ್ಯವಹಾರಗಳನ್ನು 'ನಗದು ರಹಿತ'ವಾಗಿ (ಅಂದರೆ, ಬ್ಯಾಂಕ್ ಮೂಲಕ) ನಿರ್ವಹಿಸುವುದು ಸುಲಭವಲ್ಲ.

ನಗದು ಹಣ ಮತ್ತು ಹಣದ ಬೇರೆ ರೂಪಗಳ ನಡುವಿನ ಭಿನ್ನತೆಯನ್ನು ಹೀಗೆ ವಿವರಿಸಬಹುದು: ನಾವು ಯಾವುದನ್ನು ಕರೆನ್ಸಿ (ನಗದು ಹಣ) ಎಂದು ಕರೆಯುತ್ತೇವೆಯೊ ಅದು ಭಾರತೀಯ ರಿಸರ್ವ್ ಬ್ಯಾಂಕ್‌ನ ಬಾಧ್ಯತೆ. ರಿಸರ್ವ್ ಬ್ಯಾಂಕ್‌ನ ಗವರ್ನರ್, ಕರೆನ್ಸಿ ನೋಟುಗಳ ಮೇಲೆ ಇಂತಿಷ್ಟು ರೂಪಾಯಿಗಳನ್ನು ಕೊಡುತ್ತೇನೆಂದು ವಾಗ್ದಾನ ಮಾಡಿ ಸಹಿ ಹಾಕಿರುವುದು ಈ ಬಾಧ್ಯತೆಯ ಪ್ರತೀಕವಾಗಿದೆ. ಅದೇ ನಗದು ಹಣವನ್ನು ಒಂದು ಬ್ಯಾಂಕಿನಲ್ಲಿ ಡಿಪಾಸಿಟ್ ಮಾಡಿದಾಗ ಆ ಹಣವನ್ನು ಡಿಪಾಸಿಟ್ ಮಾಡಿದವರಿಗೆ ಹಿಂತಿರುಗಿಸುವ ಹೊಣೆಗಾರಿಕೆ (ಅಥವಾ ಬಾಧ್ಯತೆ) ಆ ಬ್ಯಾಂಕಿನ ಮೇಲಿರುತ್ತದೆ. ಹಾಗಾಗಿ, ಎಲ್ಲ ಹಣವೂ ಬ್ಯಾಂಕಿಂಗ್ ವ್ಯವಸ್ಥೆಯ ಬಾಧ್ಯತೆಯೊಳಗೆ ಸೇರಿಕೊಳ್ಳುತ್ತದೆ. ಉದಾ: ನಾನು ಇನ್ನೊಬ್ಬ ವ್ಯಕ್ತಿಗೆ ಕೊಡಬೇಕಿರುವ ಹಣವನ್ನು ಒಂದು ಚೆಕ್ ಮೂಲಕ ಕೊಟ್ಟಾಗ, ಬ್ಯಾಂಕ್‌ನಲ್ಲಿರುವ ನನ್ನ ಹಣದ ಮೇಲಿನ ಹಕ್ಕುದಾರಿಕೆಯನ್ನು ಆ ಇನ್ನೊಬ್ಬ ವ್ಯಕ್ತಿಗೆ ವರ್ಗಾಯಿಸಿರುತ್ತೇನೆ. ಚೆಕ್ ಬದಲಾಗಿ, ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್ ಅಥವಾ ಎಲೆಕ್ಟ್ರಾನಿಕ್ ಟ್ರಾನ್ಸ್‌ಫರ್ ಮೂಲಕ ನನ್ನ ಖಾತೆಯಿಂದ ಇನ್ನೊಬ್ಬನ ಖಾತೆಗೆ ಹಣ ವರ್ಗಾಯಿಸಿದಾಗಲೂ, ನನ್ನ ಹಕ್ಕುದಾರಿಕೆ ಇನ್ನೊಬ್ಬನಿಗೆ ವರ್ಗಾವಣೆಯಾಗುತ್ತದೆ.

ಇದನ್ನೇ ಬೇರೆ ರೀತಿಯಲ್ಲಿ ಹೇಳುವುದಾದರೆ, ಹಣದ ಬೇರೆ ರೂಪಗಳಾದ ಚೆಕ್, ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್ ಅಥವಾ ಎಲೆಕ್ಟ್ರಾನಿಕ್ ಟ್ರಾನ್ಸ್‌ಫರ್ ಮೂಲಕ ವ್ಯವಹಾರ ನಡೆಸಿದಾಗ, ಹಣದ ಮೇಲಿನ ಹಕ್ಕುದಾರಿಕೆಯು ಒಬ್ಬ ವ್ಯಕ್ತಿಯಿಂದ ಇನ್ನೊಬ್ಬ ವ್ಯಕ್ತಿಗೆ ವರ್ಗಾವಣೆಯಾಗುತ್ತದೆ. ಬ್ಯಾಂಕಿಂಗ್ ವ್ಯವಸ್ಥೆ ಅದಕ್ಕೆ ಬಾಧ್ಯವಾಗಿರುತ್ತದೆ. ಆದ್ದರಿಂದ, 'ನಗದು ರಹಿತ' ಅರ್ಥ ವ್ಯವಸ್ಥೆ ಎಂದು ಹೇಳುವುದರ ಅರ್ಥವು ನಗದು ಹಣದ (ಕರೆನ್ಸಿಯ) ಮೇಲಿದ್ದ ರಿಸರ್ವ್ ಬ್ಯಾಂಕ್‌ನ ಬಾಧ್ಯತೆಯು ಹಣದ ಬೇರೆ ರೂಪಗಳಿಗೆ ಬಾಧ್ಯವಾಗಿರುವ ಬ್ಯಾಂಕಿಂಗ್ ವ್ಯವಸ್ಥೆಯ ಬಾಧ್ಯತೆಯಾಗಿ ವರ್ಗಾವಣೆಗೊಳ್ಳುತ್ತದೆ.

ಕೋಟ್ಯಂತರ ಭಾರತೀಯರು 'ಸಾಲಯೋಗ್ಯ'ರಲ್ಲ!

ಬ್ಯಾಂಕ್ ಮೂಲಕ ವ್ಯವಹರಿಸುವ ಹಣದ ಮೇಲೆ ಹಕ್ಕುದಾರಿಕೆ ಎರಡು ರೀತಿಯಲ್ಲಿ ಸಿಗುತ್ತದೆ. (1) ನನ್ನಲ್ಲಿರುವ ನಗದು ಹಣವನ್ನು (ಕರೆನ್ಸಿಯನ್ನು) ನನ್ನ ಬ್ಯಾಂಕ್ ಖಾತೆಗೆ ಡಿಪಾಸಿಟ್ ಮಾಡಿದಾಗ ಆ ಹಣದ ಮೇಲೆ ನನ್ನ ಹಕ್ಕು ಸ್ಥಾಪಿತವಾಗುತ್ತದೆ. (2) ನಾನು ಡಿಪಾಸಿಟ್ ಮಾಡದೆಯೂ, ಬ್ಯಾಂಕ್ ನನಗೆ ಕೊಡುವ ಸಾಲದ ಹಣ. ಉದಾ: ಕ್ರೆಡಿಟ್ ಕಾರ್ಡ್. ಈ ಹಣದ ಮೇಲೆ ನಾನು ಚಲಾಯಿಸಿದ ಹಕ್ಕನ್ನು ಬ್ಯಾಂಕ್ ಮಾನ್ಯ ಮಾಡುವುದಾಗಿ ಒಪ್ಪಿಕೊಂಡಿರುತ್ತದೆ. ಆದರೆ, ಇಲ್ಲಿ ಒಂದು ತೊಡಕಿದೆ. ಬ್ಯಾಂಕಿನ ದೃಷ್ಟಿಯಲ್ಲಿ ನಾನೊಬ್ಬ 'ಸಾಲಯೋಗ್ಯ' ವ್ಯಕ್ತಿ ಎಂದು ಪರಿಗಣಿತವಾದಾಗ ಮಾತ್ರ ಬ್ಯಾಂಕ್ ನನಗೆ ಸಾಲ ಕೊಡುತ್ತದೆ. ನಮ್ಮ ಬ್ಯಾಂಕ್‌ಗಳ ದೃಷ್ಟಿಯಲ್ಲಿ ಕೋಟ್ಯಂತರ ಮಂದಿ ಭಾರತೀಯರು 'ಸಾಲಯೋಗ್ಯ' ವ್ಯಕ್ತಿಗಳಲ್ಲ.

ನಗರವಾಸಿ ಮಧ್ಯಮ ವರ್ಗದ ಮಂದಿಗೆ ಸುಲಭವಾಗಿ ಕ್ರೆಡಿಟ್ ಕಾರ್ಡ್ ಸಿಗುತ್ತದೆ. ಕ್ರೆಡಿಟ್ ಕಾರ್ಡ್ ಪಡೆಯಲು ಅವರು ಬ್ಯಾಂಕಿಗೆ ಹೋಗುವ ಅವಶ್ಯಕತೆಯೇ ಇಲ್ಲ. ಅವರ ಮನೆ ಬಾಗಿಲಿಗೇ ಹೋಗಿ ಕ್ರೆಡಿಟ್ ಕಾರ್ಡ್ ಕೊಟ್ಟು ಬರುತ್ತಾರೆ. ಆದರೆ, ದೇಶದ ಕೋಟ್ಯಂತರ ಮಂದಿಗೆ ಕ್ರೆಡಿಟ್ ಕಾರ್ಡ್ ಸಿಗುವುದೇ ಇಲ್ಲ.

ಈ ಬ್ಯಾಂಕ್‌ಗಳು ರೈತರನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿವೆ. ಲಕ್ಷಾಂತರ ಮಂದಿ ರೈತರ ಜೊತೆ ನೇರವಾಗಿ ವ್ಯವಹರಿಸುವುದು ತ್ರಾಸದಾಯಕ ಮತ್ತು ಅದರಿಂದ ಲಾಭವಿಲ್ಲ. ಆದ್ದರಿಂದ, ಅವರೊಂದಿಗೆ ವ್ಯವಹರಿಸಲು, ನಾವು ಮಧ್ಯವರ್ತಿಗಳನ್ನು ಬಳಸಿಕೊಳ್ಳುತ್ತೇವೆ ಎಂದು ಬ್ಯಾಂಕ್‌ಗಳು ಯಾವ ಸಂಕೋಚವೂ ಇಲ್ಲದೆ ಹೇಳುತ್ತವೆ. ಲೇವಾ ದೇವಿದಾರರು, ರೈತರು ಮತ್ತು ಬ್ಯಾಂಕ್‌ಗಳ ನಡುವೆ ಮಧ್ಯವರ್ತಿಗಳಾಗಿ ವ್ಯವಹಾರ ನಡೆಸುತ್ತಿದ್ದಾರೆ.

ಬ್ಯಾಂಕ್‌ಗಳ ರಾಷ್ಟ್ರೀಕರಣದ ನಂತರ, ಆದ್ಯತಾ ವಲಯದ ಸಾಲಗಳಲ್ಲಿ, ಕೃಷಿಗೆಂದೇ ಕೊಡುವ ಸಾಲದ ಪ್ರಮಾಣವನ್ನು ನಿಗದಿಪಡಿಸಲಾಗಿತ್ತು. ಆದರೆ ಈಗ ಲಾಭವನ್ನೇ ಒಂದು ಪರಮ ಗುರಿಯಾಗುಳ್ಳ ನವ-ಉದಾರ ಆರ್ಥಿಕ ನೀತಿಗಳು ಜಾರಿಗೆ ಬಂದ ನಂತರ ಆದ್ಯತಾ ವಲಯದ ಪರಿಕಲ್ಪನೆಯೇ ಬದಲಾಗಿದೆ. ಕೃಷಿಗೆ ಅಥವಾ ರೈತರಿಗೆಂದೇ ಮೀಸಲಾಗಿರುವ ಸಾಲಗಳನ್ನು ಕೃಷಿ ಸಂಬಂಧಿತ ಬಹುರಾಷ್ಟ್ರೀಯ ಕಂಪೆನಿಗಳು ಬಾಚಿಕೊಳ್ಳುತ್ತಿವೆ.



ವ್ಯಂಗ್ಯಚಿತ್ರ: ಮಂಜುಲ್, ಡಿಎನ್‌ಎ

ನಗದು ರಹಿತ ವ್ಯವಹಾರಗಳೆಂಬ ಭ್ರಮೆ

ರೈತರ ಪರಿಸ್ಥಿತಿ ಚಿಂತಾಜನಕವಾಗಿದೆ. ಬ್ಯಾಂಕ್ ಸಾಲ ಸಿಗುತ್ತಿಲ್ಲ. ಅವರು, ಬೇರೆ ದಾರಿಯೇ ಇಲ್ಲದೆ, ಲೇವಾ ದೇವಿದಾರರಿಂದ ಸಾಲ ಪಡೆಯುತ್ತಾರೆ. ಲೇವಾ ದೇವಿದಾರರು, ಬ್ಯಾಂಕ್‌ಗಳಿಂದ ಕಡಿಮೆ ಬಡ್ಡಿ ದರದಲ್ಲಿ ಪಡೆದ ಸಾಲವನ್ನು ಬಡ್ಡಿ ವ್ಯವಹಾರದಲ್ಲಿ ತೊಡಗಿಸುತ್ತಾರೆ. ಈ ವ್ಯವಹಾರಗಳು ನಗದು ರೂಪದಲ್ಲಿ ನಡೆಯುತ್ತವೆ. ಅವುಗಳನ್ನು ಬ್ಯಾಂಕ್ ಚೆಕ್‌ಗಳ ಮೂಲಕವೇ ಆಗುವಂತೆ ಮಾಡುವ ಮೂಲಕ 'ನಗದು ರಹಿತ' ಅರ್ಥ ವ್ಯವಸ್ಥೆಯತ್ತ ಸಾಗಬಹುದು ಎಂದು ಕೆಲವರು ಹೇಳುತ್ತಾರೆ.

ಕಿರು ಉತ್ಪಾದಕರಿಗೂ ಬ್ಯಾಂಕ್ ಸಾಲ ಸಿಗುತ್ತಿಲ್ಲ. ಬ್ಯಾಂಕ್‌ಗಳ ದೃಷ್ಟಿಯಲ್ಲಿ ಅವರೂ 'ಸಾಲಯೋಗ್ಯ'ರಲ್ಲ ಅನಿವಾರ್ಯವಾಗಿ, ಅವರೂ ಲೇವಾ ದೇವಿದಾರರಿಂದಲೇ ಸಾಲ ಪಡೆಯುತ್ತಾರೆ. ಹಾಗಾಗಿ, ನಮ್ಮ ಸಮಾಜದ ಅತಿ ದೊಡ್ಡ ವಿಭಾಗವನ್ನು ನಮ್ಮ ಬ್ಯಾಂಕ್‌ಗಳು ಮತ್ತು ಹಣ ಕಾಸು ಸಂಸ್ಥೆಗಳು ಎಲ್ಲಿಯ ವರೆಗೆ 'ಸಾಲಯೋಗ್ಯ'ರೆಂದು ಪರಿಗಣಿಸುವುದಿಲ್ಲವೊ ಅಲ್ಲಿಯವರೆಗೆ 'ನಗದು ರಹಿತ' ವ್ಯವಹಾರಗಳು ಭ್ರಮೆಯಾಗಿಯೇ ಉಳಿಯುತ್ತವೆ.

ಎಲ್ಲರಿಗೂ ಖಾತೆ –ಬ್ಯಾಂಕುಗಳಿಗಿಲ್ಲ ಆಸಕ್ತಿ

ಎಲ್ಲ ವ್ಯವಹಾರಗಳೂ ನಗದು ರಹಿತವಾಗಿ ನಡೆಯಬೇಕು ಎಂದಾದರೆ ಎಲ್ಲರೂ ಬ್ಯಾಂಕ್ ಖಾತೆ ಹೊಂದಿರುವುದು ಅನಿವಾರ್ಯವಾಗುತ್ತದೆ. ಉದಾ: ಒಬ್ಬ ಸಾಮಾನ್ಯ ವ್ಯಕ್ತಿಯು ತನಗೆ ಬಂದ ಹಣವನ್ನು (ನಗದು ಅಥವಾ ಚೆಕ್ ರೂಪದಲ್ಲಿ) ತನ್ನ ಬ್ಯಾಂಕ್ ಖಾತೆಗೆ ಜಮಾ ಮಾಡುತ್ತಾನೆ ಎಂದಿಟ್ಟುಕೊಳ್ಳೋಣ. ನಂತರ, ಅವನು ಬೇರೆಯವರಿಗೆ ಹಣ ಕೊಡಬೇಕಾದ ಸಂದರ್ಭದಲ್ಲಿ, ಅವನಿಂದ ಹಣ ಪಡೆಯುವ ಪ್ರತಿಯೊಬ್ಬ ವ್ಯಕ್ತಿಯೂ ಬ್ಯಾಂಕ್ ಖಾತೆ ಹೊಂದಿರಬೇಕಾಗುತ್ತದೆ. ಅಂದರೆ, ಇಡೀ ಜನ ಸಂಖ್ಯೆಯು ಬ್ಯಾಂಕ್ ಖಾತೆ ಹೊಂದಿರಬೇಕಾಗುತ್ತದೆ.

ಈಗ, ಬ್ಯಾಂಕಿಂಗ್ ಸೌಲಭ್ಯವು ಒಟ್ಟು ಜನಸಂಖ್ಯೆಯ ಕೇವಲ ಶೇ.30 ಭಾಗ ಜನತೆಗೆ ಸೀಮಿತಗೊಂಡಿದೆ. ಉಳಿದ ಶೇ.70 ಮಂದಿಯನ್ನು ತಲುಪಲು ಸಾಧ್ಯವಿಲ್ಲವೆಂದೇನಲ್ಲ. ಹಂತ ಹಂತವಾಗಿ ಅವರನ್ನು ತಲುಪುವುದು ಸಮಸ್ಯೆಯಲ್ಲ. ಆದರೆ ಆ ದಾರಿಯಲ್ಲಿ ನಮ್ಮ ಆರ್ಥಿಕ ವ್ಯವಸ್ಥೆ ಸಾಗಿಲ್ಲ. ಏಕೆಂದರೆ, ಈ ಶೇ.70 ಮಂದಿಯಲ್ಲಿ ಹೆಚ್ಚಿನವರು ಅನೌಪಚಾರಿಕ ವಲಯಗಳಲ್ಲಿ ಕೆಲಸ ಮಾಡುವ ಬಡವರು. ಅವರ ಸಂಪಾದನೆ ಎರಡು ಹೊತ್ತಿನ ಊಟಕ್ಕೂ ಸಾಲದು. ಇಂತಹ ಮಂದಿಗೆ ಬ್ಯಾಂಕಿಂಗ್ ಸೌಲಭ್ಯ ಒದಗಿಸುವ ಆಸಕ್ತಿ ಬ್ಯಾಂಕ್‌ಗಳಿಗಿಲ್ಲ.

ಐದು ಲಕ್ಷ ಹಳ್ಳಿಗಳಿಗೆ ಬ್ಯಾಂಕಿಂಗ್ ಸೌಲಭ್ಯವೇ ಇಲ್ಲ

ವಾಸ್ತವವಾಗಿ, ಸುಮಾರು ಐದು ಲಕ್ಷ ಹಳ್ಳಿಗಳಲ್ಲಿ ವಾಸಿಸುವವರಿಗೆ ಬ್ಯಾಂಕಿಂಗ್ ಸೌಲಭ್ಯ ಒದಗಿಸಿಲ್ಲ. ಏರುತ್ತಿರುವ ನಿರ್ವಹಣಾ ವೆಚ್ಚವನ್ನು ಇಳಿಸುವ ಮತ್ತು ಲಾಭ ಹೆಚ್ಚಿಸಿಕೊಳ್ಳುವ ಕಾರಣದ ಮೇಲೆ ಎಲ್ಲ ಬ್ಯಾಂಕ್‌ಗಳೂ ತಮ್ಮ ಸಾವಿರಾರು ಗ್ರಾಮೀಣ ಶಾಖೆಗಳನ್ನು ಮುಚ್ಚಿವೆ. ಲಾಭದಾಯಕವಲ್ಲ ಎಂಬ ಕಾರಣದ ಮೇಲೆ, ಈ ಪ್ರದೇಶಗಳಲ್ಲಿ ವಾಸಿಸುವ ಗ್ರಾಹಕರೊಂದಿಗೆ ನೇರ ಸಂಬಂಧ ಇಟ್ಟುಕೊಳ್ಳಲು ಬ್ಯಾಂಕ್‌ಗಳು ಬಯಸುತ್ತಿಲ್ಲ. ಆದ್ದರಿಂದ, ಅವರಿಗೆ ಸಾಲ ಕೊಡುವ ಮತ್ತು ಅವರಿಂದ ಠೇವಣಿ ಸಂಗ್ರಹಿಸುವ ಕೆಲಸವನ್ನು ಮಧ್ಯವರ್ತಿಗಳು ವಹಿಸಿಕೊಂಡಿವೆ. ಇದರಲ್ಲಿ ಆಶ್ಚರ್ಯವೇನಿಲ್ಲ. ಈ ಪರಿಸ್ಥಿತಿಯು ನವ-ಉದಾರ ಆರ್ಥಿಕ ನೀತಿಗಳಿಗನುಗುಣವಾಗಿದೆ. ಆದ್ದರಿಂದ, ಈಗ, ಎಲ್ಲರಿಗೂ ಬ್ಯಾಂಕಿಂಗ್ ಸೇವೆಗಳನ್ನು ಒದಗಿಸುತ್ತೇವೆ ಎನ್ನುವುದು ಅರ್ಥವಿಲ್ಲದ ಮಾತು. ಏಕೆಂದರೆ, ಗ್ರಾಮೀಣ ಪ್ರದೇಶಗಳಲ್ಲಿದ್ದ ಸಾವಿರಾರು ಶಾಖೆಗಳನ್ನು ಮುಚ್ಚಿದ ಕಾರಣಗಳೇ ಈಗ ಅಲ್ಲಿ ಬ್ಯಾಂಕ್ ಶಾಖೆಗಳನ್ನು ತೆರೆಯಲು ಅಡ್ಡ ಬರುತ್ತವೆ.

ಈ ಸಮಸ್ಯೆಯನ್ನು ಬಡ ಜನತೆಯ ದೃಷ್ಟಿಕೋನದಿಂದ ನೋಡೋಣ. ಬಡ ಜನತೆ ದುಬಾರಿ ಬಡ್ಡಿಯ ಲೇವಾ ದೇವಿದಾರರ ಬಿಗಿ ಹಿಡಿತಕ್ಕೆ ಸಿಕ್ಕಿ ಬಿದ್ದಿದ್ದಾರೆ. ಸುಲಭ ಬಡ್ಡಿ ದರದಲ್ಲಿ, ಅಗತ್ಯಗಳಿಗೆ ತಕ್ಕಂತೆ, ಬ್ಯಾಂಕ್‌ಗಳು ಅವರಿಗೆ ಸಾಲ ಕೊಡದ ಹೊರತು, ಅವರನ್ನು ಲೇವಾ ದೇವಿದಾರರ ಹಿಡಿತದಿಂದ ಬಿಡಿಸುವುದು ಸಾಧ್ಯವಿಲ್ಲ. ಅವರ ಪರಿಸ್ಥಿತಿ ಬದಲಾಗದ ಹೊರತು, ಅವರು ತಮ್ಮ ಬಿಡಿ ಕಾಸಿನ ಸಂಪಾದನೆಯನ್ನು ಬ್ಯಾಂಕ್ ಖಾತೆಗೆ ಜಮಾ ಮಾಡಿ, ನಂತರ, ನಗದು ರಹಿತ ವ್ಯವಹಾರಗಳ ಮೂಲಕ ತಮ್ಮ ಖರ್ಚುಗಳನ್ನು ನಿರ್ವಹಿಸಬೇಕೆಂದು ನಿರೀಕ್ಷಿಸುವುದು ಅಸಂಬದ್ಧವಾಗುತ್ತದೆ. ಬಡ ಜನತೆ, ನಗದು ರೂಪದಲ್ಲಿ ಹಣ ಇಟ್ಟುಕೊಳ್ಳಲು ಬಯಸುತ್ತಾರೆ. ನಗದು ರೂಪದಲ್ಲೇ ಹಣ ಖರ್ಚು ಮಾಡಲು ಬಯಸುತ್ತಾರೆ. ಏಕೆಂದರೆ, ಅವರು ತಮಗೆ ಬೇಕಾದವರಿಗೆ ಯಾವ ಹೊತ್ತಿನಲ್ಲಾದರೂ ತಮಗೆ ಸಾಧ್ಯವಾದಷ್ಟು ಹಣ ಕೊಡಬಹುದು ಮತ್ತು ಅವರಿಂದ ಪಡೆಯಬಹುದು. ಅದಕ್ಕೆ ಯಾವುದೇ ನಿರ್ವಹಣಾ ವೆಚ್ಚವಿಲ್ಲ. ಇದೇ ಕಾರಣಗಳಿಂದ, ಅವರು ತಮಗೆ ಸಲ್ಲುವ ಹಣವನ್ನು ನಗದು ರೂಪದಲ್ಲಿ ಪಡೆಯಲು ಬಯಸುತ್ತಾರೆ.

ಬಂಡವಾಳಗಾರರಿಗೆ ಸ್ವಾತಂತ್ರ್ಯದ ಭರವಸೆ ಪ್ರಜೆಗಳಿಗೆ 'ನಗದು ರಹಿತ'ತೆಯ ಬಲವಂತ

ಇನ್ನು, ಎಲ್ಲ ಹಣಕಾಸು ವ್ಯವಹಾರಗಳೂ 'ನಗದು ರಹಿತ'ವಾಗಿಯೇ ನಡೆಯಬೇಕೆಂಬ ಉದ್ದೇಶದ ಒಂದು ಸರ್ಕಾರವು ಅದನ್ನು ಕಾರ್ಯಗತಗೊಳಿಸುವ ಸಲುವಾಗಿ 500 ಮತ್ತು 1000 ರೂ ಕರೆನ್ಸಿ ನೋಟುಗಳನ್ನು ರದ್ದುಮಾಡಿರುವುದಂತೂ ದಬ್ಬಾಳಿಕೆಯ ಕ್ರಮವಾಗಿದೆ. ಸಂವಿಧಾನ ದತ್ತ ಹಕ್ಕುಗಳ ಮೇಲಿನ ದಮನವು ಎಷ್ಟು ನಿಂದನಾರ್ಹವೊ ಈ ಕ್ರಮವೂ ಅಷ್ಟೇ ನಿಂದನಾರ್ಹವಾಗಿದೆ. ಇಡೀ ವಿಶ್ವದಲ್ಲೇ ನಮ್ಮದೇ ಅತ್ಯಂತ ಉದಾರ ಮನೋಭಾವದ ಅರ್ಥ ವ್ಯವಸ್ಥೆ ಎಂಬುದಾಗಿ ಸರ್ಕಾರವು ವಿದೇಶಿ ಬಂಡವಾಳಗಾರರಿಗೆ ಭರವಸೆ ಕೊಟ್ಟಿದೆ.

ನಮ್ಮ ದೇಶದೊಳಗೆ ಆರ್ಥಿಕ ವ್ಯವಹಾರ/ಚಟುವಟಿಕೆ ನಡೆಸಲು ವಿದೇಶಿ ಬಂಡವಾಳಗಾರರಿಗೆ ಸಂಪೂರ್ಣ ಸ್ವಾತಂತ್ರ್ಯವಿದೆ ಎಂದೇ ಈ ಮಾತಿನ ಅರ್ಥ. ಅದೇ ಸರ್ಕಾರ, ಅದೇ ಹೊತ್ತಿನಲ್ಲಿ, ದಾರಿದ್ರ್ಯದಲ್ಲಿರುವ ಲಕ್ಷಾಂತರ ಮಂದಿ ವಾರಗಟ್ಟಲೇ 'ನಗದು ರಹಿತ'ವಾಗಿಯೇ ಉಳಿಯುವಂತೆ ಬಲಾತ್ಕಾರ ಹೇರಿರುವುದು ಒಂದು ಅಣಕವಾಗಿದೆ. ನಮ್ಮ ಸರ್ಕಾರಕ್ಕೆ ವಿದೇಶಿ ಬಂಡವಾಳಗಾರರ ಸ್ವಾತಂತ್ರ್ಯವೇ ಮುಖ್ಯವಾಗುತ್ತದೆ. ತಮಗೆ ಬೇಕಾದ ವ್ಯವಹಾರಗಳನ್ನು ತಮಗೆ ಸರಿ ಹೊಂದುವ ರೂಪದಲ್ಲಿ ಹಣ ಬಳಸುವ ತನ್ನ ಪ್ರಜೆಗಳ ಸ್ವಾತಂತ್ರ್ಯ ಮುಖ್ಯವಲ್ಲ.



ಕಾರ್ಪೊರೇಟ್-ಪರ ಗೇಣಿ ಕಾಯ್ದೆ ತಿದ್ದುಪಡಿಯ ವಿರುದ್ಧ ಚಾರಿತ್ರಿಕ ಝಾರ್ಖಂಡ್ ಬಂದ್

ಈ ಅಂಕಣದಲ್ಲಿ ಈ ಹಿಂದೆ ವರದಿಯಾಗಿರುವಂತೆ, ಆದಿವಾಸಿ ಜನಗಳು ಗಮನಾರ್ಹ ಪ್ರಮಾಣದಲ್ಲಿ ಇರುವ ಝಾರ್ಖಂಡ್ ರಾಜ್ಯದ ಬಿಜೆಪಿ ಸರಕಾರ ಛೋಟಾನಾಗ್ಪುರ ಗೇಣಿ ಕಾನೂನು ಮತ್ತು ಸಂಥಾಲ್ ಪರಗಣ ಗೇಣಿ ಕಾನೂನಿಗೆ ' ತಿದ್ದುಪಡಿಗಳನ್ನು ತಂದು ಬಡ ಆದಿವಾಸಿಗಳನ್ನು ವಂಚಿಸಿ ಅಪಾರ ಲಾಭ ಗಿಟ್ಟಿಸಲು ಕಾರ್ಪೊರೇಟ್‌ಗಳಿಗೆ ಅನುವು ಮಾಡಿಕೊಟ್ಟಿದೆ. ಇದನ್ನು ಪ್ರತಿಭಟಿಸಿ ಆಳುವ ಪಕ್ಷ ಬಿಟ್ಟು ಸುಮಾರಾಗಿ ಎಲ್ಲ ಪಕ್ಷಗಳೂ ಪ್ರತಿಭಟನೆಗಳನ್ನು ನಡೆಸುತ್ತ ಬಂದಿವೆ.ಎಡಪಕ್ಷಗಳು ಈ ಹೋರಾಟದಲ್ಲಿ ಮುಂಚೂಣಿಯಲ್ಲಿವೆ. ಜನಗಳ, ಅದರಲ್ಲೂ ಆದಿವಾಸಿ ಜನಗಳ ಆತಂಕಗಳಿಗೆ ಸ್ಪಂದಿಸುವ ಬದಲು ಬಿಜೆಪಿ ಸರಕಾರ ದಮನ ಕ್ರಮಗಳನ್ನು ಅನುಸರಿಸಿಕೊಂಡು ಬಂದಿದೆ. ಇದನ್ನು ಪ್ರತಿಭಟಿಸಿ ನವಂಬರ್ 25ರಂದು ಸಿಪಿಐ(ಎಂ), ಸಿಪಿಐ, ಸಿಪಿಐ(ಎಂಎಲ್), ಜೆಎಂಎಂ, ಜೆವಿಎಂ(ಪಿ), ಕಾಂಗ್ರೆಸ್ ಮತ್ತು ಜೆಡಿ(ಯು) ಪಕ್ಷಗಳು ಝಾರ್ಖಂಡ್‌ಗೆ ಬಂದ್‌ಗೆ ಕರೆ ನೀಡಿದ್ದವು.

ಇದಕ್ಕೆ ಅಪಾರ ಸ್ಪಂದನೆ ಕಂಡ ಬಿಜೆಪಿ ಸರಕಾರ ಮತ್ತೆ ದಮನಚಕ್ರ ನಡೆಸಿದೆ. ಅಸೆಂಬ್ಲಿ ಎದುರು ಈ ಪಕ್ಷಗಳು ನಡೆಸಿದ ಶಾಂತಿಯುತ ಮತಪ್ರದರ್ಶನದ ಮೇಲೆ ಲಾಠೀ ಪ್ರಹಾರ, ನೀರಿನ ತೋಪುಗಳ ಪ್ರಯೋಗ ಮತ್ತು ಆಶ್ರುವಾಯು ಪ್ರಯೋಗ ನಡೆಸಿದೆ.

ಅಂದು ಬೆಳಿಗ್ಯೆಯೇ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಗೋಪೀಕಾಂತ್ ಭಕ್ಷಿ ಮತ್ತಿತರ ಸಿಪಿಐ(ಎಂ) ಮುಖಂಡರು, ಸಿಪಿಐನ ಹಿರಿಯ ಮುಖಂಡ ಮತ್ತು ಮಾಜಿ ಎಂಪಿ ಭುನೇಶ್ವರ್ ಮೆಹ್ತ, ಸಿಪಿಐ ರಾಜ್ಯಕಾರ್ಯದರ್ಶಿ ಜನಾರ್ಧನ್ ಪ್ರಸಾದ್, ಸಿಪಿಐ(ಎಂಎಲ್) ಮುಖಂಡ ಭುನೇಶ್ವರ್ ಕೇವತ್, ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಜೆಎಂಎಂನ ಹೇಮಂತ್ ಸೊರೆನ್ ಮತ್ತು ಜೆವಿಎಂ(ಪಿ)ಯ ಬಾಬುಲಾಲ್ ಮರಾಂಡಿ, ಕಾಂಗ್ರೆಸ್‌ನ ಹಿರಿಯ ಮುಖಂಡ ಮತ್ತು ಮಾಜಿ ಕೇಂದ್ರ ಮಂತ್ರಿ ಸುಭೋದ್ ಕಾಂತ್ ಸಹಾಯ್ ಮತ್ತಿತರರನ್ನು ಬಂಧಿಸಿ ಮೋರಾಬಾದಿ ಸ್ಟೇಡಿಯಂ ಕ್ಯಾಂಪಿನಲ್ಲ ಸಂಜೆಯ ವರೆಗೆ ಇಡಲಾಯಿತು.

ರಾಜ್ಯಾದ್ಯಂತ 10ಸಾವಿರಕ್ಕೂ ಹೆಚ್ಚು ಪ್ರತಿಭಟನಾಕಾರರನ್ನು ಬಂಧಿಸಲಾಯಿತು.

ಝಾರ್ಖಂಡ್ ಸರಕಾರದ ಈ ದಮನಚಕ್ರದಿಂದ ಆಕ್ರೋಶಗೊಂಡು, ಮತ್ತೆ ನವಂಬರ್ 28ರ ರಾಷ್ಟ್ರೀಯ ಆಕ್ರೋಶ ದಿನವನ್ನುರಾಜ್ಯದಲ್ಲಿ ಇನ್ನಷ್ಟು ತೀವ್ರ ರೀತಿಯಲ್ಲಿ ಆಚರಿಸಲಾಯಿತು. ದಿನವಿಡೀ ನಡೆದ ಧರಣಿ ಕಾರ್ಯಕ್ರಮದಲ್ಲಿ ಮೇಲೆ ಹೇಳಿದ ಎಲ್ಲ ಮುಖಂಡರೂ ಭಾಗವಹಿಸಿದರು. ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.



ಪಂಜಾಬ್: ನದಿ ನೀರು ವಿವಾದದ ಪ್ರಜಾಸತ್ತಾತ್ಮಕ ಪರಿಹಾರಕ್ಕೆ ಎಡಪಕ್ಷಗಳ ಸಮಾವೇಶ

ಈ ತಿಂಗಳ ಆರಂಭದಲ್ಲಿ ಸುಪ್ರಿಂ ಕೋರ್ಟ್ 2004ರ 'ಪಂಜಾಬ್ ಒಪ್ಪಂದಗಳ ಅಂತ್ಯ ಕಾಯ್ದೆ'ಯನ್ನು ಅನೂರ್ಜಿತಗೊಳಿಸಿತು. ಇದರಿಂದಾಗಿ ಪಂಜಾಬ್ ಮತ್ತು ಹರ್ಯಾಣದ ನಡುವೆ ರಾವಿ-ಬ್ಯಾಸ್ ನದಿಯ ನೀರಿನ ಹಂಚಿಕೆಯ ಬಗ್ಗೆ ವಿವಾದವನ್ನು ಮತ್ತೆ ತೆರೆದಿದೆ. ಪಂಜಾಬ್ ಮತ್ತು ಹರ್ಯಾಣದ ಬೂರ್ಜ್ವಾ ರಾಜಕೀಯ ಪಕ್ಷಗಳು ಎಂದಿನಂತೆ ಜನಗಳ ನೈಜ ಆತಂಕಗಳಿಗೆ ಪರಿಹಾರ ಸೂಚಿಸುವ ಬದಲು ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಿವೆ.

ಈ ಕಾಯ್ದೆ ಅನೂರ್ಜಿತವಾಗಿರುವುದರಿಂದ ಕೇಂದ್ರ ಸರಕಾರ ಸಟ್ಲೆಜ್-ಯಮುನಾ ಲಿಂಕ್(ಎಸ್‌ವೈಎಲ್) ಕಾಲುವೆಯ ಕೆಲಸವನ್ನು ಕೈಗೆತ್ತಿಕೊಳ್ಳಬೇಕಾಗಿದೆ. ಆಗ ಮಾಲ್ವಾ ಪ್ರದೇಶದ ನೀರಾವರಿ ಬತ್ತಿ ಹೋಗುತ್ತದೆ, ಈ 9 ಲಕ್ಷ ಎಕ್ರೆ ನೀರಾವರಿ ಪ್ರದೇಶ ಬರಡು ಭೂಮಿಯಾಗಿ ಬಿಡುತ್ತದೆ ಎಂಬದು ಈ ಭಾಗದ ರೈತರ ಆತಂಕ.

ಕೇಂದ್ರದಲ್ಲಿ ಮತ್ತು ಹರ್ಯಾಣದಲ್ಲಿ ಬಿಜೆಪಿ ಸರಕಾರಗಳೇ ಇದ್ದರೂ, ಪಂಜಾಬಿನಲ್ಲೂ ಬಿಜೆಪಿ ಆಳುವ ಕೂಟದಲ್ಲಿದ್ದರೂ ಪ್ರಧಾನಿಗಳು ವಹಿಸಬೇಕಾದ ಮುತುವರ್ಜಿಯನ್ನು ವಹಿಸುತ್ತಿಲ್ಲ ಎಂಬ ಬಗ್ಗೆ ಈ ಪ್ರದೇಶದಲ್ಲಿ ಬೇಸರ ಹರಡಿದ್ದರೆ, ಈ ಪ್ರಶ್ನೆಯನ್ನು ಪಂಜಾಬ್ ಮತ್ತು ಹರ್ಯಾಣದ ಜನಗಳ ನಡುವೆ ವೈಮನಸ್ಯ ಹುಟ್ಟಿಸಲು ಬಳಸಲಾಗುತ್ತಿದೆ, ಅದೂ ಮುಂಬರುವ ಪಂಜಾಬ್ ವಿಧಾನಸಭಾ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು.

ಪಂಜಾಬ್ ವಿಧಾನಸಭೆ ಎರಡು ಠರಾವುಗಳನ್ನು ಅಂಗೀಕರಿಸಿ ಕೇಂದ್ರ ಸರಕಾರ ಎಸ್‌ವೈಎಲ್ ಕಾಲುವೆ ನಿರ್ಮಿಸಲು ಸಹಕಾರ ಕೊಡುವುದಿಲ್ಲ, ರಾಜಸ್ತಾನ ಮತ್ತು ಹರ್ಯಾಣ ನೀರಿನ ಬಳಕೆ ಮಾಡಿದ್ದಕ್ಕೆ ಹಣ ಪಾವತಿ ಮಾಡಬೇಕು ಎಂದು ಆಗ್ರಹಿಸಿದೆ, ಅಲ್ಲದೆ ಪಂಜಾಬ್ ಸರಕಾರ ಭೂಮಿ ಡಿನೋಟಿಫಿಕೇಶನ್ ಆದೇಶವನ್ನು ಅದಕ್ಕೆ ಸಂವಿಧಾನಿಕ ಬೆಲೆ ಇಲ್ಲದಿದ್ದರೂ ಮಾಡಿದೆ.

ಈ ಹಿನ್ನೆಲೆಯಲ್ಲಿ ರಾಜ್ಯದ ನಾಲ್ಕು ಎಡಪಕ್ಷಗಳು- ಸಿಪಿಐ(ಎಂ), ಸಿಪಿಐ, ಆರ್‌ಎಂಪಿಐ ಮತ್ತು ಸಿಪಿಐ(ಎಂಎಲ್) ನವಂಬರ್ 23ರಂದು ನದಿನೀರು ವಿವಾದದ ಮೇಲೆ ರಾಜ್ಯ ಸಮಾವೇಶವನ್ನು ಸಂಘಟಿಸಿದವು.

ಸಮಸ್ಯೆಯನ್ನು ಮತ್ತು ಅದಕ್ಕೆ ಕೈಗೊಳ್ಳಬೇಕಾದ ಪರಿಹಾರಗಳನ್ನು ಚರ್ಚಿಸಿದ ಸಮಾವೇಶ ಈ ಸಮಸ್ಯೆಗೆ ಪ್ರಜಾಸತ್ತಾತ್ಮಕವಾಗಿ ಮತ್ತು ರಾಜಕೀಯವಾಗಿ ಒಂದು ನ್ಯಾಯಯುತವಾದ ಮತ್ತು ಕಾರ್ಯಸಾಧ್ಯವಾದ ಪರಿಹಾರವನ್ನು ಮಾತುಕತೆಗಳ ಮೂಲಕ ಸೌಹಾರ್ದಯುತವಾಗಿ ಕಂಡುಕೊಳ್ಳಬೇಕು, ಸುಪ್ರಿಂ ಕೋರ್ಟಿನ ಹಾಲಿ ನ್ಯಾಯಾಧೀಶರ ನೇತೃತ್ವದಲ್ಲಿ ನೀರು ತಜ್ಞರಿರುವ ಒಂದು ಟ್ರಿಬ್ಯುನಲ್ ಅನ್ನು ರಚಿಸಬೇಕು, ಎರಡು ರಾಜ್ಯಗಳ ನಡುವಿನ ಪರಿಸ್ಥಿತಿ ಹದಗೆಡುತ್ತಿರುವುದರಿಂದ ಮೋದಿ ಸರಕಾರ ತಕ್ಷಣವೇ ಮಧ್ಯಪ್ರವೇಶಿಸಬೇಕೆಂದು ಹೇಳಿದೆ.

ಅಕಾಲಿಗಳು, ಕಾಂಗ್ರೆಸ್, ಎಎಪಿ ಮತ್ತು ಹರ್ಯಾಣದ ಖಟ್ಟರ್ ಸರಕಾರ ಸಂಕುಚಿತ ಚುನಾವಣಾ ದೃಷ್ಟಿಯಿಂದ ಕೊಡುತ್ತಿರುವ ಉದ್ರೇಕಕಾರಿ ಹೇಳಿಕೆಗಳಿಗೆ ಬಲಿ ಬೀಳದೆ, ಶಾಂತಿಯಿಂದಿದ್ದು ಎರಡು ಜನತೆಗಳ ನಡುವಿನ ಸೌಹಾರ್ದವನ್ನು ಕಾಯ್ದುಕೊಳ್ಳಬೇಕೆಂದು ಎಡಪಕ್ಷಗಳ ಸಮಾವೇಶ ಎರಡೂ ರಾಜ್ಯಗಳ ಜನತೆಗೆ ಕರೆ ನೀಡಿದೆ. ಒಂದು ಪ್ರಜಾಸತ್ತಾತ್ಮಕ ರಾಜಕೀಯ ಪರಿಹಾರಕ್ಕೆ ಆಗ್ರಹಿಸಿ ಜಿಲ್ಲಾಮಟ್ಟಗಳಲ್ಲಿ ಸಾಮೂಹಿಕ ಧರಣಿಗಳನ್ನು ನಡೆಸಲೂ ಸಮಾವೇಶ ನಿರ್ಧರಿಸಿದೆ.

ದುರ್ಗಾಪುರದ ಕಾರ್ಮಿಕರ ಪರಂಪರೆ ಉಳಿಸಲು ಹೋರಾಟ

ಪಶ್ಚಿಮ ಬಂಗಾಳದ ಮೂರನೆ ಅತಿ ದೊಡ್ಡ ನಗರ ದುರ್ಗಾಪುರಕ್ಕೆ ಭಾರತದ ಕೈಗಾರಿಕಾ ಅಭಿವೃದ್ಧಿಯಲ್ಲಿ ಒಂದು ವಿಶಿಷ್ಟವಾದ ಸ್ಥಾನವಿದೆ. ರಾಣಿಗಂಜ್ ಕಲ್ಲಿದ್ದಲು ಗಣಿಗಳಿಗೆ ಸಮೀಪದಲ್ಲಿರುವ ದುರ್ಗಾಪುರದಲ್ಲಿ ಭಾರತ ಸರ್ಕಾರವು 1959ರಲ್ಲಿ ಅತಿ ದೊಡ್ಡ ಉಕ್ಕಿನ ಕಾರ್ಖಾನೆ ಸ್ಥಾಪಿಸಿದನಂತರ, ದೇಶದ ಕೈಗಾರಿಕಾ ಅಭಿವೃದ್ಧಿ ವೇಗ ಪಡೆಯಿತು.

ಬಂಡವಾಳಶಾಹಿಗಳ ದೃಷ್ಟಿಯಲ್ಲಿ ಅದೊಂದು ಬಂಗಾಳದ ಫಲವತ್ತಾದ ನದಿ ಭೂಮಿ ಎಂದೂ ಮತ್ತು ಕಾರ್ಮಿಕ ವರ್ಗದ ದೃಷ್ಟಿಯಲ್ಲಿ ಅದು ಬಂಗಾಳದ ಪೆಟ್ರೊಗ್ರಾಡ್ ಎಂದೂ ಭಾವಿಸಲಾಗಿದೆ.(ರಷ್ಯಾದ ಕ್ರಾಂತಿಯ ಸಮಯದಲ್ಲಿ ಪೆಟ್ರೊಗ್ರಾಡ್ ರಷ್ಯಾದ ರಾಜಧಾನಿಯಾಗಿತ್ತು ಮತ್ತು ರಷ್ಯಾದ ಸಮಾಜವಾದಿ ಕ್ರಾಂತಿಯಲ್ಲಿ ಪೆಟ್ರೊಗ್ರಾಡ್ ನಗರದ ಕಾರ್ಮಿಕರು ವಹಿಸಿದ ಪಾತ್ರ ನಿರ್ಣಾಯಕವಾಗಿತ್ತು) ದುರ್ಗಾಪುರದಲ್ಲಿ, 1966ರಲ್ಲಿ ಆಟೋಮೇಷನ್ (ಅಂದರೆ, ಸ್ವಯಂ ಚಾಲಿತ ಯಂತ್ರಗಳ ಅಳವಡಿಕೆ) ವಿರುದ್ಧವಾಗಿ ನಡೆದ ಒಂದು ಧೀರೋದ್ಧಾತ ಹೋರಾಟ, ಕಾರ್ಮಿಕರ ಇತಿಹಾಸದಲ್ಲಿ ಒಂದು ದಂತ ಕಥೆಯಾಗಿ ಉಳಿದಿದೆ. ಸ್ವಯಂ ಚಾಲಿತ ಯಂತ್ರಗಳ ಅಳವಡಿಕೆಯಿಂದ ತಮ್ಮ ಉದ್ಯೋಗ ನಾಶವಾಗುತ್ತದೆ. ಆದ್ದರಿಂದ, ತಮಗೆ ಉದ್ಯೋಗ ಭದ್ರತೆಯ ಭರವಸೆ ಕೊಡಬೇಕೆಂದು ಒತ್ತಾಯಿಸಿ, 1966ರ ಮಾರ್ಚ್ 10ರಿಂದ ಎಪ್ರಿಲ್ 6ರ ವರೆಗೆ ಮುಷ್ಕರ ನಡೆಯಿತು. ನಂತರ, ಆಗಸ್ಟ್ 5 ರಂದು ಒಬ್ಬ ಕೆಲಸಗಾರನ್ನು ವಜಾ ಮಾಡಿದಾಗ ಪ್ರತಿಭಟನೆ ಮತ್ತೆ ಆರಂಭವಾಯ್ತು. ಕೆಲಸಗಾರರು ಜನರಲ್ ಮ್ಯಾನೇಜರ್ ಬಳಿ ಪ್ರತಿಭಟಿಸಲು ಹೋದಾಗ, ಕಾರ್ಖಾನೆಯ ರಕ್ಷಣಾ ಸಿಬ್ಬಂದಿ ಅವರ ಮೇಲೆ ನಡೆಸಿದ ದಾಳಿಯಲ್ಲಿ, ತಲೆ ಏಟಿನಿಂದ ಷೇಕ್ ಜಬ್ಬಾರ್ ಎಂಬ ಸಿಪಿಐ(ಎಂ) ಬೆಂಬಲಿಗ ಮೃತನಾದ. ಮರು ದಿನ ಅಶಿಂ ದಾಸ್‌ಗುಪ್ತಾ ಎಂಬ ಸಿಪಿಐ(ಎಂ)ನ ಇನ್ನೊಬ್ಬ ಬೆಂಬಲಿಗ ಪೋಲೀಸ್ ಗೊಡೇಟಿಗೆ ಬಲಿಯಾದ. ಅವರಿಬ್ಬರೂ ದುರ್ಗಾಪುರದ ಕಾರ್ಮಿಕ ಚಳವಳಿಯ ಹುತಾತ್ಮರಾದರು.

ಇಂದು, ದುರ್ಗಾಪುರ ಅಪಾಯದ ಅಂಚಿನಲ್ಲಿದೆ. ಅಲ್ಲಿ ಕಾರ್ಖಾನೆಗಳು ಸ್ಥಬ್ಧವಾಗಿವೆ. ತೃಣಮೂಲ ಸರ್ಕಾರ ಕಾರ್ಮಿಕರ ಕಷ್ಟಗಳಿಗೆ ಸ್ಪಂದಿಸುತ್ತಿಲ್ಲ. ನಗರದ ಕಾರ್ಮಿಕ ಪರಂಪರೆಯ ಬಗ್ಗೆ ಕಾಳಜಿ ಉಳ್ಳವರು ಅದರ ಭವಿಷ್ಯದ ಬಗ್ಗೆ ಚರ್ಚಿಸಲು ಸಭೆ ನಡೆಸುವವರ ಮೇಲೆ ಗೂಂಡಾಗಳ ಜೊತೆಯಲ್ಲಿ ಪೋಲೀಸರೂ ಹಲ್ಲೆ ಮಾಡುತ್ತಾರೆ.

ಈ ನಗರ ಯಾರಿಗೆ ಸೇರಿದ್ದು? ಎಂಬ ಪ್ರಶ್ನೆ ಎತ್ತಿರುವ ಹದಿಮೂರು ಕಾರ್ಮಿಕ ಸಂಘಟನೆಗಳು ಒಂದು ಜಂಟಿ ವೇದಿಕೆಯಡಿಯಲ್ಲಿ ಹೋರಾಟ ಆರಂಭಿಸಿವೆ. ಕೊಳೆಗೇರಿಗಳಲ್ಲಿ ವಾಸಿಸುವವರಿಗೆ ಮನೆ ನಿರ್ಮಿಸಿಕೊಡುವಂತೆ ಕೊಟ್ಟಿದ್ದ ಭರವಸೆಯನ್ನು ಈಡೇರಿಸುವಂತೆ ಮುನಿಸಿಪಾಲಿಟಿಯ ಅಧಿಕಾರಗಳನ್ನು ಒತ್ತಾಯಿಸಲು ಹೋರಾಟ ಆರಂಭಿಸಿದ್ದಾರೆ. ಹೋರಾಟದ ಭಾಗವಾಗಿ ದೀರ್ಘ ನಡಿಗೆಯು ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ. ಹುತಾತ್ಮರಾದ ಷೇಕ್ ಜಬ್ಬಾರ್ ಮತ್ತು ಅಶಿಂ ದಾಸ್‌ಗುಪ್ತಾ ಅವರ ಸ್ಮರಣೆಯಲ್ಲಿ, ನಗರದ ಜನವಾದಿ ಪರಂಪರೆಯನ್ನು ಉಳಿಸಲು ಕಾರ್ಮಿಕರು ಹೋರಾಟ ನಡೆಸುತ್ತಿದ್ದಾರೆ.

ಮಕ್ಕಳ ಕಳ್ಳ ಸಾಗಾಣಿಕೆಯಲ್ಲಿ ಬಿಜೆಪಿ ಮುಖಂಡ!



ಪಶ್ಚಿಮ ಬಂಗಾಲದಲ್ಲಿ ಇತ್ತೀಚೆಗೆ ಬೆಳಕಿಗೆ ಬಂದ ಹಸುಳೆಗಳ ಕಳ್ಳ ಸಾಗಾಣಿಕೆಯ ಹಗರಣದಲ್ಲಿ ನಾಲ್ಕು ಡಾಕ್ಟರುಗಳನ್ನು ಬಂಧಿಸಲಾಗಿದೆ. ಅವರಲ್ಲಿ ಒಬ್ಬ ಡಾ. ದಿಲೀಪ್ ಘೋಷ್ ಬಿಜೆಪಿಯ ರಾಜ್ಯ ಮಟ್ಟದ ಮುಖಂಡರು. ಕಳೆದ ವರ್ಷ ಬಿಧಾನ್‌ನಗರ್ ಮುನಿಪಲ್ ಕಾರ್ಪೊರೇಷನ್ ಚುನಾವಣೆಗಳಲ್ಲಿ ಈತ ಬಿಜೆಪಿ ಟಿಕೆಟ್‌ನಲ್ಲಿ ಸ್ಪರ್ಧಿಸಿದ್ದರು.

ದಿಲೀಪ್ ಘೋಷ್ ಮತ್ತು ಆತನೊಂದಿಗೆ ಬಂಧಿತನಾದ ಇನ್ನೊಬ್ಬ ಡಾಕ್ಟರ್ ಈ ಹಸುಳೆಗಳ ಕಳ್ಳ ಸಾಗಾಣಿಕೆಯಲ್ಲೆ ದೀರ್ಘ ಕಾಲದಿಂದ ನಿರ್ಣಾಯಕ ಪಾತ್ರ ವಹಿಸಿದವರು ಎಂದು ಅವರನ್ನು ವಿಚಾರಣೆ ಮಾಡಿದ ಸಿಐಡಿ ಅಧಿಕಾರಿಗಳು ಹೇಳಿದ್ದಾರೆ. ದಿಲೀಪ್ ಘೋಷ್ ಈ ಹಿಂದೆ ಸರಕಾರೀ ಆಸ್ಪತ್ರೆ ಆರ್ ಜಿ ಕರ್ ಮೆಡಿಕಲ್ ಕಾಲೇಜ್ ಅಂಡ್ ಹಾಸ್ಪಿಟಲ್‌ನಲ್ಲಿ ಕೆಲಸ ಮಾಡುತ್ತಿದ್ದರು ಎನ್ನಲಾಗಿದೆ.

ಈತನನ್ನು ಎಲ್ಲ ಹುದ್ದೆಗಳಿಂದ ಸದ್ಯಕ್ಕೆ , ಆತ ತಪ್ಪಿತಸ್ಥನಲ್ಲ ಎಂದು ಸಾಬೀತಾಗುವ ವರೆಗೆ ಪಕ್ಷದ ಎಲ್ಲ ಹುದ್ದೆಗಳಿಂದ ಅಮಾನತು ಮಾಡಲಾಗಿದೆ ಎಂದಿರುವ ಬಿಜೆಪಿ ರಾಜ್ಯ ಅಧ್ಯಕ್ಷರು, ಅದೇ ಉಸಿರಿನಲ್ಲಿ ಅವರು ತಮ್ಮ ವೃತ್ತಿ ಜೀವನದಲ್ಲಿ ಏನು ಮಾಡುತ್ತಿದ್ದಾರೆ ಎಂಬುದು ಬಿಜೆಪಿಗೆ ಸಂಬಂಧಪಟ್ಟದ್ದಲ್ಲ(!) ಎಂದು ಹೇಳಿರುವುದಾಗಿ ಪಿಟಿಐ ವರದಿ ಮಾಡಿದೆ.

ಈ ದುರ್ವ್ಯವಹಾರದಲ್ಲಿ ತೊಡಗಿರುವವರ ವಿರುದ್ಧ ತಕ್ಷಣವೇ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಪಶ್ಚಿಮ ಬಂಗಾಲದ ಜನವಾದಿ ಮಹಿಳಾ ಸಂಘಟನೆ ನವಂಬರ್ 30ರಂದು ಮತಪ್ರದರ್ಶನ ನಡೆಸಿತು.



ಬೆಂಗಳೂರು



ಹಾಸನ



ಮಂಗಳೂರು

'ಸಮಾಜವಾದ ಇಲ್ಲವೇ ಸಾವು ಎಂದು ಜಯಿಸಿ ಬದುಕಿದವ ಕ್ಯಾಸ್ಟ್ರೋ'

'ನನ್ನನ್ನು ಕೊಲ್ಲಬಹುದು ಆದರೆ, ನನ್ನ ಚಿಂತನೆಗಳನ್ನು ಕೊಲ್ಲಲಾಗದು ಎಂದು ಸಾಮ್ರಾಜ್ಯಶಾಹಿಗೆ ಎದೆಯೊಡ್ಡಿ ಸಮಾಜವಾದ ಇಲ್ಲವೇ ಸಾವು ಎಂದು ಜಯಿಸಿ ಬದುಕಿದ್ದವರು ಕ್ಯೂಬಾದ ನೇತಾರ ಫಿಡಲ್ ಕ್ಯಾಸ್ಟ್ರೋ' ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರಾದ ಕೆ.ಪ್ರಕಾಶ್ ತಿಳಿಸಿದರು.

ಕ್ಯೂಬಾದ ಕಮ್ಯೂನಿಸ್ಟ್ ನಾಯಕ ಹಾಗೂ ಸಾಮ್ರಾಜ್ಯಶಾಹಿಗೆ ಎದೆಯೊಡ್ಡಿ ನಿಂತಿದ್ದ ಫಿಡಲ್ ಕ್ಯಾಸ್ಟ್ರೋರವರಿಗೆ ನವೆಂಬರ್ 28ರಂದು ಬೆಂಗಳೂರು ಸಿಐಟಿಯು ಕಛೇರಿ 'ಸೂರಿ ಭವನದಲ್ಲಿ ಸಿಪಿಐ(ಎಂ) ಜಿಲ್ಲಾ ಸಮಿತಿಗಳು ಹಮ್ಮಿಕೊಂಡಿದ್ದ ಶ್ರದ್ಧಾಂಜಲಿಯಲ್ಲಿ ಅವರು ಮಾತನಾಡಿದರು.

ಮುಂದುವರೆದು ಮಾತನಾಡಿದ ಅವರು ಅಮೇರಿಕಾದಂತಹ ಸಾಮ್ರಾಜ್ಯಶಾಹಿ ಶಕ್ತಿಯನ್ನು ಎದುರು ಹಾಕಿಕೊಳ್ಳಲು ವಿಶ್ವದ ಬಹುತೇಕ ರಾಷ್ಟ್ರಗಳು ಹಿಂಜರಿಯುತ್ತಿರುವ ಸಂದರ್ಭದಲ್ಲಿ ಅದನ್ನು ಮೀರಿ ಕ್ಯೂಬಾದಂತಹ ಅತಿ ಸಣ್ಣ ದೇಶದ ನಾಯಕನಾಗಿ ಅಮೇರಿಕಾವನ್ನು ಎದುರು ಹಾಕಿಕೊಂಡಿದ್ದ ಕ್ಯಾಸ್ಟ್ರೋ, ನನ್ನ ದೇಶ ವಿಮುಕ್ತಿಯಾಗಬೇಕು ಇಲ್ಲ ನಾನು ಸಾಯಬೇಕು ಎಂದು ಹೋರಾಡಿ ಬದುಕಿದಂತಹ ವ್ಯಕ್ತಿಯಾಗಿದ್ದರು ಎಂದು ತಿಳಿಸಿದರು.

ಅಮೇರಿಕಾದ ದಿಗ್ಬಂಧನದ ನಂತರ ಕ್ಯೂಬಾ ಅಸಹಾಯಕ ಸ್ಥಿತಿಗೆ ತಲುಪಿತು. ಸಹಾಯ ಹಸ್ತ ನೀಡುತ್ತಿದ್ದ ದೇಶಗಳೆಲ್ಲ ಸಹಾಯವನ್ನು ನಿಲ್ಲಿಸಿದವು. ವ್ಯಾಪಾರ ವಹಿವಾಟು ಕುಸಿಯಿತು. ಆರೋಗ್ಯ ತೀವ್ರ ಹದಗೆಟ್ಟಿತು. ಆದರೆ, ಈ ಸಂದರ್ಭದಲ್ಲಿ ಧೃತಿಗೆಡದೆ ಸಂಪೂರ್ಣವಾಗಿ ದೇಶದಲ್ಲಿಯೇ ಎಲ್ಲವನ್ನೂ ಉತ್ಪಾದಿಸಲು ಪ್ರಾರಂಭಿಸಿದರು. ಅದರ ಪರಿಣಾಮವಾಗಿ ಇಂದು ಕ್ಯೂಬಾ ಆರೋಗ್ಯದಲ್ಲಿ ಮುಂದಿದೆ, ಶಿಕ್ಷಣ ಕ್ಷೇತ್ರದಲ್ಲಿ ಶೇ.99 ರಷ್ಟು ಪ್ರಮಾಣದಲ್ಲಿ ಮುಂದಿದೆ, ಸಮಾನ ಹಂಚಿಕೆ ಪದ್ಧತಿಯಿದೆ.

ಇಂದು ವಿಶ್ವದ ಬಹುತೇಕ ರಾಷ್ಟ್ರಗಳು ಬಲಪಂಥದತ್ತ ಸಾಗುತ್ತಿದ್ದು, ರಷ್ಯಾ ಸಹ ಅದರಿಂದ ಹೊರತಾಗಿಲ್ಲ, ಹೀಗಾಗಿ ಭಾರತವನ್ನು ಸಮಾಜವಾದಿ ರಾಷ್ಟ್ರ ಮಾಡುವ ನಿಟ್ಟಿನಲ್ಲಿ ನಾವೆಲ್ಲರೂ ಪ್ರತಿಜ್ಞೆ ಸ್ವೀಕರಿಸಿ, ತ್ಯಾಗ, ಬಲಿದಾನಕ್ಕೂ ಸಿದ್ಧರಾದಾಗ ಮಾತ್ರ ಕ್ಯಾಸ್ಟ್ರೋಗೆ ನಿಜವಾದ ಶ್ರದ್ಧಾಂಜಲಿ ಅರ್ಪಿಸಿದಂತಾಗುತ್ತದೆ ಎಂದು ನುಡಿದರು.

ಸಭೆಯಲ್ಲಿ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಗೌರಮ್ಮ, ಮುಖಂಡರಾದ ಕೆ.ಎಸ್.ವಿಮಲಾ, ಸಮುದಾಯ ಸಂಘಟನೆಯ ಟಿ. ಸುರಂದ್ರರಾವ್, ದಲಿತ ಹಕ್ಕುಗಳ ಸಮಿತಿಯ ಗೋಪಾಲಕೃಷ್ಣ ಅರಳಹಳ್ಳಿ, ಮಾತನಾಡಿದರು.

ಹಾಸನದಲ್ಲಿ ನಡೆದ ಸಭೆಯಲ್ಲಿ ಬ್ಯಾನರ್‌ನಲ್ಲಿ ಎಲ್ಲಿಯೂ ಶ್ರದ್ಧಾಂಜಲಿ ಸಭೆ ಎಂದು ಇರಲಿಲ್ಲ, ಬದಲಿಗೆ ಕ್ಯಾಸ್ಟ್ರೋ ರವರ ಪ್ರಸಿದ್ಧ ಮಾತು "ವಿದಾಯ ಸಂಗಾತಿಗಳೇ, ಸಂಘರ್ಷ ಮುಂದುವರೆಸಿ, ಕ್ರಾಂತಿ ಚಿರಾಯುವಾಗಲಿ" ಎಂದಷ್ಟೆ ಇತ್ತು, ಜೊತೆಗೆ ಫಿಡಲ್ ಕ್ಯಾಸ್ಟ್ರೋರವರ ಚಿಂತನೆಗಳನ್ನು ಬಿಂಬಿಸುವ ಪೋಸ್ಟರ್‌ಗಳನ್ನು ಪ್ರದರ್ಶಿಸಲಾಯಿತು.

ಹಾಸನದ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಹಮ್ಮಿಕೊಳ್ಳಲಾಗಿತ್ತು. ಮೊದಲಿಗೆ ಕ್ಯಾಸ್ಟ್ರೋ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಒಂದು ನಿಮಿಷ ಮೌನಾಚರಿಸಿದರು. ಕೊನೆಯಲ್ಲಿ ಕ್ಯಾಸ್ಟ್ರೋ ಕುರಿತಾದ ಒಂದು ಸಾಕ್ಷ್ಯಚಿತ್ರ ಮತ್ತು ಭಾರತೀಯ ಪತ್ರಕರ್ತರೊಬ್ಬರು ದೂರದರ್ಶನಕ್ಕಾಗಿ ನಡೆಸಿದ ಸಂದರ್ಶನವನ್ನು ಪ್ರದರ್ಶಿಸಲಾಯಿತು. ಇವು ಸಭೆಗೆ ಬಂದವರಿಗೆ ಸ್ಫೂರ್ತಿ ತುಂಬಿದವು.

ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ಭಾರತ ವಿದ್ಯಾರ್ಥಿ ಫೆಡರೇಷನ್ ಘಟಕದ ವತಿಯಿಂದ ನವೆಂಬರ್ 28ರಂದು ಕಗ್ಗತ್ತಲ ಸಂಜೆ ಹೊತ್ತಿನಲ್ಲಿ ಮೇಣದ ಬತ್ತಿ ಬೆಳಗಿಸುವ ಮೂಲಕ ಭಾವಪೂರ್ಣ ಶ್ರದ್ಧಾಂಜಲಿಯನ್ನು ವಿದ್ಯಾರ್ಥಿಗಳು ಕ್ಯಾಸ್ಟ್ರೋರವರಿಗೆ ಅರ್ಪಿಸಿದರು.

ಎಸ್‌ಎಫ್‌ಐ ನೇತೃತ್ವದಲ್ಲಿ ಹಾವೇರಿಯಲ್ಲಿ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಜಿಲ್ಲಾಧ್ಯಕ್ಷರಾದ ರೇಣುಕಾ ಕಹಾರ, ಜಿಲ್ಲಾ ಕಾರ್ಯದರ್ಶಿ ಸುಭಾಸ ಎಂ ಮಾತನಾಡಿದರು. ಮುಖಂಡರಾದ ಬಸನಗೌಡ ಎನ್.ಬಿ., ಪ್ರದೀಪ ಕುಮಾರ್ ಸೇರಿದಂತೆ ವಿವಿಧ ಕಾಲೇಜಿ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮಂಗಳೂರಿನಲ್ಲಿ ನವೆಂಬರ್ 29ರಂದು ಎಸ್‌ಎಫ್‌ಐ, ಡಿವೈಎಫ್‌ಐ ನೇತೃತ್ವದಲ್ಲಿ ಕಾರ್ಯಕರ್ತರು ಮೇಣದ ಬತ್ತಿ ಬೆಳಗಿಸುವ ಮೂಲಕ ಗೌರಾವಾರ್ಪಣೆ ಸಲ್ಲಿಸಿದರು.

ನವೆಂಬರ್ 27ರಂದು ರಾಯಚೂರು ಜಿಲ್ಲೆ ಜಾಲಹಳ್ಳಿಯಲ್ಲಿ ಎಸ್.ಎಫ್.ಐ. ನೇತೃತ್ವದಲ್ಲಿ ಶ್ರದ್ಧಾಂಜಲಿ ಸಭೆಯನ್ನು ನಡೆಸಲಾಯಿತು. ಕೆಪಿಆರ್‌ಎಸ್, ಸಿಐಟಿಯು ಮುಖಂಡರು ಭಾಗವಹಿಸಿದ್ದರು.



ಹಾವೇರಿ



ಮೈಸೂರು

ಭಾರತ ಕಳುಹಿಸಿದ ಗೋಧಿ........ ಪುಟ 8 ರಿಂದ

10,105 ಟನ್ ಗೋಧಿಯನ್ನು ಮಾತ್ರ ಕಳುಹಿಸಿಲ್ಲ. ಬದಲಾಗಿ 10,105 ಟನ್ ಸೌಹಾರ್ದತೆಯನ್ನು 10,105 ಟನ್ ನೈತಿಕ ಬೆಂಬಲವನ್ನು ಕಳುಹಿಸಿದ್ದೀರಿ' ಎಂದರು.

'10105 ಟನ್ ಗೋಧಿ ಎಂದರೆ ಎಷ್ಟಾಗುತ್ತೆ ಗೊತ್ತೇ? ಇಷ್ಟು ಪಡೆಯಲು ನಾವು 10,500 ಎಕರೆ ಪ್ರದೇಶದಲ್ಲಿ ಕಬ್ಬು ಬೆಳೆದು ಸಕ್ಕರೆ ಉತ್ಪಾದಿಸಬೇಕು. ಭಾರತದಲ್ಲಿ ಇಷ್ಟು ಗೋಧಿ ಬೆಳೆಯಲು ಎಷ್ಟು ಶ್ರಮ ಬೇಕು ಎಂಬುದು ನಮಗೆ ಗೊತ್ತಿಲ್ಲ. ಆದರೆ ಈ ಉತ್ಪಾದನೆಯಲ್ಲಿ ಎಷ್ಟು ಜನ ಭಾಗವಹಿಸಿದ್ದರು ಎಂಬುದನ್ನು ನಾವು ಊಹಿಸಬಲ್ಲೆವು'. 'ಈ 10105 ಟನ್ ಗೋಧಿಯಿಂದ ನೂರು ಗ್ರಾಂನ ಎಂಟು ಕೋಟಿ ಉತ್ತಮ ಬ್ರೆಡ್ ಸುರುಳಿಗಳನ್ನು ತಯಾರಿಸಬಹುದು. ಕ್ಯೂಬಾದ ಪ್ರತಿಯೊಬ್ಬರಿಗೆ ಒಂದು ವಾರ ಅತ್ಯುತ್ತಮ ಬ್ರೆಡ್ ನೀವು ನೀಡುತ್ತಿದ್ದೀರಿ' ಎಂದರು.

ಕ್ಯೂಬಾ ಎಂಬ ಪುಟ್ಟ ದೇಶ ಜಗತ್ತಿನ ಎಲ್ಲಾ ದೇಶಗಳ ಮೇಲೆ ಸವಾರಿ ಮಾಡಲು ಹೊರಟಿರುವ ಅಮೇರಿಕಾದ ವಿರುದ್ಧ ನಡೆಸುತ್ತಿರುವ ಹೋರಾಟ ಕೇವಲ ಭಾರತದಿಂದ ಮಾತ್ರವಲ್ಲ ಜಗತ್ತಿನ ಮೂಲೆ ಮೂಲೆಗಳಿಂದ ನೆರವು ಹರಿಯುವಂತೆ ಮಾಡಿದೆ.

ಭಾರತದ ಮೂಲೆಮೂಲೆಗಳಿಂದ ಸೋಪ್‌ಗಳ ಹೊಳೆಯೇ ಹರಿಯಿತು. ಭಾರತಕ್ಕೆ ಬಂದಿದ್ದ ಕ್ಯೂಬಾ ಇನ್‌ಸ್ಟಿಟ್ಯೂಟ್‌ನ ಅಧ್ಯಕ್ಷ ಸರ್ಜಿಯೋ ಕೊ-ರಿಯೇ ಕೇರಿ ಅವರಿಗೆ ಭಾರತದ ಜನತೆ 3 ಕೋಟಿ ಸಾಬೂನು ಬಿಲ್ಲೆಗಳನ್ನು ಅರ್ಪಿಸಿದರು. ಕ್ಯೂಬಾದ ಕಣ್ಣಂಚು ಒದ್ದೆಯಾಯಿತೇನೋ. ಸರ್ಜಿಯೋ ಕೊರಿಯೇ ಕೇರಿ ಮಾರ್ಕ್ಸ್‌ವಾದಿ ಕಮ್ಯುನಿಷ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಹರಿಕಿಷನ್ ಸಿಂಗ್ ಸುರ್ಜಿತ್ ಅವರಿಗೆ ಪತ್ರ ಬರೆದರು – 'ಕ್ಯೂಬಾದ ಜನತೆಯ ಈ ನಿರ್ಣಾಯಕ ಕಾಲಘಟ್ಟದಲ್ಲಿ ಭಾರತ ನಮ್ಮ ಪರವಾಗಿ ನಡೆಸುತ್ತಿರುವ ಪ್ರಯತ್ನಗಳನ್ನು ನಾವು ನೆನಪಿಸಿಕೊಳ್ಳುತ್ತೇವೆ. ಈ ದಿನಗಳ ಇತಿಹಾಸ ಬರೆಯುವಾಗ ನಿಸ್ಸಂಶಯವಾಗಿಯೂ ಕ್ರಾಂತಿಕಾರಿ ಕ್ಯೂಬಾದ ಶ್ರಮಜೀವಿಗಳ ಗುರಿಸಾಧನೆಗೆ ವಿಶ್ವಾದ್ಯಂತ ಮೂಡಿಬಂದಿರುವ ಮಾನವ ಸೌಹಾರ್ದದ ಅಗಣಿತ ಕೊಡುಗೆಗಳು ಅಲ್ಲಿ ಪ್ರತಿಬಿಂಬಿತವಾಗುತ್ತದೆ'.

ಭಾರತ ಮತ್ತು ಕ್ಯೂಬಾ ಸೌಹಾರ್ದತಾ ಸಂಘಟನೆ 1995ರಲ್ಲಿ ಕ್ಯೂಬಾಗೆ ಬೆಂಬಲ ಸಾರಲು ಪ್ರಥಮ ಏಷ್ಯಾ ಪೆಸಿಫಿಕ್ ಪ್ರಾದೇಶಿಕ ಸಮ್ಮೇಳನವನ್ನು ನಡೆಸಿತು. ಮೂರು ದಿನಗಳ ಕಾಲ ನಡೆದ ಸಭೆಯಲ್ಲಿ ಕ್ಯೂಬಾದ ಪ್ರೀತಿಯನ್ನು ಹಂಚಿಕೊಳ್ಳಲಾಯಿತು. ಕ್ಯೂಬಾದ ನೆನಪು ಸದಾ ಹಸಿರಾಗಿ ಉಳಿಯಲು ಕ್ಯೂಬಾದ ಮಹಾನ್ ಹೋರಾಟಗಾರ ಜೋಸ್ ಮಾರ್ಟಿ ಅವರ ಪ್ರತಿಮೆಯನ್ನು ಸ್ಥಾಪಿಸಲಾಯಿತು. ಕ್ಯೂಬಾ ಕುರಿತ ಪುಸ್ತಕಗಳ ಬಿಡುಗಡೆ, ಕ್ಯೂಬಾ ಚಲನಚಿತ್ರ ಉತ್ಸವ, ಕ್ಯೂಬಾ ವಸ್ತುಪ್ರದರ್ಶನ ನಡೆಯಿತು.

ಕ್ಯಾಸ್ಟ್ರೋ ಮಾತು ನಿಜವಾಯಿತು – ಸೌಹಾರ್ದತೆ ಎಂಬುದು ರಕ್ತದಾನದಂತೆ. ಕಪ್ಪು ಅಥವಾ ಬಿಳಿ, ಆಸ್ತಿಕ ಅಥವಾ ನಾಸ್ತಿಕ, ಪುರುಷ ಇಲ್ಲವೇ ಮಹಿಳೆ, ಬಡವ ಇಲ್ಲವೇ ಶ್ರೀಮಂತ ಎಂಬ ಬೇಧ ಇರುವುದಿಲ್ಲ. ಪ್ರಾಣ ಉಳಿಸಲು ನೀಡುವ ಎಲ್ಲಾ ರಕ್ತ ಕೆಂಪು. ಅಂತೆಯೇ ನಿಮ್ಮ ಈ ಪ್ರೀತಿ.

●

ಹಡಗದ ತುಂಬಾ ಗೋದಿಯನ್ನು ಕ್ಯಾಸ್ಟ್ರೊ ಅವರಿಗೆ ಕೊಡಲು ಹೋಗಿದ್ದ ಭಾರತದ ತಂಡದಲ್ಲಿ ಕಾ. ಸುರ್‌ಜೀತ್ ಜತೆಗೆ (ಈಗಿನ ಪೊಲಿಟ್ ಬ್ಯೂ-ರೊ ಸದಸ್ಯ) ಕಾ. ಬೇಬಿಯವರು ಇದ್ದರು. ಕ್ಯಾಸ್ಟ್ರೊ ನಿಧನದ ಸಂದರ್ಭದಲ್ಲಿ ಅವರ ಜತೆಗಿನ ಭೇಟಿ ನೆನಪು ಮಾಡಿಕೊಳ್ಳುತ್ತಾ, ಆ ಸಂಜೆ ಔತಣಕೂಟದಲ್ಲಿ ಅವರ ಹಾಸ್ಯ ಚಟಾಕಿ ನೆನಪಿಸಿಕೊಂಡಿದ್ದಾರೆ. ಗೋಧಿಗೆ ಬದಲಾಗಿ ಕ್ಯೂಬಾ ಭಾರತಕ್ಕೆ ಏನು ಮಾಡಬಹುದು ಎಂಬ ಕ್ಯಾಸ್ಟ್ರೊ ಪ್ರಶ್ನೆಗೆ, ಬೇಬಿ "ನೀವು ನಮಗೆ ಕ್ರೀಡೆಯಲ್ಲಿ ಸಹಾಯ ಮಾಡಬಹುದು" ಎಂದರಂತೆ. "ಭಾರತ-ಕ್ಯೂಬಾ ಕ್ರೀಡಾ ಸ್ಪರ್ಧೆ ಏರ್ಪಡಿಸಬಹುದು. ಭಾರತದ ಜತೆ ಬಾಕ್ಸಿಂಗ್ ಸರಿ ಹೋಗಲಿಕ್ಕಿಲ್ಲ. ನಮ್ಮ ಬಾಕ್ಸರುಗಳು ನಮಗೆ ಸಹಾಯ ಮಾಡಿದ ಭಾರತೀಯರನ್ನು ಚಚ್ಚುವುದು ಖಂಡಿತಾ ಸರಿಯಲ್ಲ! ಹಾಂ! ಫುಟ್‌ಬಾಲ್ ನಲ್ಲಿ ನಮ್ಮ ಟೀಂ ದುರ್ಬಲವಾಗಿದೆ. ಆದ್ದರಿಂದ ಫುಟ್‌ಬಾಲ್ ಮ್ಯಾಚ್ ಏರ್ಪಡಿಸಬಹುದು" ಎಂದು ಹಾಸ್ಯ ಚಟಾಕಿ ಹಾರಿಸಿದರಂತೆ.

ಒಬ್ಬ ಸೇಲ್ಸ್ ಮನ್ ಒಬ್ಬ ಎಸ್ಕಿಮೋಗೆ ಮೇಲಿಂದ ಮೇಲೆ ರೆಫ್ರಿಜಿರೇಟರ್-ಗಳನ್ನು ಮಾರಾಟ ಮಾಡ್ತಾನೆಂದರೆ ಆ ಸೇಲ್ಸ್ ಮನ್ನನ ಪ್ರತಿಭೆಯನ್ನು ಮೆಚ್ಚದೆ ಇರಲು ಸಾಧ್ಯವೇ?

– ಪಿ ಮಹಮ್ಮದ್

(ಇದು ಅನಾಣ್ಯೀಕರಣದ ಬಗ್ಗೆ ತುಘಲಕ್ ಫರ್ಮಾನುಗಳ ಬಗ್ಗೆ ಕಮೆಂಟು ಅಲ್ಲ!)

JANASHAKTHI KANNADA VARA PATRIKE DEC 11, 2016 Price : Rs. 10/- RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ಜೈಭೀಮ್ + ಲಾಲ್ ಸಲಾಂ = ಇಂಕ್ವಿಲಾಬ್ ಜಿಂದಾಬಾದ್

ವಿನೋದ ಶ್ರೀರಾಮಪುರ



ಸಮಾನತೆಗಾಗಿ ಅಂಬೇಡ್ಕರ್‌ರವರು ಹೋರಾಟ ನಡೆಸಿದರು. ಆದರೆ ಅದು ಇಂದು ಪೂರ್ಣಗೊಂಡಿಲ್ಲ, ಕೆಂಪು ಮತ್ತು ನೀಲಿ ಒಂದು ಗೂಡಿದರೆ ಸ್ವಾಭಿಮಾನದ ಸಮಾನತೆಯನ್ನು ತರಲು ಸಾಧ್ಯವಿದೆ. ಸಂವಿಧಾನದ ಉಲ್ಲಂಘನೆಯಾಗುತ್ತಿರುವ ಈ ದಿನಗಳಲ್ಲಿ ದಲಿತ ಚಳುವಳಿಯ ಜೈಭೀಮ್ ಹಾಗೂ ಕಮ್ಯೂನಿಸ್ಟ್ ಚಳುವಳಿಯ ಲಾಲ್ ಸಲಾಂ ಒಟ್ಟಿಗೆ ಹೋರಾಟಕ್ಕೆ ಇಳಿದರೆ ಭಗತ್ ಸಿಂಗ್ ಆಶಯದ ಇಂಕ್ವಿಲಾಬ್ ಜಿಂದಾಬಾದ್ ಪೂರ್ಣಗೊಳ್ಳುತ್ತದೆ ಎಂದು ರಾಜ್ಯಸಭಾ ಸದಸ್ಯರು ಹಾಗೂ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾಂ॥ಸೀತಾರಾಂ ಯೆಚೂರಿರವರು ತಿಳಿಸಿದರು.

ಅವರು ನವೆಂಬರ್ 26ರಂದು ಬೆಂಗಳೂರಿನಲ್ಲಿ ಹಮ್ಮಿಕೊಂಡಿದ್ದ ಸಂವಿಧಾನ ಸಮರ್ಪಣಾ ದಿನದ ಅಂಗವಾಗಿ ಬೃಹತ್ ಸ್ವಾಭಿಮಾನಿ ರ್‍ಯಾಲಿಯನ್ನು ಉದ್ದೇಶಿಸಿ ಮಾತನಾಡಿದರು.

ಮುಂದುವರೆದು ಮಾತನಾಡಿದ ಅವರು ಕಳೆದ ಎರಡು ವರ್ಷಗಳಿಂದ ಕೇಂದ್ರದಲ್ಲಿ ಅಧಿಕಾರ ಹಿಡಿದ ಬಿಜೆಪಿ ಸರ್ಕಾರದ ಈ ಅವಧಿಯಲ್ಲಿ ದೇಶದಲ್ಲಿ ದಲಿತರು ಹಾಗೂ ಮುಸ್ಲಿಮರ ಮೇಲೆ ಧಾಳಿಗಳು ಹೆಚ್ಚಾಗುತ್ತಿವೆ. ಆರ್‌ಎಸ್‌ಎಸ್‌ನ ಮುಖ್ಯ ಉದ್ದೇಶ ಡಾ॥ಬಿ.ಆರ್.ಅಂಬೇಡ್ಕರ್‌ರವರ ಸಂವಿಧಾನ ಬದಲಿಸಿ ಹಿಂದುತ್ವ ಮಾದರಿ ಸಂವಿಧಾನ ತರುವುದು. ಅಂಬೇಡ್ಕರ್ ಸಂವಿಧಾನವನ್ನು ನಾವು ಪುಸ್ತಕವಾಗಿ ಅಲ್ಲ, ಸಮಾನತೆಯ ಹೋರಾಟದ ಸಂಕೇತವಾಗಿ ಸ್ವೀಕರಿಸಿಬೇಕು. ಅಭಿವೃದ್ಧಿ ಪಥದತ್ತ ಮುನ್ನಡೆಸುವ ಜೈಭೀಮ್ ಮತ್ತು ಕೆಂಬಾವುಟ ಹೋರಾಟಗಳು ಬಲಿಷ್ಟಗೊಳ್ಳಬೇಕಿದೆ.

ತಲಾಕ್.. ತಲಾಕ್.. ತಲಾಕ್...

ಮೋದಿಗೆ ತಲಾಕ್ ಪರ್ವ ಆರಂಭವಾಗಿದೆ ಮೊದಲ ತಲಾಕ್ ದೆಹಲಿ ವಿಧಾನಸಭಾ ಚುನಾವಣೆ, ಎರಡನೇ ತಲಾಕ್ ಬಿಹಾರ ವಿಧಾನಸಭಾ ಚುನಾವಣೆ, ಮೂರನೇ ತಲಾಕ್ ಮುಂಬರುವ ಉತ್ತರ ಪ್ರದೇಶ ಚುನಾವಣೆಯಲ್ಲಿ ನೀಡಲು ಜನತೆ ಸನ್ನದ್ಧರಾಗಿದ್ದಾರೆ. ಮೂರು ತಲಾಕ್ ಅಷ್ಟೇ ಅಲ್ಲ, ಮತ್ತಷ್ಟು ತಲಾಕ್ ಮೋದಿಗೆ ಸಿಗಲಿದೆ.

ನೋಟುಗಳಲ್ಲೂ ಈಗ 'ಸ್ವಚ್ಛ ಭಾರತ್' ಚಿಹ್ನೆ ಬಂದಿದೆ. ದೇಶದಲ್ಲಿ ಸ್ವಚ್ಛತೆಯನ್ನು ಕಾಪಾಡುವುವವರು ನಾವು. ಶೌಚಾಲಯವನ್ನು ಶುಚಿಗೊಳಿಸುವುದು, ಸತ್ತ ದನವನ್ನು ವಿಲೇವಾರಿ ಮಾಡುವುದು ನಾವು. ಗುಜರಾತ್ ಚಳುವಳಿಯಲ್ಲಿ ನಮಗೆ ಭೂಮಿ ಕೊಡಿ, ಕೆಲಸ ಕೊಡಿ ಎಂದು ಘೋಷಣೆ ಕೂಗಿದವರು ಜೈಭೀಮ್ ಮತ್ತು ಲಾಲ್‌ಸಲಾಂ ಚಳುವಳಿ.

28ರಂದು ದೇಶದ ಎಲ್ಲಾ ವಿರೋ ಧ ಪಕ್ಷಗಳು ಹಮ್ಮಿಕೊಂಡಿರುವ 'ಆಕ್ರೋಶ್ ದಿವಸ್' ಯಶಸ್ವಿಗೊಳಿಸಬೇಕು. ಹಿಂದುತ್ವ ಕೋಮುವಾದದ ವಿರುದ್ಧ ಹೋರಾಟದ ಜೊತೆ ಜೊತೆಗೆ ಆರ್ಥಿಕ ಸಮಸ್ಯೆ ಪ್ರಶ್ನೆಗಳ ಬಗ್ಗೆಯೂ ಹೋರಾಟಗಳು ಬಲಿಷ್ಟಗೊಳ್ಳಲಿ ಎಂದು ಸೀತಾರಾಂ ಯೆಚೂರಿರವರು ಕರೆ ನೀಡಿದರು.

ಹೊಸ ಸಂವಿಧಾನ ನಮಗೆ ಬೇಕಿಲ್ಲ :

ಮುಖ್ಯ ಅತಿಥಿಗಳಾಗಿ ಆಗಮಿಸಿದ ದಲಿತ ಮುಖಂಡರು ಹಾಗೂ ಡಾ॥ಬಿ.ಆರ್.ಅಂಬೇಡ್ಕರ್‌ರವರ ಮೊಮ್ಮಗ ಡಾ॥ ಪ್ರಕಾಶ್ ವೈ. ಅಂಬೇಡ್ಕರ್‌ರವರು ಮಾತನಾಡಿ "ನಮ್ಮ ಸಂವಿಧಾನ ರಚನೆಯು 1946 ರಿಂದ 50 ರವರೆಗೆ ಸಾಕಷ್ಟು ತಯಾರಿಗಳನ್ನು ನಡೆಸಿ ದೇಶದಲ್ಲಿ ಜಾರಿಗೊಳಿಸಲಾಗಿದೆ. ದೇಶದ ವ್ಯವಸ್ಥೆಯಲ್ಲಿ ಭಿನ್ನವಾದ ಗೌಜುಲುಗಳಾಗಿ ಇದ್ದಂತ ಸಂದರ್ಭ, 500ಕ್ಕೂ ಹೆಚ್ಚಿನ ರಾಜ ಆಳ್ವಿಕೆ ವ್ಯವಸ್ಥೆಯಲ್ಲಿ ಅಂ–ದು ದೇಶಕ್ಕೆ ಮತ್ತು ಮುಂದಿನ ದಶಕಗಳ ಸಮಗ್ರ ಕಣ್ಣೋಟವನ್ನು ಇಟ್ಟುಕೊಂಡು ಅಂಬೇಡ್ಕರ್‌ರವರು ಸಂವಿಧಾನವನ್ನು ರಚಿಸಿದರು.

ಆರ್‌ಎಸ್‌ಎಸ್ ನಾಯಕ ಮೋಹತ್ ಭಾಗವತ್‌ಗೆ ನನ್ನ ಒಂದು ಸವಾಲು ಹಾಕುತ್ತೇನೆ. ಅಂಬೇಡ್ಕರ್ ಸಂವಿಧಾನವನ್ನು ಬದಲಿಸಿ ಹಿಂದುತ್ವ ಸಂವಿಧಾನವನ್ನು ರಚಿಸಲು ಹೊರಟಿರುವ ನಿಮಗೆ, ಜಾರಿಗೊಳಿಸಲು ತಯಾರಿಯಲ್ಲಿರುವ ನಿಮ್ಮ ತಂಡಕ್ಕೆ ನಾವು ಸವಾಲೊಡ್ಡುತ್ತೇವೆ. ನಮ್ಮ ಸಂವಿಧಾನವನ್ನು ಬದಲಿಸಲು ಬಿಡುವುದಿಲ್ಲ ಎಂದು.

ಆರ್‌ಎಸ್‌ಎಸ್‌ನಲ್ಲಿರುವ ಹಿಂದುಳಿದ ಜನರಲ್ಲಿ ಅದರ ಬಗ್ಗೆ ಹೆಚ್ಚಿನ ತಿಳುವಳಿಕೆ ಇರುವುದಿಲ್ಲ, ಆದರೆ ಮೇಲ್ ಜಾತಿಯ ಆರ್‌ಎಸ್‌ಎಸ್ ಮಂದಿಯನ್ನು ನೀವು ಕೇಳಿದಾಗ ಬಾಬಾ ಸಾಹೇಬ್ ಸಂವಿಧಾನವನ್ನು ಬದಲಿಸಲು ನಾವು ಸನ್ನದ್ಧರಾಗಿದ್ದೇವೆ ಎಂದು ಹೇಳುತ್ತಾರೆ. ದೇಶದಲ್ಲಿ ಸಾವಿರಾರು ವರ್ಷಗಳಿಂದ ಹಿಂದುತ್ವ ಆಡಳಿತ ಇರಲಿಲ್ಲ. ಈಗ ಬಂದಿದೆ. ನಾವು ಸಂವಿಧಾನವನ್ನು ಬದಲಿಸುತ್ತೇವೆ ಎಂದು ಕಿಡಿ–ಕಾರುತ್ತಾರೆ.

ವಿಭಿನ್ನ ಜನತೆ ಇರುವ ದೇಶದಲ್ಲಿ ಭಾಷೆ, ಜಾತಿ, ಜನಾಂಗದ ಭಿನ್ನತೆ ಇರುವ ದೇಶದಲ್ಲಿ ಹಿಂದುತ್ವ ಸಂವಿಧಾನ ಬೇಕಿಲ್ಲ, ಅಂಬೇಡ್ಕರ್‌ರವರು 'ಮನುಸ್ಮೃತಿ' ಸುಟ್ಟಿದ್ದರು. ಅದರ ವಿರುದ್ಧ ಆಂದೋಲನವನ್ನು ಸಹ ನಡೆಸಿದರು. ಅಂಬೇಡ್ಕರ್ ಸಂವಿಧಾನ ನಮಗೆ ಜಾತಿ ವ್ಯವಸ್ಥೆಯನ್ನು ತೊ ಡೆದು ಹಾಕಲು ಇರುವ ಸಂವಿಧಾನವಾಗಿದೆ. ಸಂವಿಧಾನ ವಿಚಾರಗಳ ಪ್ರಚಾರದ ಜೊತೆಗೆ, ಅದರ ವಿರುದ್ಧದ ನಡೆಯನ್ನು ನಾವು ವಿರೋಧಿಸಬೇಕಿದೆ. ಕರ್ನಾಟಕದಲ್ಲಿ ಹಮ್ಮಿಕೊಂಡಿರುವ ಈ ಬೃಹತ್ ಸ್ವಾಭಿಮಾನಿ ರ್‍ಯಾಲಿಯು ಸಹ ಸಂವಿಧಾನವನ್ನು ಉಳಿಸಲು ನಡೆಸುವ ಹೋರಾಟವಾಗಿದೆ ಎಂದರು.

> 'ಮೋದಿಗೂ ತಟ್ಟುತ್ತಿದೆ ತಲಾಕ್, ಮೊದಲನೆ ತಲಾಕ್ ದೆಹಲಿ, ಎರಡನೇ ತಲಾಕ್ ಬಿಹಾರ, ಮೂರನೇ ತಲಾಕ್ ಮುಂಬರುವ ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಜನತೆ ನೀಡಲಿದ್ದಾರೆ.
>
> **–ಸೀತಾರಾಂ ಯೆಚೂರಿ**
>
> 'ಗುರುಕುಲ, ವೈದಿಕ ಪರಂಪರೆ ಶಿಕ್ಷಣ ನಮಗೆ ಬೇಕಿಲ್ಲ, ಇವು ಜಾತಿ, ಅಸಮಾನತೆ ಹಾಗೇ ಇರುವಂತೆ ನೋಡಿಕೊಳ್ಳುತ್ತದೆ. ಜನತೆಯ ಶಿಕ್ಷಣ ವ್ಯವಸ್ಥೆ ನಮಗೆ ಬೇಕಿದೆ'
>
> **– ಡಾ.ಪ್ರಕಾಶ್ ವೈ ಅಂಬೇಡ್ಕರ್**

ಗುರುಕುಲ ಅಲ್ಲ, ಜನತೆಯ ಶಿಕ್ಷಣ

ಶಿಕ್ಷಣದಲ್ಲಿ ಸರ್ಕಾರದ ಜವಾಬ್ದಾರಿಯು ಕಡಿಮೆಯಾಗುತ್ತಿದೆ. ಹಿಂದುತ್ವ ಮಾದರಿಯ ಶಿಕ್ಷಣ ಇರಬೇಕೆಂದು ಪ್ರಕಾಶ್ ಜಾವೇಡ್ಕರ್ ಎಂಬ ಸಚಿವರು ಹೇಳಿತ್ತಿದ್ದಾರೆ. ಹಿಂದುತ್ವ ಶಿಕ್ಷಣ ಎಂದರೆ ವೈದಿಕ ಪರಂಪರೆಯ ಶಿಕ್ಷಣ, ಗುರುಕುಲ ಶಿಕ್ಷಣ ವ್ಯವಸ್ಥೆ ಅದು, ಇದು ಬ್ರಾಹ್ಮಣ ಕೇಂದ್ರೀತ ಶಿಕ್ಷಣ. ಎಲ್ಲರನ್ನು ಒಳಗೊಳ್ಳುವ ಸಮಾನತೆಯ ಶಿಕ್ಷಣ ಅಲ್ಲ, ಹಿಂದುಳಿದ, ದಲಿತರ ಪರವಾದ ಶಿಕ್ಷಣ ಅಲ್ಲ. ನಮ್ಮ ಶಿಕ್ಷಣ ವ್ಯವಸ್ಥೆ ಉಳಿವಿಗಾಗಿ ನಾವು ಆಜಾದಿ ಮೊಳಗಿಸುತ್ತೇವೆ. ಖೈದಿಗಳು ಆಗುತ್ತೇವೆ.

'ಸಾಂಸ್ಕೃತಿಕ ರಾಷ್ಟ್ರವಾದ'ವನ್ನು ಹೇರಲು ಆರ್‌ಎಸ್‌ಎಸ್ ಹವಣಿಸುತ್ತದೆ. ನಿಮಗೆ ನಾನು ಹೇಳುತ್ತೇನೆ. ನಿಮ್ಮ ಸಾಂಸ್ಕೃತಿಕ ರಾಷ್ಟ್ರವಾದ ಮತ್ತು ನಮ್ಮ ಸಂವಿಧಾನದ ರಾಷ್ಟ್ರವಾದವನ್ನು ದೇಶದ ಜನತೆ ಮುಂದೆ ಕೊಂಡೊಯ್ದಾಗ ಜನತೆಯೇ ತೀರ್ಮಾನಿಸುತ್ತಾರೆ, ಯಾವ ವಾದ 'ಬೇಕೆಂದು.

ದೇಶದಲ್ಲಿ ಕ್ರಾಂತಿ ಸಂಭವಿಸಿದರೂ ಸಹ ಕ್ರಾಂತಿ ಮತ್ತು ನಂತರದಲ್ಲಿ ಜಾತಿಯ ತಾರತಮ್ಯದ ವಿಚಾರ ಬಂದೇ ಬರುತ್ತದೆ. ಅಂತಹ ಆಳವಾಗಿ ಜಾತಿ ಸಮಸ್ಯೆಗಳು ವ್ಯಾಪಕಗೊಂಡಿದೆ. ಇವು ಬಡವರ ಆರ್ಥಿಕತೆ ಉನ್ನತಿಯನ್ನು ಕಡಿಮೆ ಮಾಡುತ್ತವೆ. ದೇಶದ ಆರ್ಥಿಕ ಹಿನ್ನಡೆಗೂ ಜಾತಿಯೇ ಸಮಸ್ಯೆಯಾಗಿದೆ. ಇದು ಬರೀ ದಲಿತರ ಸಮಾವೇಶವಲ್ಲ, ಇಲ್ಲಿ ದಲಿತರು, ಹಿಂದುಳಿದವರು, ಮುಸ್ಲಿಮರು, ಕ್ರೈಸ್ತ ಜನ ಸಮುದಾಯಗಳು ಭಾಗವಹಿಸಿವೆ. ನಾವೆಲ್ಲರೂ ಒಟ್ಟಾಗಿ ಮುಂಬರುವ 2019ರ ಚುನಾವಣೆಯಲ್ಲಿ ಒಂದಾಗಿ ಹಿಂದುತ್ವವಾದಿಗಳನ್ನು ಸೋಲಿಸಲು ಪಣ ತೊಡಬೇಕಿದೆ.

ಹೊಸದಾದ ರೂ.2000 ನೋಟು ಬಂದಾದ ಮೇಲೆ ಮತದ ಮೌಲ್ಯವೂ ಹೆಚ್ಚುತ್ತದೆ. ನಾವು ಹಣಕ್ಕಾಗಿ ಮತಕ್ಕೆ ಬಲಿಯಾಗದೇ, ಮತ್ತಷ್ಟು ಸಮಸ್ಯೆ ಗುರಿಯಾಗದೆ, ತಕ್ಕ ಪಾಠವನ್ನು ಕಲಿಸಬೇಕು. ಮೋದಿ ಅಧಿಕಾರಕ್ಕೆ ಬಂದ ನಂತರದಲ್ಲಿ ಆಗುತ್ತಿರುವ ಸಮಸ್ಯೆಗಳನ್ನು ನೀವು ಗಮನಿಸಬಹುದು. ದೇಶಕ್ಕಾಗಿ ನಾವು ಹೋರಾಟಕ್ಕೆ ಮುಂದಾಗಬೇಕು. ನಮಗಾಗಿ ನಾಯಕರು ಬರುತ್ತಾರೆ ಎಂದು ಸುಮ್ಮನಿರಬಾರದು. ನಮ್ಮ ವೈಯಕ್ತಿಕ ಸಂಗತಿಗಳನ್ನು ಬದಿಗೆ ಸರಿಸಿ ನಾವೆಲ್ಲರೂ ಜೊತೆಗೂಡಿ ಹೋರಾಡಬೇಕೆಂದು ಪ್ರಕಾಶ್ ವೈ. ಅಂಬೇಡ್ಕರ್‌ರವರು ಕರೆ ನೀಡಿದರು.

ಕಾರ್ಯಕ್ರಮದ ಮೊದಲಿಗೆ ದಲಿತ ಸ್ವಾಭಿಮಾನಿ ಸಂಘರ್ಷ ಸಮಿತಿ ರಾಜ್ಯಾಧ್ಯಕ್ಷರಾದ ಆರ್.ಮೋಹನ್‌ರಾಜ್‌ರವರು ಪ್ರಾಸ್ತವಿಕವಾಗಿ ಮಾತುಗಳನ್ನು ಆಡಿದರು. 70 ವರ್ಷದ ಹಿಂದೆಯೇ ಸಂವಿಧಾನವನ್ನು ದೇಶಕ್ಕೆ ಸಮರ್ಪಿಸಿದಾಗ ಮುಂದಿನ 20 ವರ್ಷಗಳಲ್ಲಿ ಜಾತಿ ರಹಿತ, ನಿರುದ್ಯೋಗ ರಹಿತ, ಅಸಮಾನತೆ ರಹಿತ ದೇಶವಾಗಿ ರೂಪುಗೊಳ್ಳಲಿದೆ ಎಂದು ಅಂಬೇಡ್ಕರ್ ತಿಳಿಸಿದರು. ಆದರೆ ಇನ್ನೂ ಅದು ಸಾಧ್ಯವಾಗಿಲ್ಲ. ದೇಶದಲ್ಲಿ ಪ್ರಬಲವಾಗಿ ರೂಪುಗೊಳ್ಳುತ್ತಿರುವ ನೀಲಿ ಹಾಗೂ ಕೆಂಪು ಜಂಡಾ ನೇತೃತ್ವದ ಹೋರಾಟಗಳು ಕರ್ನಾಟಕದಲ್ಲಿ ಬಲಿಷ್ಟಗೊಂಡು ಪರ್ಯಾಯವನ್ನು ರೂಪಿಸಬೇಕಿದೆ ಎಂದು ಕರೆ ನೀಡಿದರು.

ಇಂದಿನ ಸ್ವಾಭಿಮಾನಿ ರ್‍ಯಾಲಿಗೆ ಸುಮಾರು 12ಕ್ಕೂ ಹೆಚ್ಚಿನ ಸಂಘಟನೆಗಳು ರಾಜ್ಯದ ಎಲ್ಲಾ 30 ಜಿಲ್ಲೆಗಳಲ್ಲೂ ಸಂಚರಿಸಿ ಪ್ರಚಾರ ನಡೆಸಿವೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸುನ್ನತ್ ಜಮಾತ್, ಕರ್ನಾಟಕದ ಪ್ರಧಾನ ಕಾರ್ಯದರ್ಶಿ ಸೈಯದ್ ಮಹಮ್ಮದ್ ಇಕ್ಬಾಲ್ ರವರು ಮಾತನಾಡಿ "ನಮ್ಮ ಚಳುವಳಿಯಲ್ಲಿ ಕೆಂಪು, ನೀಲಿ ಮಾತ್ರವಲ್ಲಾ, ಹಸಿರು ಜಂಡಾ ಸಹ ಸೇರಿಕೊಂಡಿದೆ. ಈ ವೇದಿಕೆ ಮೂಲಕ ಮುಸ್ಲಿಂ ಸಂಘಟನೆಗಳು ಸಹ ಹೋರಾಟದಲ್ಲಿ ಕೈ ಜೋಡಿಸಲಿವೆ. ದಲಿತರ ಮೇಲಿನ ದೌರ್ಜನ್ಯದ ವಿರುದ್ಧ ನಾವು ಬೀದಿಗಿಳಿದು ಚಳುವಳಿ ನಡೆಸುತ್ತೇವೆ ಎಂದು ಕರೆ ನೀಡಿದರು.

ಉಪನ್ಯಾಸಕರಾದ ಶ್ರೀಮತಿ ಕಾವಲಮ್ಮ, ಕ್ರೈಸ್ತ ಮುಖಂಡರಾದ ಡಾ॥ಡೇವಿಡ್ ದಾಸ್, ನ್ಯಾಯವಾದಿ ಮಹೇಂದ್ರ ಮಾಂಕಾಳೆ, ದಲಿತ ಕ್ರೈಸ್ತ ಒಕ್ಕೂಟದ ಡಾ॥ಮನೋಹರ್ ಚಂದ್ರಪ್ರಸಾದ್ ಮತ್ತಿತರರು ಮಾತನಾಡಿದರು.

ವೇದಿಕೆಯಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ, ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಾಧ್ಯಕ್ಷರಾದ ಮಾರುತಿ ಮಾನ್ಪಡೆ, ದಲಿತ ಹಕ್ಕುಗಳ ಸಮಿತಿಯ ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಅರಳಹಳ್ಳಿ, ಜಿಲ್ಲಾ ಸಂಚಾಲಕರಾದ ಎನ್.ನಾಗರಾಜ್, ಡಿಎಸ್‌ಎಸ್ ಅಂಬೇಡ್ಕರ್ ವಾದ ಸಂಚಾಲಕರಾದ ಮಾವಳ್ಳಿ ಶಂಕರ್, ಎಸ್‌ಸಿ/ಎಸ್‌ಟಿ ನೌಕರರ ಸಮನ್ವಯ ಸಮಿತಿ ರಾಜ್ಯಾಧ್ಯಕ್ಷರಾದ ಡಿ.ಶಿವಶಂಕರ್, ರಾಜ್ಯ ರೈತ ಸಂಘದ ಕೋಡಿಹಳ್ಳಿ ಚಂದ್ರಶೇಖರ್, ಮತ್ತಿತರ ಮುಖಂಡರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಪಿ.ಎಂ.ಕರನಿಂಗ ರವರು ಮರಾಠಿಯಿಂದ ಅನುವಾದಿಸಿರುವ 'ಒಂದು ವೇಳೆ ಬಾಬಾಸಾಹೇಬ್ ಅಂಬೇಡ್ಕರ್‌ರವರು ಇಲ್ಲದಿದ್ದಿದ್ದರೆ' ಎಂಬ ಪುಸ್ತಕವನ್ನು ಬಿಡುಗಡೆಗೊಳಿಸಿದರು.



ಡಾ॥ ಪ್ರಕಾಶ್ ವೈ. ಅಂಬೇಡ್ಕರ್



ಕಾಂ॥ ಸೀತಾರಾಂ ಯೆಚೂರಿ

JANASHAKTHI KANNADA VARA PATRIKE: Printed by G.V.SRIRAMA REDDY, EMS Bhavana, No.37/A, 8th Cross, Mahalakshmi Layout, BANGALORE-560086 Published by: G.V.SRIRAMA REDDY EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor G.V.SRIRAMA REDDY EMS Bhavana, No.37/A, 8th Cross, Mahalakshmi Layout, BANGALORE-560086 Editor : G.V.SRIRAMA REDDY